ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 2 | ಜನವರಿ 4-10, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ರೈತರನ್ನು ಉಳಿಸಿ- ದೇಶ ಉಳಿಸಿ
ಜನವರಿ 1 - ಪ್ರತಿಜ್ಞಾ ದಿನಾಚರಣೆ





ಆಶಾವಾದದೊಂದಿಗೆ 2021 ರ ಎಡೆಗೆ



ಸಾವಿತ್ರಿ ಬಾಯಿ ಪುಲೆ ಸ್ಮರಣೆ





ಮೂರು ಕೃಷಿ ಕಾಯ್ದೆಗಳು ಜನತೆಯ ವಿರುದ್ಧ ಬಿಜೆಪಿ ವರ್ಗ ದಾಳಿ

ಜೆಡಿ(ಎಸ್) ಅಪ್ರಸ್ತುತ ಆಗುತ್ತಿದೆಯೇ?

ಕೃಷಿ ಕಾಯ್ದೆಗಳ ವಿರುದ್ದ ಕೇರಳ ವಿಧಾನಸಭೆಯ ಸರ್ವಾನುಮತದ ನಿರ್ಣಯ

ಡಿಸೆಂಬರ್ 31 ರಂದು ಕೇರಳ ವಿಧಾನಸಭೆಯ ಒಂದು ವಿಶೇಷ ಅಧಿವೇಶನದಲ್ಲಿ ಕೇಂದ್ರ ಸರಕಾರದ ಮೂರು ಕೃಷಿ ಕಾಯ್ದೆಗಳು ಕಾರ್ಪೊರೇಟ್‌ಗಳಿಗೆ ಕೃಷಿ ವಲಯದ ಮೇಲೆ ಏಕಸ್ವಾಮ್ಯವನ್ನು ನಡೆಸಲು ನೆರವಾಗುವ ಉದ್ದೇಶವನ್ನು ಹೊಂದಿರುವುದರಿಂದ ಅವನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸುವ ಠರಾವನ್ನು ಸರ್ವಾನುಮತದಿಂದ ಅಂಗೀಕರಿಸಿತು. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಂಡಿಸಿದ ಈ ಠರಾವು ಈ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲವನ್ನೂ ಸೂಚಿಸಿತು.

ರೈತರ ಹೋರಾಟ ಮುಂದುವರೆದರೆ ಅದರಿಂದ ಕೇರಳದಂತಹ ರಾಜ್ಯಗಳಿಗೆ ಆಹಾರಧಾನ್ಯಗಳ ಪೂರೈಕೆಯನ್ನು ಪ್ರತಿಕೂಲವಾಗಿ ತಟ್ಟಬಹುದು ಎಂದು ಮುಖ್ಯಮಂತ್ರಿಗಳು, ಈ ಕಾಯ್ದೆಗಳು ರಾಜ್ಯಗಳನ್ನು ತಟ್ಟುವಂತದ್ದಾದರೂ, ಕೇಂದ್ರ ಸರಕಾರ ಇವನ್ನು ತರುವ ಮೊದಲು ರಾಜ್ಯಗಳೊಡನೆ ಸಮಾಲೋಚನೆ ನಡೆಸಿಲ್ಲ. ಕೃಷಿ ವಸ್ತುಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಒದಗಿಸುವ ಹೊಣೆಗಾರಿಕೆಯಿಂದ ಸರಕಾರ ದೂರ ಉಳಿದಿದೆ. ಹೊಸ ಕಾಯ್ದೆಗಳು ರೈತರಿಗೆ ನೆರವಾಗುವುದಿಲ್ಲ, ಕಾರ್ಪೊರೇಟ್‌ಗಳಿಗಷ್ಟೇ ನೆರವಾಗುತ್ತವೆ. ಕಾರ್ಪೊರೇಟೀಕರಣದ ಬದಲು ಕೇಂದ್ರ ಸರಕಾರ ಬೆಳೆಗಳ ಖರೀದಿಯನ್ನು ವಿಕೇಂದ್ರೀಕರಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಜಯನ್ ಹೇಳಿದರು.

ಈಗಾಗಲೇ ರೈತರಿಗೆ ನೆರವಾಗುವ ಕ್ರಮಗಳನ್ನು ಕೈಗೊಂಡಿರುವ ಕೇರಳ ಸರಕಾರ ಕೇಂದ್ರದ ಕೃಷಿ ಕಾನೂನುಗಳಿಗೆ ಪರ್ಯಾಯವಾಗಿ ಒಂದು ಕಾನೂನು ತರುವ ಬಗ್ಗೆ ಪರಿಶೀಲಿಸುತ್ತಿದೆ ಎಂದೂ ಮುಖ್ಯಮಂತ್ರಿಗಳು ಹೇಳಿದರು.



ರಾಜ್ಯಪಾಲ ಆರಿಫ್ ಮಹಮ್ಮದ್ ಖಾನ್ ರವರು ಈ ಮೊದಲು ಈ ಅಧಿವೇಶನವನ್ನು ಕರೆಯಲು ನಿರಾಕರಿಸಿದಾಗ ಅವರನ್ನು ಬಲವಾಗಿ ತರಾಟೆಗೆ ತಗೊಳ್ಳಲಿಲ್ಲ ಎಂದು ವಿಪಕ್ಷದ ಉಪಮುಖ್ಯಸ್ಥ ಕೆ.ಸಿ.ಜೋಸೆಫ್ ಟೀಕಿಸಿದರೂ ಯುಡಿಎಫ್ ಈ ನಿರ್ಣಯವನ್ನು ಬೆಂಬಲಿಸಿತು.

ಬಿಜೆಪಿಯ ಒಂಟಿ ಶಾಸಕರ ಪೀಕಲಾಟ

ವಿಧಾನಸಭೆಯಲ್ಲಿ ಬಿಜೆಪಿಯ ಏಕಮಾತ್ರ ಸದಸ್ಯ ಒ.ರಾಜಗೋಪಲ್ ಕೇಂದ್ರದ ಕಾಯ್ದೆಗಳ ಪರವಾಗಿ ಮಾತಾಡಿದರೂ ಧ್ವನಿಮತದ ವೇಳೆಗೆ ಆ ಕಾಯ್ದೆಗಳನ್ನು ವಿರೋಧಿಸಿದ ಈ ಠರಾವನ್ನು ವಿರೋಧಿಸಲಿಲ್ಲ. ಇದರಿಂದಾಗಿ ಠರಾವು ಸರ್ವಸಮ್ಮತಿಯಿಂದ ಅಂಗೀಕಾರಗೊಂಡಿತು.

ನಂತರ ಪತ್ರಕರ್ತರೊಂದಿಗೆ ಮಾತಾಡುತ್ತ ಅವರು ಈ ನಿರ್ಣಯದಲ್ಲಿನ ತರ್ಕಗಳ ಬಗ್ಗೆ ತಮಗೆ ಭಿನ್ನಾಭಿಪ್ರಾಯವಿದೆಯಾದರೂ ಅದರ ಸಾರದ ಬಗ್ಗೆ ತನಗೆ ಸಮ್ಮತಿಯಿರುವುದಾಗಿ ಹೇಳಿದರು. ಇದು ತನ್ನ ಪಕ್ಷದ ನಿಲುವಾಗಿರಲಿಕ್ಕಿಲ್ಲ, ಆದರೆ ರಾಜಿಗಳು, ಒಮ್ಮತ ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗ ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

ಆದರೆ ಕೆಲವು ಗಂಟೆಗಳ ನಂತರ ಇದೇ ವ್ಯಕ್ತಿ ತಿಪ್ಪರಲಾಗ ಹಾಕಿದರು ಎಂದು ಮಾಧ್ಯಮಗಳು ವರದಿ ಮಾಡಿವೆ. ಕೆಲವು ಗಂಟೆಗಳ ಹಿಂದೆ ಪ್ರಜಾಪ್ರಭುತ್ವದಲ್ಲಿ ರಾಜಿ ಮತ್ತು ಒಮ್ಮತದ ಬಗ್ಗೆ ಮಾತಾಡಿದ ಈ ವ್ಯಕ್ತಿ ತಾನು ಈ ಠರಾವನ್ನು ಬಲವಾಗಿ ವಿರೋಧಿಸಿದೆ, ಸಭಾಧ್ಯಕ್ಷರು ಠರಾವು ಅಂಗೀಕಾರವಾಗುವಾಗ 'ನಿಯಮಗಳ ಉಲ್ಲಂಘನೆ' ಮಾಡಿದ್ದಾರೆ ಎಂದು ಆರೋಪಿಸಿದರು!

ಕೇರಳದ ಕೃಷಿಯ ಬಗ್ಗೆ ಪ್ರಧಾನಿಗಳ ಹೇಳಿಕೆ: ಅಜ್ಞಾನವೋ ಅಥವ ದಾರಿ ತಪ್ಪಿಸುವ ಪ್ರಯತ್ನವೋ? –ಎ.ಐ.ಕೆ.ಎಸ್.

ಕೇರಳದಲ್ಲಿ ಎ.ಪಿ.ಎಂ.ಸಿ.ಗಳಿಲ್ಲ, ಮಂಡಿಗಳಿಲ್ಲ, ಆದರೂ ಅಲ್ಲಿ ಪ್ರತಿಭಟನೆಗಳು ಏಕಿಲ್ಲ? ಈ ಪ್ರಶ್ನೆಯನ್ನು ಸ್ವತಃ ದೇಶದ ಪ್ರಧಾನ ಮಂತ್ರಿಗಳೇ ಕೇಳುತ್ತಿದ್ದಾರೆ!

ಇದಕ್ಕೆ ಪ್ರತಿಕ್ರಿಯಿಸುತ್ತ ಅಖಿಲ ಭಾರತ ಕಿಸಾನ್ ಸಭಾ, ಇದು ಪ್ರಧಾನ ಮಂತ್ರಿಗಳಿಗೆ ದೇಶದ ಒಂದು ಪ್ರಮುಖ ರಾಜ್ಯವಾದ ಕೇರಳದ ಕೃಷಿಯ ಬಗ್ಗೆ ಇರುವ ಅಜ್ಞಾನವನ್ನು ಬಯಲುಗೊಳಿಸಿದೆ ಎಂದು ಹೇಳಿದೆ. ಒಂದೋ ಅವರ ಸಲಹಾಗಾರರು ಅವರ ದಾರಿ ತಪ್ಪಿಸುತ್ತಿದ್ದಾರೆ, ಅಥವ ಅವರೇ ಉದ್ದೇಶಪೂರ್ವಕವಾಗಿಯೇ ಜನಗಳನ್ನು ದಾರಿ ತಪ್ಪಿಸಲು ಅಸತ್ಯದ ಮೊರೆ ಹೊಕ್ಕಿದ್ದಾರೆ ಎಂದು ಅದು ಹೇಳಿದೆ.

ಕೇರಳದ ಕೃಷಿ ಸನ್ನಿವೇಶದ ವಿಶೇಷತೆಯೇನು, ಅದರಿಂದಾಗಿ ರೈತರಿಗೆ ಫಲದಾಯಕ ಬೆಲೆ ಸಿಗುವಂತೆ ಮಾಡಲು ಎಲ್.ಡಿ.ಎಫ್. ಸರಕಾರಗಳು ಕೈಗೊಂಡಿರುವ ಕ್ರಮಗಳೇನು ಎನ್ನುವ ಬಗ್ಗೆ ಜನಶಕ್ತಿ ಮೀಡಿಯ ತಾಣದಲ್ಲಿ ಡಿಸೆಂಬರ್ 22ರಂದು ಪ್ರಕಟವಾಗಿರುವ 'ಕೃಷಿ ವಲಯದಲ್ಲಿ ಕೇರಳದ ಪರ್ಯಾಯ' ಲೇಖನವನ್ನು ನೋಡಿ:https://janashakthimedia.com/krishi-valayadalli-kerala-paryaya/

ಕೇರಳ, ಮತ್ತು ಮಣಿಪುರ, ಜಮ್ಮು–ಕಾಶ್ಮೀರ ಮುಂತಾದ ಇತರ ಕೆಲವು ರಾಜ್ಯಗಳೂ ಸಹ ಎ.ಪಿ.ಎಂ.ಸಿ. ಕಾಯ್ದೆಗಳನ್ನು ಹೊಂದಿಲ್ಲ. ಇದಕ್ಕೆ ಕಾರಣ ಅಲ್ಲಿನ ವಿಶಿಷ್ಟ ಕೃಷಿ ಸನ್ನಿವೇಶಗಳು.

ಕೇರಳದಲ್ಲಿ ಕೃಷಿ ಬಹುಪಾಲು ವಾಣಿಜ್ಯ ಬೆಳೆಗಳ ಸುತ್ತವೇ ಇದೆ. ರಾಜ್ಯದ 82%ದಷ್ಟು ವ್ಯವಸಾಯ ತೆಂಗು, ಗೇರು, ಏಲಕ್ಕಿ, ಚಹಾ, ಕಾಫಿ, ರಬ್ಬರ್ ಮುಂತಾದ ಪ್ಲಾಂಟೇಶನ್‌ಗಳು ಅಥವ ತೋಟಗಳಲ್ಲಿ ನಡೆಯುತ್ತಿದೆ. ಈ ಎಲ್ಲ ಬೆಳೆಗಳಿಗೆ ಅವುಗಳದ್ದೇ ಆದ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆಗಳಿವೆ. ಉದಾ: ಕಾಫಿ ಬೋರ್ಡ್ ಅಥವ ಮಂಡಳಿ, ಚಹಾಮಂಡಳಿ, ಮಸಾಲೆ ಸಾಮಗ್ರಿಗಳ ಮಂಡಳಿ, ರಬ್ಬರ್ ಮಂಡಳಿ , ತೆಂಗು ಅಭಿವೃದ್ಧಿ ಮಂಡಳಿ ಇತ್ಯಾದಿ ಅಸ್ತಿತ್ವದಲ್ಲಿದ್ದು, ಇವುಗಳ ಖರೀದಿಗೆ ಹರಾಜು ವ್ಯವಸ್ಥೆ ಜಾರಿಯಲ್ಲಿದೆ. ಈ ಮಂಡಳಿಗಳು ಕೇಂದ್ರ ಸರಕಾರದ ವಾಣಿಜ್ಯ ಮಂತ್ರಾಲಯದ ಅಡಿಯಲ್ಲಿ ಕೆಲಸ ಮಾಡುತ್ತವೆ ಎಂಬುದನ್ನೂ ಗಮನಿಸಬೇಕು. ಇವುಗಳ ಮಾರುಕಟ್ಟೆ ಬೆಲೆಗಳು ವಿಶ್ವ ಮಾರುಕಟ್ಟೆಯಲ್ಲಿನ ಬೆಲೆಗಳನ್ನು ಅವಲಂಬಿಸಿವೆ. ಕೇಂದ್ರ ಸರಕಾರ ಇವುಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಪ್ರಕಟಿಸುವುದಿಲ್ಲ.

ದೇಶಕ್ಕಾಗಿ ಅಪಾರ ವಿದೇಶ ವಿನಿಮಯ ಗಳಿಸುವ ಈ ಬೆಳೆಗಳಿಗೆ ಆರ್ಥಿಕ ಉದಾರೀಕರಣದ ನಂತರ ಕೇಂದ್ರದಲ್ಲಿ ಬಂದ ಸರಕಾರಗಳಿಂದ ಬಹಳ ತೊಂದರೆಗಳಾಗಿವೆ, ಹಲವಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2006ರಲ್ಲಿ ಎಲ್.ಡಿ.ಎಫ್. ಅಧಿಕಾರಕ್ಕೆ ಬಂದಾಗ ರಚಿಸಿದ ವಿಶಿಷ್ಟ ಸ್ವರೂಪದ 'ಸಾಲ ಪರಿಹಾರ ಆಯೋಗ ' ವ್ಯವಸ್ಥೆ ಯಿಂದಾಗಿ ಇದಕ್ಕೆ ತಡೆ ಬಿದ್ದಿದೆ.

ಈ ನವ–ಉದಾರವಾದಿ ದಾಳಿ ಬೇರೆಲ್ಲ ಕ್ಷೇತ್ರಗಳಂತೆ ಮೋದಿ ಸರಕಾರ ಬಂದಮೇಲೆ ಮತ್ತಷ್ಟು ಉಲ್ಬಣಗೊಂಡಿದೆ. ಇದಕ್ಕೆ ಆಗಾಗ ಎಲ್.ಡಿ.ಎಫ್. ಸರಕಾರವೇ ಅಲ್ಲಿನ ರೈತರ ಪರವಾಗಿ ಪ್ರತಿಭಟನೆಗಳನ್ನು ವ್ಯಕ್ತ ಮಾಡಿರುವುದು ಪ್ರಧಾನಿಗಳಿಗೆ ನೆನಪಿಲ್ಲವೇನೋ!

ಇನ್ನು ಉಳಿದ ಬೆಳೆಗಳಿಗೆ ಭತ್ತ, ಹಣ್ಣು, ತರಕಾರಿ ಬೆಳಗಾರರಿಗೆ ನಿರ್ದಿಷ್ಟ ಸಗಟು ಮತ್ತು ಚಿಲ್ಲರೆ ಮಾರಾಟ ವ್ಯವಸ್ಥೆಗಳು ಇವೆ, ಎಲ್.ಡಿ.ಎಫ್. ಸರಕಾರ ಸಹಕಾರಿ ಸಂಘಗಳು, ಪಂಚಾಯ್ತುಗಳು ಇತ್ಯಾದಿಗಳ ಮೂಲಕ ರೈತರ ನೆರವಿಗೆ ಧಾವಿಸುತ್ತದೆ. ಎಲ್.ಡಿ.ಎಫ್. ಸರಕಾರದ ಕ್ರಮಗಳನ್ನು ಗಮನಿಸಿ:

- ಕೇರಳದಲ್ಲಿ ಭತ್ತವನ್ನು ಕ್ವಿಂಟಾಲಿಗೆ ರೂ.2748 ದರದಲ್ಲಿ ಸರಕಾರ ಖರೀದಿಸುತ್ತದೆ, ಕೇಂದ್ರ ಸರಕಾರ ಭತ್ತಕ್ಕೆ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆ ರೂ. 1848, ಅಂದರೆ ಕೇರಳಕ್ಕಿಂತ 900ರೂ. ಕಡಿಮೆ.
- 'ಸುಭಿಕ್ಷ ಕೇರಳ ' ಕಾರ್ಯಕ್ರಮದ ಅಡಿಯಲ್ಲಿ ವಿಭಿನ್ನ ಬೆಳೆಗಳಿಗೆ ಪ್ರತಿ ಹೆಕ್ಟೇರಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಸಬ್ಸಿಡಿಗಳನ್ನು ಕೊಡಲಾಗುತ್ತಿದೆ. ಉದಾ: ಭತ್ತಕ್ಕೆ ಹೆಕ್ಟೇರಿಗೆ ರೂ.22,000, ತರಕಾರಿಗಳಿಗೆ ರೂ. 20,000, ಚಳಿಗಾಲದಲ್ಲಿ ರೂ.30,000, ಬೇಳೆಕಾಳುಗಳಿಗೆ ರೂ.20,000, ಬಾಳೆಗೆ ರೂ.30,000 ಇತ್ಯಾದಿ.
- ಇತ್ತೀಚೆಗಷ್ಟೇ 16 ತರಕಾರಿಗಳಿಗೂ ಕನಿಷ್ಟ ಬೆಲೆಗಳನ್ನು ಎಲ್.ಡಿ.ಎಫ್.ಸರಕಾರ ಪ್ರಕಟಿಸಿದೆ

ಪ್ರಧಾನ ಮಂತ್ರಿ ಮೋದಿ ಅಸತ್ಯಗಳು, ಮುಚ್ಚುಮರೆಗಳಲ್ಲಿ ತೊಡಗುವ ಬದಲು ಇಂತಹ ಕ್ರಮಗಳನ್ನು ತರಲು ಪ್ರಯತ್ನಿಸಬೇಕು ಮತ್ತು ಕಾಫಿ ಬೋರ್ಡ್ ಇತ್ಯಾದಿಗಳನ್ನು ಏಕೆ ಅದು ದುರ್ಬಲಗೊಳಿಸುತ್ತಿದೆ, ರಾಜ್ಯ ಸರಕಾರಗಳೊಡನೆ ಸಮಾಲೋಚಿಸದೆಯೇ ಹೊರದೇಶಗಳೊಡನೆ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್.ಟಿ.ಎ)ಗಳನ್ನು ಮಾಡಿಕೊಂಡು ಭಾರತೀಯ ರೈತರಿಗೆ ಅನಾಹುತಗಳನ್ನು ತರುತ್ತಿದೆ ಎಂಬ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ ಎಂದು ಎಐಕೆಎಸ್ ಹೇಳಿದೆ.

ಅಲ್ಲದೆ 14 ವರ್ಷಗಳ ಹಿಂದೆಯೆ ಎಪಿಎಂಸಿಗಳನ್ನು ರದ್ದುಗೊಳಿಸಿರುವ ಬಿಹಾರದಲ್ಲಿ, ಭತ್ತ ಬೆಳೆಗಾರರು ಕೇವಲ ಕ್ವಿಂಟಾಲಿಗೆ ರೂ.1000–1200, ಅಂದರೆ ಕನಿಷ್ಟ ಬೆಂಬಲ ಬೆಲೆಗಿಂತ 600–800 ರೂ. ಕಡಿಮೆ ಏಕೆ ಪಡೆಯುತ್ತಿದ್ದಾರೆ ಎಂಬುದಕ್ಕೂ ಉತ್ತರಿಸಬೇಕಾಗುತ್ತದೆ, ಏಕೆಂದರೆ ಅಲ್ಲಿ ಬಿಜೆಪಿ ಈಗ ಆಳುವ ರಂಗದಲ್ಲಿ ಅತಿ ದೊಡ್ಡ ಪಕ್ಷ. ಸುಳ್ಳುಗಳು ಮತ್ತು ಮೋಸದ ಮಾತುಗಳಿಂದ ಈಗ ರೈತರನ್ನು ದಾರಿ ತಪ್ಪಿಸಲಾಗದು ಎಂದು ಎಐಕೆಎಸ್ ಎಚ್ಚರಿಸಿದೆ.

ಈ ಬಾರಿ ರೈತರ ತಟ್ಟೆ ಸಂದೇಶ:"ಮೋದೀ ಸುನ್, ಕಿಸಾನ್ ಕೀ ಮನ್ ಕೀ ಬಾತ್"

ಡಿಸೆಂಬರ್ 29 ರಂದು ಸರಕಾರದೊಡನೆ ಮಾತುಕತೆಗೆ ನಾಲ್ಕು ಅಂಶಗಳ ಅಜೆಂಡಾ

ಡಿಸೆಂಬರ್ 27ರಂದು 2020ರ ಕೊನೆಯ 'ಮನ್ ಕೀ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿಗಳು ಮಾತನಾಡಲಾರಂಭಿಸಿದಂತೆ ದಿಲ್ಲಿಯ ಸುತ್ತ ಐದು ಸ್ಥಳಗಳಲ್ಲಿ ತಡೆದು ನಿಲ್ಲಿಸಲ್ಪಟ್ಟಿರುವ ಲಕ್ಷಾಂತರ ರೈತರು ತಟ್ಟೆ ಬಾರಿಸುತ್ತ "ಮೋದೀ ಸುನ್, ಕಿಸಾನ್ ಕೀ ಮನ್ ಕೀ ಬಾತ್" ಎಂದು ಘೋಷಣೆ ಕೂಗಿ, ಪ್ರಧಾನಿಗಳ 'ಮನ್ ಕೀ ಬಾತ್'ಗೆ ಬಹಿಷ್ಕಾರ ಸೂಚಿಸಿದರು. ಪಂಜಾಬಿನಿಂದ ತಮಿಳುನಾಡಿನ ವರೆಗೂ ಈ ಘೋಷಣೆ ತಟ್ಟೆಗಳ ಸದ್ದಿನ ನಡುವೆ ಮಾರ್ದನಿಸಿತು ಎಂದು ವರದಿಯಾಗಿದೆ. ಕೆಲವು ತಿಂಗಳ ಹಿಂದೆ ಇದೇ ಪ್ರಧಾನ ಮಂತ್ರಿಗಳು ಕೊರೊನಾದ ವಿರುದ್ಧ ತಟ್ಟೆ ಬಾರಿಸುವ ಕಾರ್ಯಕ್ರಮಕ್ಕೆ ಕರೆ ನೀಡಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಧಾನ ಮಂತ್ರಿಗಳು ತನ್ನ ಭಾಷಣದಲ್ಲಿ 'ಆತ್ಮನಿರ್ಭರತಾ'ದ ಪುನರುಚ್ಚಾರ ಮಾಡುತ್ತಲೇ ಈ ಕಾಯ್ದೆಗಳಿಂದಾಗಿ ದೇಶೀ –ವಿದೇಶೀ ಕಾರ್ಪೊರೇಟ್‌ಗಳು 1 ಲಕ್ಷ ಕೋಟಿ ರೂ.ಗಳನ್ನು ಕೃಷಿ ಕ್ಷೇತ್ರದಲ್ಲಿ ಹೂಡಲಿವೆ ಎಂದರು. ಆದರೆ ಇದರಿಂದ ದೇಶದ 'ಆತ್ಮನಿರ್ಭರತೆ' ಸಾಧ್ಯವಿಲ್ಲ, ಬದಲಾಗಿ ಇದು ತದ್ವಿರುದ್ಧ ಪರಿಣಾಮವನ್ನು ಬೀರುತ್ತದೆ, ಏಕೆಂದರೆ ಈ ಕಾಯ್ದೆಗಳು ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳ ಲೂಟಿಗೆ ಬಾಗಿಲು ತೆರೆದು ಕೊಡುತ್ತವೆ ಎಂಬ ರೈತರ ವಾದವನ್ನು ರೈತ ಮುಖಂಡರು ಪುನರುಚ್ಚರಿಸುತ್ತ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ಹೇಳಿದರು.

ಜನವರಿ 1ರಂದು ದೇಶಾದ್ಯಂತ ಮಧ್ಯಾಹ್ನ 12 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ರೈತರ ಹೋರಾಟವನ್ನು ಬೆಂಬಲಿಸಿ ದೇಶಾದ್ಯಂತ 'ರೈತರನ್ನು ಉಳಿಸಿ, ದೇಶವನ್ನು ಉಳಿಸಿ' ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮವನ್ನು ನಡೆಸಬೇಕೆಂಬ ಕರೆಗೆ ವ್ಯಾಪಕ ಸ್ಪಂದನೆ ದೊರೆತಿದೆ ಎಂದು ವರದಿಯಾಗಿದೆ.



ಸಂಪಾದಕೀಯ

ಜೆಡಿ(ಎಸ್) ಅಪ್ರಸ್ತುತವಾಗುತ್ತಿದೆಯೆ?

ಹಾಗಾಗಬಾರದು. ಜೆಡಿ(ಎಸ್) ಉಳಿಯಬೇಕು. ಅದು ಅಸ್ತಿತ್ವ ಕಳೆದುಕೊಳ್ಳಬಾರದು. ಬಿಜೆಪಿ ಹಾಗೂ ಕಾಂಗ್ರೆಸ್ ನಡುವಿನ ಖಾಲಿ ಜಾಗವನ್ನು ಅದು ತುಂಬಬೇಕು. ಅಂತಹ ಒಂದು ಚಾರಿತ್ರಿಕ ಅವಕಾಶವನ್ನು ಅದು ಗುರುತಿಸಿ ಅದರತ್ತ ಆತ್ಮವಿಶ್ವಾಸದ ಹೆಜ್ಜೆಗಳನ್ನು ಹಾಕದಿರುವುದು ರಾಜ್ಯದಲ್ಲಿ ಪರ್ಯಾಯವನ್ನು ಬಯಸುತ್ತಿರುವ ಜಾತ್ಯಾತೀತ ಮನಸ್ಸುಗಳಿಗೆ ಖೇದದ ವಿಷಯವಾಗಿದೆ.

ಒಂದು ಪ್ರಾದೇಶಿಕ ಪಕ್ಷವಾಗಿ ಜೆಡಿ(ಎಸ್) "ಕಿಂಗ್ ಮೇಕರ್" ಪಕ್ಷವಾಗಿ ಆಟವಾಡಲು ಪ್ರಾವಿಣ್ಯತೆ ಪಡೆದಿದೆ. ಎಂದೂ ಸ್ವತಂತ್ರವಾಗಿ ಬಹುಮತ ಪಡೆಯಲಾಗದೆ ಅದು ಬೇರೆ ಪಕ್ಷಗಳ ಸರಕಾರಗಳನ್ನು ಅಸ್ತಿತ್ವಕ್ಕೆ ತರುವುದರಲ್ಲಿ ಯಶಸ್ಸು ಪಡೆದಿದೆ ಮಾತ್ರವಲ್ಲ ಹಲವು ಬಾರಿ ಅಧಿಕಾರವನ್ನು ಅನುಭವಿಸಿದೆ. 2004ರಲ್ಲಿ ಕಾಂಗ್ರೆಸ್‌ನೊಂದಿಗೆ, 2006ರಲ್ಲಿ ಬಿಜೆಪಿಯೊಂದಿಗೆ ಮತ್ತು 2018ರಲ್ಲಿ ಮತ್ತೊಮ್ಮೆ ಕಾಂಗ್ರೆಸ್‌ನೊಂದಿಗೆ ಅಧಿಕಾರ ಹಂಚಿಕೊಂಡಿದೆ. ಈಗ ಮತ್ತೆ ಬಿಜೆಪಿಗೆ ಎಚ್.ಡಿ. ಕುಮಾರಸ್ವಾಮಿ ಹತ್ತಿರವಾಗುತ್ತಾರೆ ಎಂಬ ಸುದ್ದಿ ಗಾಳಿಯಲ್ಲಿ ತೇಲಾಡುತ್ತಿದೆ. ಕೆಲವು ಟಿವಿ ಚಾಲನ್‌ಗಳು ಎರಡೂ ಪಕ್ಷಗಳು ವಿಲೀನ ಆಗುತ್ತವೆ ಎಂದು ಭವಿಷ್ಯ ನುಡಿಯ ತೊಡಗಿವೆ. ಆದರೆ ಎರಡು ಪಕ್ಷಗಳು ಇಂತಹ ಸಾಧ್ಯತೆಯನ್ನು ತಳ್ಳಿಹಾಕಿವೆ.

ಆದರೆ, ಒಂದು ತರಹದ ಪುನರ್ ಮೈತ್ರಿಗೆ ಬಿಜೆಪಿ ಗಿಂತಲೂ ಜೆಡಿ(ಎಸ್) ಹೆಚ್ಚು ಆಸಕ್ತಿಯನ್ನು ಹೊಂದಿರುವಂತೆ ಭಾಸವಾಗುತ್ತದೆ. ಇದು ದೇವೇಗೌಡ ಕುಟುಂಬವು ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಡೆಸುತ್ತಿರುವ ತಂತ್ರವಾಗಿದೆ. ಜೆಡಿ(ಎಸ್) ಸ್ಪರ್ಧೆಯಲ್ಲಿ ಇರುವಂತೆ ನೋಡಿಕೊಳ್ಳುವುದೇ ತಂದೆ ಮಕ್ಕಳ ಗುರಿಯಾಗಿದೆ ಎಂದು ಹೇಳಲಾಗುತ್ತದೆ. ಬಿಜೆಪಿ ಮತ್ತು ಜೆಡಿ(ಎಸ್) ನಡುವಿನ ಹೊಂದಾಣಿಕೆ ಬಗ್ಗೆ ಈಗಲೇ ನಿಖರವಾಗಿ ಏನೂ ಹೇಳಲಿಕ್ಕಾಗದು. ಚುನಾವಣೆಗಳು ಇನ್ನೂ ಎರಡು ವರ್ಷ ದೂರವೇ ಇವೆ; ಕೇಸರಿ ಪಕ್ಷ ಮತ್ತು ಜಾತ್ಯಾತೀತ ಎಂದುಕೊಳ್ಳುವ ಜೆಡಿ(ಎಸ್) ಪಕ್ಷಗಳ ನಡುವಿನ ಬೆಳವಣಿಗೆಗಳನ್ನು ಕಾದುನೋಡಬೇಕು. ದೊಡ್ಡ ಗೌಡರ ಪ್ರಕಾರ ಅವರು ಸ್ವತಂತ್ರವಾಗಿ ಅಧಿಕಾರಕ್ಕೆ ಬರುವತ್ತ ಕೆಲಸ ಮಾಡುತ್ತಿದ್ದಾರಂತೆ. ಮಾಜಿ ಪ್ರಧಾನಿಗಳು ತಮ್ಮ ಪಕ್ಷವನ್ನು ಇನ್ನೊಂದು ಪಕ್ಷದ ಮನೆಬಾಗಿಲಿಗೆ ಕೊಂಡೊಯ್ಯುವುದನ್ನು ತಳ್ಳಿಹಾಕಿದ್ದಾರೆ. ಆದರೆ ರಾಜಕಾರಣದಲ್ಲಿ ಯಾರೂ ಶಾಶ್ವತ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ ಎಂದು ಹೇಳುತ್ತಿರುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ತನಗೆ ಯಾವ ಸಿದ್ಧಾಂತದಲ್ಲೂ ನಂಬಿಕೆ ಇಲ್ಲ ಎಂದು ಆಗಾಗ ಹೇಳುತ್ತಿರುತ್ತಾರೆ.

ರಾಜ್ಯ ವಿಧಾನ ಸಭೆಯಲ್ಲಿ 2004 ರಲ್ಲಿ 58 ಸ್ಥಾನಗಳನ್ನು ಗೆದ್ದ ಜೆಡಿ(ಎಸ್) ನಂತರದ ಚುನಾವಣೆಗಳಲ್ಲಿ ನಿರಂತರವಾಗಿ ಸ್ಥಾನಗಳನ್ನು ಕಳೆದುಕೊಳ್ಳುತ್ತಾ ಈಗ ಕೇವಲ 33 ಸ್ಥಾನಗಳಿಗೆ ಕುಸಿದಿದೆ. ಎಚ್.ಡಿ. ಕುಮಾರಸ್ವಾಮಿಗೆ ಒಂದು ಕಡೆ ಡಿ.ಕೆ. ಶಿವಕುಮಾರ್ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡು ಒಕ್ಕಲಿಗರ ನಡುವೆ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿರುವುದು ತಲೆನೋವಿನ ವಿಷಯವಾಗಿದೆ ಮಾತ್ರವಲ್ಲ ಇನ್ನೊಂದು ಕಡೆ ಬಿಜೆಪಿಯು ರಾಜ್ಯಾದ್ಯಂತ ತನ್ನ ಪ್ರಭಾವವನ್ನು ವಿಸ್ತರಿಸಲು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವುದು ಜೆಡಿ(ಎಸ್) ನ ಆಘಾತಕ್ಕೆ ಕಾರಣವಾಗಿದೆ. ಬಿಜೆಪಿಗರು ತಮ್ಮ ಮಿತ್ರ ಪಕ್ಷಗಳಿಗೆ ಯಾವುದೇ ರಿಯಾಯ್ತಿ ನೀಡುವ ಜಾಯಮಾನದವರಲ್ಲ. ಜೆಡಿ(ಎಸ್) ಅದ್ದರಿಂದ, ತನ್ನ ಅಸ್ತಿತ್ವಕ್ಕೆ ಬಂದಿರುವ ಬೆದರಿಕೆಯನ್ನು ಎದುರಿಸಲು ಹೆಣಗಾಡುತ್ತಿದೆ. ಜೆಡಿ(ಎಸ್) ಮೂಲಗಳ ಪ್ರಕಾರ, 2023ರ ರಾಜ್ಯ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಕೇಂದ್ರ ನಾಯಕತ್ವ ಮತ್ತು ದೇವೇಗೌಡರ ನಡುವೆ ಮಾತುಕತೆ ನಡೆಯುತ್ತಿದೆ. 2018ರ ಚುನಾವಣೆಯಲ್ಲಿ ಹಲವಾರು ಕ್ಷೇತ್ರಗಳಲ್ಲಿ ಜೆಡಿ(ಎಸ್) ಕಾಂಗ್ರೆಸಿಗೆ ಎರಡನೇ ಸ್ಥಾನ ಪಡೆದಿತ್ತು. ಈ ಕ್ಷೇತ್ರಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಜೆಡಿ(ಎಸ್) ಗುರಿಯಾಗಿದೆ ಎನ್ನಲಾಗುತ್ತದೆ. 2018 ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ, ಸಿದ್ದರಾಮಯ್ಯ ಸೋಲನ್ನು ಅನುಭವಿಸಿದ ಚಾಮುಂಡೇಶ್ವರಿ ಕ್ಷೇತ್ರವನ್ನು ಒಳಗೊಂಡಂತೆ ಸುಮಾರು ಎರಡು ಡಜನ್ ಕ್ಷೇತ್ರಗಳಲ್ಲಿ ಇಂತಹ ಹೊಂದಾಣಿಕೆ ಮಾಡಿಕೊಳ್ಳಲಾಗಿತಂತೆ. 2023ರ ಚುನಾವಣೆಯಲ್ಲಿ ಅಂತಹ ಹೊಂದಾಣಿಕೆ ಸಾಧ್ಯವಾದರೆ ಎರಡು ಪಕ್ಷಗಳ ಸಾಮಾನ್ಯ ಶತ್ರು ಕಾಂಗ್ರೆಸ್ಸನ್ನು ಸೋಲಿಸಬಹುದೆಂದು ಜೆಡಿ(ಎಸ್) ಲೆಕ್ಕ ಹಾಕುತ್ತಿದೆ.

ಜೆಡಿ(ಎಸ್) ನ ಇಂತಹ ಲೆಕ್ಕಾಚಾರ ಅದಕ್ಕೆ ಲಾಭವನ್ನು ತಂದುಕೊಡಬಹುದು ಎಂಬುದು ಚರ್ಚಾಸ್ಪದ ವಿಷಯ. ಬಿಜೆಪಿಯನ್ನು ಸೋಲಿಸಲೆಂದೇ 1999 ರಲ್ಲಿ ಜೆಡಿ(ಎಸ್) ಸ್ಥಾಪನೆಯಾಗಿತ್ತು. 1996 ರಲ್ಲಿ ಸಿಪಿಎಂನ ಜ್ಯೋತಿಬಸು ಪ್ರಧಾನಿ ಪಟ್ಟವನ್ನು ತಿರಸ್ಕರಿಸಿದಾಗ ದೇವೇಗೌಡರು ಪ್ರಧಾನ ಮಂತ್ರಿಯಾದರು. ಮುಂದೆ ರಾಮಕೃಷ್ಣ ಹೆಗಡೆಯವರು ಲೋಕಶಕ್ತಿ ಪಕ್ಷವನ್ನು ಆರಂಭಿಸಿದಾಗ ಜೆ.ಎಚ್. ಪಾಟೇಲರು ಬಿಜೆಪಿ ಜೊತೆ ಹೋಗಲು ಬಯಸಿದ್ದರು. ಆಗ ಬಿಜೆಪಿಯನ್ನು ತಡೆದು ನಿಲ್ಲಿಸಲು ದೇವೇಗೌಡರು ಮತ್ತು ಸಿದ್ದರಾಮಯ್ಯರವರು ಜಾತ್ಯಾತೀತ ಜನತಾದಳವನ್ನು ಆರಂಭಿಸಿದರು. ಇಂದು ಜೆಡಿ(ಎಸ್) ಬಿಜೆಪಿ ಜೊತೆ ಹೋಗಲು ಬಯಸುವುದು ಸಮಯಸಾಧಕತನವಲ್ಲವೆ?

ನುರಿತ ರಾಜಕಾರಣಿ ದೇವೇಗೌಡರು ಅಳಿದು ಹೋಗುತ್ತಿರುವ ಜೆಡಿ(ಎಸ್) ಪಕ್ಷವನ್ನು ಉಳಿಸಲು ಜೆಡಿ(ಎಸ್) ಶಾಸಕರಲ್ಲಿ ಗೊಂದಲ ಹುಟ್ಟು ಹಾಕಿ ಕಾಂಗ್ರೆಸ್ ಅಥವ ಬಿಜೆಪಿ ಸೇರಲು ತುದಿಗಾಲ ಮೇಲೆ ನಿಂತವರನ್ನು ತಡೆಯಲು ಹೂಡಿರುವ ತಂತ್ರ ಇದಾಗಿದೆ. ಜೆಡಿ(ಎಸ್) ಒಳಗಿನ ಈ ಗೊಂದಲವನ್ನು ತನ್ನ ಹಿತಕ್ಕಾಗಿ ಬಳಸಿಕೊಳ್ಳಲು ಯಡಿಯೂರಪ್ಪರವರ ದುರ್ಬುದ್ಧಿ ಕಾರ್ಯೋನ್ಮುಖವಾಗಿದೆ. ತನ್ನನ್ನು ಅವಮಾನ ಮಾಡಿ ಅಧಿಕಾರದಿಂದ ಕೆಳಗಿಳಿಸಲು ಕೇಂದ್ರ ನಾಯಕತ್ವ ಮುಂದಾದರೆ ಅಗತ್ಯ ಸಂಖ್ಯೆಯೊಂದಿಗೆ ರಾಜ್ಯ ಬಿಜೆಪಿಯನ್ನು ಮತ್ತೊಮ್ಮೆ ಒಡೆಯಬಲ್ಲೆ ಎಂಬ ಎಚ್ಚರಿಕೆಯನ್ನು ಯಡಿಯೂರಪ್ಪ ನೀಡುತ್ತಿದ್ದಾರೆ. ಜೆಡಿ(ಎಸ್) ಒಳಗಿನ ಈ ಬೆಳವಣಿಗೆ ಅಂತಿಮವಾಗಿ ಬಿಜೆಪಿಗೆ ಲಾಭದಾಯಕವಾಗಬಹುದು ಎಂದು ಕೆಲವು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಡುತ್ತಾರೆ. ಬಿಜೆಪಿ ಸೆಕ್ಯುಲರ್ ಮತಗಳ ವಿಭಜನೆಯನ್ನು ಬಯಸುತ್ತದೆ. ಜೆಡಿ(ಎಸ್) ಕಷ್ಟಪಟ್ಟು ತಳಮಟ್ಟದಿಂದ ಜಾತ್ಯಾತೀತ ತತ್ವದ ಆಧಾರದ ಮೇಲೆ ಪಕ್ಷವನ್ನು ಕಟ್ಟಲು ಮುಂದಾದರೆ ಇನ್ನೂ ಕಾಲ ಮಿಂಚಿಲ್ಲ. ಜನತೆಯ ಸಾಮಾನ್ಯ ಶತ್ರು ಬಿಜೆಪಿಯನ್ನು ಸೋಲಿಸುವುದು ಜೆಡಿ(ಎಸ್) ನ ಗುರಿಯಾಗಬೇಕು. ಬಿಜೆಪಿಗೂ ಕಾಂಗ್ರೆಸಿಗೂ ಪರ್ಯಾಯವನ್ನು ಹುಡುಕುತ್ತಿರುವ ಪ್ರಗತಿಪರ ಜಾತ್ಯಾತೀತ ಜನಸಮೂಹಗಳಿಗೆ ಜೆಡಿ(ಎಸ್) ತುಂಬ ಪ್ರಸ್ತುತವಾಗುವುದು. ●

ಅಲ್ಪ ಮಾನವನಿಂದ ವಿಶ್ವಮಾನವರಾಗಿ ಕುವೆಂಪು ಕರೆ ಇಂದಿಗೂ ಪ್ರಸ್ತುತ

– ಡಾ; ನಾಗಭೂಷಣ್



ಮನುಷ್ಯ ಹುಟ್ಟುತ್ತಲೆ ವಿಶ್ವ ಮಾನವನಾಗಿರುತ್ತಾನೆ ಅದರೆ ಬೆಳೆಯುತ್ತ ಬೆಳೆಯುತ್ತ ಅತ ಜಾತಿ, ಧರ್ಮ, ಲಿಂಗ, ವರ್ಣಗಳಲ್ಲಿಹಂಚಿ ಹೋಗಿ ಅಲ್ಪ ಮಾನವನಾಗುತ್ತಿರುವ ಈ ಸಂಧರ್ಭದಲ್ಲಿ ಕುವೆಂಪು ಅವರ ವಿಶ್ವ ಮಾನವ ಸಂದೇಶ ಅರೋಗ್ಯಕರ ಸಮಾಜಕ್ಕೆ ದಾರಿ ದೀಪದಂತಿದೆ ಹಾಗಾಗಿ ಅದು ಪ್ರಸ್ತುತವಾಗಿದೆ ಎಂದು ಕನ್ನಡ ಪ್ರಾಧ್ಯಪಕ ಡಾ; ನಾಗಭೂಣ್ ಬಗ್ಗನಾಡು ಅವರು ಅಭಿಪ್ರಾಯ ಪಟ್ಟರು.

ಅವರು ನಿನ್ನೆ ಸಂಜೆ ನಗರದ ಜನ ಚಳುವಳಿ ಕೇಂದ್ರದಲ್ಲಿ ಎಸ್.ಎಫ್.ಐ, ಡಿ.ವೈ.ಎಫ್.ಐ – ಸಿಐಟಿಯು ಸಂಘಟನೆಗಳು ಜಂಟಿಯಾಗಿ ಕುವೆಂಪು ಜನುಮ ದಿನದ ಅಂಗವಾಗಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡುತ್ತಿದ್ದರು, ಮುಂದುವರಿದು ಮಾತನಾಡಿದ ಅವರು ದೇಶ ಪ್ರೇಮ ಬೇರೆ, ಧರ್ಮ ಪ್ರೇಮ ಬೇರೆ, ಧರ್ಮವನ್ನು ಒಪ್ಪದೆ ಇರುವವರಿಗೋ ದೇಶದ ಸಂವಿಧಾನ ರಕ್ಷಣೆ ನೀಡುತ್ತದೆ ಎಂದು ಅವರು ಕುವೆಂಪು ಅವರು ಕಲ್ಪನೆಯ ದೇವರ ಬಳಿ ದೇವರು ಭಕ್ತನ ನಡುವೆ ಮಧ್ಯವರ್ತಿಗೆ ಅವಕಾಶವಿಲ್ಲಎಂದರು. ಇಂದು ಧರ್ಮದ ಹೇಸರಲ್ಲಿ ಮಾನವ ಜನಾಂಗದ ಅಭಿವೃದ್ಧಿ ಅಗುತ್ತಿಲ್ಲ, ಬದಲಿಗೆ ತಮ್ಮ ಸ್ವಾರ್ಥ ಸಾಧನೆಗೆ ಬಳಸಲಾಗುತ್ತಿದೆ ಎಂದರು

ಮೌಢ್ಯತೆಗೆ ಕಾರಣವಾದ ಬಡತನವೇ ಮೊದಲ ಶತ್ರವಾಗಬೇಕು; ಪ್ರಜಾ ಪ್ರಭುತ್ವ ವ್ಯವಸ್ಥಯ ಹಾಳುಗೆಡವಲು ಗ್ರಾಮ ಪಂಚಾಯತಿಯ ಸದಸ್ಯ ಸ್ಥಾನಗಳನ್ನು ಉಳ್ಳವರಿಗೆ ಹರಾಜು ಹಾಕಲಾಗುತ್ತಿದೆ, ಅ ಹಣ ದೇವಸ್ಥಾನಗಳನ್ನು ಕಟ್ಟಲು ಬಳಸಲಾಗುತ್ತಿದೆ, ಊರ ಮಕ್ಕಳಿಗೆ ಅಗತ್ಯವಾಗಿರು ಶಾಲೆಗಳು ಸೊರುತ್ತಿವೆ, ಹಾಗಾಗಿ ಕುವೆಂಪು ಅವರ ವೈಜಾರಿಕ ಚಿಂತನೆಗಳು ಇಂದಿನ ಹಲವು ಸಾಮಾಜಿಕ ಅನಿಷ್ಟಗಳಿಗೆ ಪರಿಹಾರ ಎಂದರು. ಬಡತನವೆ ಮೌಢ್ಯತೆಗೆ ಕಾರಣವಾಗುತ್ತಿದೆ ಹಾಗಾಗಿ ಬಡತನ ನಮ್ಮ ಮೊದಲ ಶತ್ರುವಾಗಬೇಕೆಂದರು

ಈ ಸಂವಾದದಲ್ಲಿ ಎಸ್.ಎಫ್.ಐ ನ ಮುಖಂಡರಾದ ಅಶಾ ಮಾತನಾಡಿ ಮಹಿಳೆಯರು ಇಂದು ಸಹ ಅಸಮಾನತೆಯನ್ನು ಸಮಾಜ ಮತ್ತು ಕುಟುಂಬಗಳಲ್ಲಿ ಅನುಭವಿಸುತ್ತಿದಾರೆ ಇದನ್ನು ಸರಿ ಪಡಿಸದೆ ಅರೋಗ್ಯಕರ ಸಮ ಸಮಾಜ ನಿರ್ಮಾಣ ಹೇಗೆ ಸಾಧ್ಯ ಎಂದರು.

ಸಿಐಟಿಯು ನ ಜಿಲಾ ಮುಂದಾಳು ಸುಜಿತ್ ನಾಯಕ್ ಮಾತನಾಡಿ ಶ್ರಮ ಸಂಸ್ಕೃತಿಯನ್ನು ತಾತ್ಸರ ಮಾಡುವುದು ಸರಿಯಲ್ಲ ಪುಟ್ಟಪ್ಪನವರು ಯುವಜನರಿಗೆ ಅದರ್ಶವಾಗಬೇಕಾಗಿದೆ ಎಂದರು.

ಸಂವಾದದಲ್ಲಿ ಸಂಶೋಧನಾರ್ಥಿಗಳಾದ ನವಿನ್, ಮಲ್ಲಿಕಾರ್ಜುನ್.. ತಮ್ಮ ಅಬಿಪ್ರಾಯಗಳನ್ನು ಹಂಚಿಕೊಂಡರು

ಸಂವಾದದ ಅಧ್ಯಕ್ಷತೆವಹಿಸಿದ್ದ ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ಅವರು ಮಾತನಾಡಿ ದಿನನಿತ್ಯದ ತಾರತಮ್ಯ –ಶೋಷಣೆಗಳ ನೋಡಿ / ಅನುಭವಿಸಿಯು ಸತ್ತಂತಿರುವವವರಿಗೆ ಕವಿ ಬಡಿದೆಚ್ಚರಿಸಿ ಕಚ್ಚಾಡದೆ– ಕೂಡಿಬಾಳುವ ತರಹದ ಆರೋಗ್ಯ'ಕರ– ಸುಂದರ ಸಮಾಜ ಕಡೆಗೆ ಕರೆದೊಯ್ಯುತ್ತಿರುವುದು ಸರಿ ದಾರಿ ಎಂದರು.

ವೇದಿಕೆಯಲ್ಲಿ ಎಸ್. ಎಫ್.ಐ. ನ ಸಿಐಟಿಯುನ ಬಿ. ಉಮೇಶ್, ಎ. ಲೊಕೇಶ್, ಪೌರ ಕಾರ್ಮಿಕರ ಸಂಘದ ಕೆಂಪಣ್ಣ ಉಪಸ್ಥಿತರಿದ್ದರು

ಅರಂಭದಲ್ಲಿ ಎಸ್. ಶಿವಣ್ಣ ಸ್ವಾಗತಿಸಿ, ಡಿ.ವೈ. ಎಫ್.ಐ. ಜಿ. ದರ್ಶನ್ ನಿರೂಪಿಸಿ, ಎನ್.ಕೆ. ಸುಬ್ರಮಣ್ಯ ಅವರು ವಂದಿಸಿದರು.



ಉಡುಪಿ: ಮೀನುಗಾರರ ಮತ್ತು ಮೀನು ಕಾರ್ಮಿಕರ ಸಮಾವೇಶ

ಅಖಿಲ ಭಾರತ ಮೀನುಗಾರರ ಮತ್ತು ಮೀನು ಕಾರ್ಮಿಕರ ಪೆಡರೇಷನ್ ನವದೆಹಲಿಗೆ ಸಂಯೋಜಿಸಲ್ಪ ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘದ ಉಡುಪಿ ತಾಲೂಕು ಸಮಾವೇಶವು ಬನ್ನಂಜೆ ನಾರಾಯಣ ಗುರು ಮಂದಿರದ ಶಿವಗಿರಿ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿತು.ಮಿನುಗಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಶಂಕರ್ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ದ್ವಿಚಕ್ರ ವಾಹನದಲ್ಲಿ ಮೀನು ಮಾರಾಟ ಮಾಡುವ ವ್ಯಾಪರಸ್ಥರಿಗೆ ಮೀನುಗಾರಿಕಾ ಇಲಾಖಾ ವತಿಯಿಂದ ಗುರುತಿನ ಚೀಟಿ ಕೊಡಬೇಕು ಹಾಗೂ ಮೀನು ವ್ಯಾಪಾರಸ್ಥರಿಗೆ ನಿಬಡ್ಡಿ ಸಾಲ ಸೌಲಭ್ಯ ಕೊಡಬೇಕು ಎಂದು ಸರಕಾರವನ್ನು ಒತ್ತಾಯಿಸಿದರು. ಮೀನುಗಾರರ ಉಡುಪಿ ಜಿಲ್ಲಾ ಉಪಾಧ್ಯಕ್ಷ ವೆಂಕಟೇಶ್ ಕೋಣಿ ಮಾತನಾಡುತ್ತಾ, ಮೀನುಗಾರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸಂಬಂದಪಟ್ಟ ಇಲಾಖೆಯ ಜತೆ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಸಂಘದ ಮುಖಂಡರ ಜಂಟಿ ಸಭೆಯನ್ನು ಕರೆಯಬೇಕು ಎಂದು ಒತ್ತಾಯಿಸಿದರು.ಸಿಐಟಿಯು ಮುಖಂಡರಾದ ಬಾಲಕೃಷ್ಣ ಶೆಟ್ಟಿ,ಉಮೇಶ್ ಕುಂದರ್, ಕವಿರಾಜ್.ಎಸ್. ಶಶಿಧರ ಗೊಲ್ಲ, ನಳಿನಿ. ಎಸ್ ಶುಭ ಕೋರಿ ಮಾತನಾಡಿದರು. ಮೀನುಗಾರರ ಸಂಘದ ಮುಖಂಡರಾದ ಇಸ್ಮಾಯಿಲ್ ಕಾಪು, ಅನ್ವರ್, ವಸಂತ, ಅಬ್ದುಲ್ ಕಾದರ್, ನಜೀರ್ ಅಹ್ಮದ್, ಅಬ್ದುಲ್ ಲತೀಪ್, ಅನ್ವರ್ ಕಟಪಾಡಿ, ಅನ್ವರ್ ಉಪ್ಪೂರ್ ಪಸ್ಥಿತರಿದ್ದರು. ಮಹೇಶ್ ಪೂಜಾರಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ವರದಿ: ವೆಂಕಟೇಶ್ ಕೋಣಿ

ಗ್ರಾಮ ಪಂಚಾಯತ್ ಚುನಾವಣೆ – 2020 ಸಿಪಿಐ(ಎಂ) ಪಕ್ಷದ ಬೆಂಬಲಿತ ಅಭ್ಯರ್ಥಿಗಳ ಸ್ಪರ್ಧೆ ಮತ್ತು ಫಲಿತಾಂಶದ ವಿವರ

ಕ್ರ ಸಂಖ್ಯೆ	ಜಿಲ್ಲೆಗಳು	ಸ್ಪರ್ಧಿಸಿದ ತಾಲ್ಲೂಕುಗಳ ಸಂಖ್ಯೆ	ಸ್ಪರ್ಧಿಸಿದ ಪಂಚಾಯಿತಿಗಳ ಸಂಖ್ಯೆ	ಒಟ್ಟು ಸ್ಪರ್ಧೆ	2020 ಗೆಲುವು	2014–15 ಹಿಂದಿನ ಗೆಲುವು
1	ಬೀದರ್	1	4	4	-	-
2	ಕಲಬುರಗಿ	8	40	123+7	30+7	61
3	ಯಾದಗಿರಿ	5	12	29	11	-
4	ರಾಯಚೂರು	3	8	12	7	-
5	ಬಳ್ಳಾರಿ	6	13	17	6	1
6	ಕೊಪ್ಪಳ	6	20	61	21	6
7	ಬಾಗಲಕೋಟೆ	-	-	-	-	-
8	ವಿಜಯಪುರ	2	2	10	7	1
9	ಬೆಳಗಾವಿ	1	1	3	1	-
10	ಉತ್ತರ ಕನ್ನಡ	6	19	24	14	3
11	ಧಾರವಾಡ	-	-	-	-	-
12	ಗದಗ	2	3	16	6	4
13	ಹಾವೇರಿ	1	1	1	1	-
14	ದಾವಣಗೆರೆ	-	-	-	-	-
15	ಚಿತ್ರದುರ್ಗ	-	-	-	-	-
16	ತುಮಕೂರು	4	9	9	2	3
17	ಬೆಂಗಳೂರು ಗ್ರಾ.	-	-	-	-	-
18	ರಾಮನಗರ	-	-	-	-	-
19	ಬೆಂಗಳೂರು ನ.	1	1	1	-	-
20	ಕೋಲಾರ	4	18	23	10	8
21	ಚಿಕ್ಕಬಳ್ಳಾಪುರ	3	30	225	73+10	198
22	ಮಂಡ್ಯ	4	20	25	7	2
23	ಚಾಮರಾಜನಗರ	-	-	-	-	-
24	ಮೈಸೂರು	-	-	-	-	-
25	ಕೊಡಗು	3	5	14	-	1
26	ಹಾಸನ	3	4	5	1	1
27	ಚಿಕ್ಕಮಗಳೂರು	-	-	-	-	-
28	ಶಿವಮೊಗ್ಗ	-	-	-	-	-
29	ದಕ್ಷಿಣ ಕನ್ನಡ	04	25	69	6	11
30	ಉಡುಪಿ	3	10	48	11	6
ಒಟ್ಟು	20 ಜಿಲ್ಲೆ ಸ್ಪರ್ಧೆ	70	245	719+7	214+17	306

ಉಚಿತ ಆರೋಗ್ಯ ತಪಾಸಣಾ ಶಿಬಿರ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಡಿವೈಎಫ್ಐ ಉರ್ವಾಸ್ಟೋರ್ ಘಟಕ ಇದರ ನೇತೃತ್ವದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಕಸಬಾ ಬೆಂಗ್ರೆ ಇದರ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವು 26 ಡಿಸೆಂಬರ್ 2020 ರ ಶನಿವಾರ ಉರ್ವಸ್ಟೋರ್ ಸುಂಕದಕಟ್ಟೆ ಪರಿಸರದಲ್ಲಿ ನಡೆಯಿತು. ಈ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಯೆನಪೋಯ ಆಸ್ಪತ್ರೆಯ ವೈದ್ಯರುಗಳಾದ ಡಾ ಶುಭಾಕರ್ (ಸಹಾಯಕ ಪ್ರಾಧ್ಯಾಪಕ), ಡಾ. ಕಾಜಲ್, ಡಾ. ರಮೇಶ್, ಡಾ. ಅರ್ಜುನ್ ಹಾಗೆಯೇ ಕಿರಿಯ ಮಹಿಳಾ ಆರೋಗ್ಯ ಸಹಾಯಕರಾದ ವಿದ್ಯಾಶ್ರೀ, ಲೋಲಾಕ್ಷಿ ಹಾಗೂ ಆಶಾ ಕಾರ್ಯಕರ್ತೆಯರಾದ ಕುಸುಮಾ ಹಾಗೆಯೇ ಡಿವೈಎಫ್ಐ ಉರ್ವಸ್ಟೋರ್ ಘಟಕದ ಅಧ್ಯಕ್ಷರಾದ ಪ್ರಶಾಂತ್ ಎಂ ಬಿ, ಮನೋಜ್, ನಾಗರಾಜ್, ರಹೀಮ್, ಹರಿಣಾಕ್ಷಿ ಎಂ ಬಿ ಉಪಸ್ಥಿತರಿದ್ದರು.





ಡಿವೈಎಫ್ಐ ಕಾರ್ಯಕರ್ತನ ಕೊಲೆ ಕ್ರತ್ಯ ಖಂಡಿಸಿ ಪ್ರತಿಭಟನೆ

ಕಾಸರಗೋಡು ಕಾಞಂಗಾಡ್ ನ ಡಿವೈಎಫ್ಐ ಕಾರ್ಯಕರ್ತ ಕಾಂ. ಅಬ್ದುಲ್ ರೆಹಮಾನ್ ರವರನ್ನು ಕೊಲೆ ಮಾಡಿದ ಮುಸ್ಲಿಂ ಲೀಗ್ ಗೂಂಡಾಗಳ ದುಷ್ಕೃತ್ಯವನ್ನು ಖಂಡಿಸಿ ಡಿವೈಎಫ್ಐ ಕೊಡ್ಲಮೊಗರು ವಿಲ್ಲೇಜ್ ಸಮಿತಿಯ ನೇತ್ರತ್ವದಲ್ಲಿ ಬಾಕ್ರಬೈಲ್ ಜಂಕ್ಷನ್ ನಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಮಂಜೇಶ್ವರ ಬ್ಲಾಕ್ ಪಂಚಾಯತ್ ಸದಸ್ಯರೂ, ಸಿಪಿಐ(ಎಂ) ನಾಯಕರಾದ ಮೊಯಿದಿನ್ ಕುಂಞ ತಲಕ್ಕಿಯವರು, ಜನತೆಯ ಬದುಕಿನ ರಾಜಕೀಯವನ್ನೇ ಪ್ರಮುಖ ಅಜೆಂಡಾವನ್ನಾಗಿಸಿದ ಕೇರಳದ LDF ಸರಕಾರದ ಸಾಧನೆಯನ್ನು ದೇಶ ವಿದೇಶಗಳಲ್ಲಿ ಕೊಂಡಾಡುವ ಈ ಸಂಧರ್ಭದಲ್ಲಿ ಹತಾಶೆಗೊಂಡಿರುವ ಮುಸ್ಲಿಂ ಲೀಗ್ ತನ್ನ ಕೋಮುವಾದಿ ಅಜೆಂಡಾವನ್ನು ಬಿಟ್ಟಿಟ್ಟು ಅಮಾಯಕ ಮುಸ್ಲಿಂ ಯುವಕರನ್ನೇ ಟಾರ್ಗೆಟ್ ಇಟ್ಟು ಕೊಲೆ ರಾಜಕೀಯ ನಡೆಸುತ್ತಿರುವ ಮೂಲಕ ತನ್ನ ನೀಚ ಬುದ್ದಿಯನ್ನು ತೋರಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ CPIM ಮಂಜೇಶ್ವರ ಏರಿಯಾ ಸಮಿತಿ ಸದಸ್ಯರೂ, ವರ್ಕಾಡಿ ಪಂಚಾಯತ್ ಸದಸ್ಯರಾದ ಶ್ರೀಮತಿ ಭಾರತಿ ಎಸ್.ರವರು, ಇತ್ತೀಚಿಗೆ ನಡೆದ ಪಂಚಾಯತ್ ಚುನಾವಣೆಯಲ್ಲಿ ಐಆಈ ಗಳಿಸಿದ ಭರ್ಜರಿ ಜಯ ವಿರೋಧಿ ಕೂಟ ಗಆಈ ನ ನಿದ್ದೆಗೆಡಿಸಿದೆ. ಮಾತ್ರವಲ್ಲದೆ ಮುಸ್ಲಿಂ ಲೀಗ್ ನ ಕುತಂತ್ರ ರಾಜಕಾರಣವನ್ನು ಕೇರಳದ ಮುಸ್ಲಿಂ ಜನತೆ ಖಡಾತುಂಡವಾಗಿ ವಿರೋಧಿಸಿದ್ದಾರೆ ಎಂದು ಹೇಳಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ CPIM ಕೊಡ್ಲಮೊಗರು ಲೋಕಲ್ ಸಮಿತಿ ಸದಸ್ಯರಾದ ರವೀಂದ್ರ ಎಂ.ರವರು, *ಜನರ ಬದುಕಿನ ಬಗ್ಗೆ ನಿತ್ಯ ನಿರಂತರವಾಗಿ ಹೋರಾಡುವ DYFI ಕಾರ್ಯಕರ್ತರನ್ನು ಇನ್ನಿಲ್ಲವಾಗಿಸುವ ಮೂಲಕ ಎಡಪಂಥೀಯ ವಿಚಾರಧಾರೆಯನ್ನು ನಾಶ ಮಾಡಲು ಯಾವತ್ತೂ ಸಾಧ್ಯವಿಲ್ಲ ಎಂದು ಹೇಳಿದರು.

ಸಾವಿತ್ರಿಬಾಯಿ ಫುಲೆ ಸ್ಮರಣೆ



ವೈಚಾರಿಕ ಕ್ರಾಂತಿಕಾರಿಗಳು, ಸಮಾಜ ಸುಧಾರಕರು ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಂಡದ್ದು ಬಂಗಾಳದ ನಂತರ ಮಹಾರಾಷ್ಟ್ರದ ನೆಲದಲ್ಲಿ. ಪ್ರಗತಿಪರ ಧೋರಣೆಯನ್ನು ಮೈಗೂಡಿಸಿಕೊಂಡ ಇವರು ಸಾಮಾಜಿಕ ಆಂದೋಲನಗಳನ್ನು ಹುಟ್ಟುಹಾಕಿದರು ಅಥವ ಪ್ರಚಲಿತ ಪ್ರವಾಹಗಳನ್ನು ಗುರಿಮುಟ್ಟಿಸಿದರು. ಅಂಥವರಲ್ಲಿ ಜ್ಯೋತಿಬಾ ಫುಲೆ ಮತ್ತು ಅವರ ಮಡದಿ ಸಾವಿತ್ರಿಬಾಯಿ ಫುಲೆ ದಂಪತಿಗಳು ಪ್ರಮುಖರು.

ಸಾವಿತ್ರಿಬಾಯಿ ಫುಲೆಯವರು ನಮ್ಮ ದೇಶ ಕಂಡ ಒಬ್ಬ ಧೀಮಂತ ಮಹಿಳೆ. ಅವರು ಈ ದೇಶದ ಪ್ರಥಮ ಶಿಕ್ಷಕಿ, ಪ್ರಥಮ ಸಮಾಜ ಸುಧಾರಕಿ, ಪ್ರಥಮ ವೈಚಾರಿಕ ಕವಯಿತ್ರಿ. ಸಾವಿತ್ರಿಬಾಯಿಯವರು ಬಡ ರೈತ ಕುಟುಂಬದಲ್ಲಿ ಸಾತಾರ ಜಿಲ್ಲೆಯ ಖಂಡಾಳಾ ತಾಲೂಕಿನ ನಾಯಗಾವ ಎಂಬ ಕುಗ್ರಾಮದಲ್ಲಿ ಜನಿಸಿದರು. ನೂರು, ನೂರೈವತ್ತು ಮನೆಗಳಿದ್ದ ಆ ಚಿಕ್ಕ ಹಳ್ಳಿಯಲ್ಲಿ ಶಿಕ್ಚಣದ ಪರಂಪರೆಯಿಲ್ಲದ ಮನೆಯಲ್ಲಿ ಸಾವಿತ್ರಿಬಾಯಿ ಬೆಳೆದರು. 1840 ರಲ್ಲಿ ಅವರು ಜ್ಯೋತಿಬಾರೊಂದಿಗೆ ವಿವಾಹವಾದರು. ಅದೊಂದು ಬಾಲ್ಯ ವಿವಾಹವಾಗಿತ್ತು. ಮದುವೆಯ ನಂತರ ಜ್ಯೋತಿಬಾರವರ ನೆರವಿನೊಂದಿಗೆ ಅಕ್ಷರ ಕಲಿಯಲು ಆರಂಭಿಸಿದರು. ಜ್ಯೋತಿಬಾರವರ ಹೆಗಲಿಗೆ ಹೆಗಲುಕೊಟ್ಟು ಸಮಾಜ ಕ್ರಾಂತಿಯ ರಥವನ್ನು ತಮ್ಮ ಆಯುಷ್ಯದ ಕೊನೆಯವರೆಗೂ ನಡೆಸಿಕೊಂಡು ಬಂದರು. ಸಮಾಜ ಕ್ರಾಂತಿಯ ಒಂದು ಚಕ್ರ ಜ್ಯೋತಿ ಬಾ ರವರು ಆದರೆ ಇನ್ನೊಂದು ಚಕ್ರ ಸಾವಿತ್ರಿಬಾಯಿ ಆಗಿದ್ದರು. ಜಾತಿ ಬೇದ, ಪಂಕ್ತಿ ಬೇದ ವಿರುದ್ಧ ಧ್ವನಿ ಎತ್ತಿದರು. ಗಾಂಧೀಜಿ, ಡಾ. ಅಂಬೇಡ್ಕರ್ ಮುಂತಾದವರು ಸಹ ಫುಲೆ ದಂಪತಿಗಳ ವಿಚಾರಗಳಿಂದ ಪ್ರಭಾವಿತರಾಗಿದ್ದರು.

ಜ್ಯೋತಿಬಾ ವಂಶದವರು 'ಗೋಹೆ' ಎಂಬ ಶೂದ್ರ ಜಾತಿಗೆ ಸೇರಿದವರಾಗಿದ್ದರು. ಮುಂದೆ ಅವರು ಹೂವಿನ ವ್ಯಾಪಾರ ಮಾಡತೊಡಗಿದ್ದರಿಂದ ಫುಲೆ ಎಂಬ ಹೆಸರಿನಿಂದ ಪ್ರಸಿದ್ಧರಾದರು.

ಜ್ಯೋತಿ ಬಾ ಫುಲೆರವರ ಕಾಲದಲ್ಲಿ ಸಮಾಜದಲ್ಲಿ ಕ್ರೂರವಾದ ಶ್ರೇಣೀಕೃತ ಸಮಾಜ ವ್ಯವಸ್ಥೆ ಮೆರೆಯುತಿತ್ತು. ಬ್ರಾಹ್ಮಣರು ಮತ್ತು ಕೆಲವು ಮೇಲ್ವರ್ಗದವರನ್ನು ಬಿಟ್ಟರೆ ಬಹುಸಂಖ್ಯಾತರು ನಿಮ್ನ ಜಾತಿಗಳಿಗೆ ಸೇರಿದವರಾಗಿರುತ್ತಿದ್ದರು. ಮಹಾರ್, ಚಮ್ಮಾರ್ ಮುಂತಾದ ಜಾತಿಗಳಿಗೆ ಸೇರಿದವರು ಅಸ್ಪೃಶ್ಯರಾಗಿದ್ದರು. ಅವರ ಉಗುಳು ರಸ್ತೆಯ ಮೇಲೆ ಬಿದ್ದು ಬ್ರಾಹ್ಮಣರ ಕಾಲಿಗೆ ತಾಗಿ ಅವರು ಅಪವಿತ್ರರಾಗುವುದನ್ನು ತಡೆಯಲು ನಿಮ್ನ ಜಾತಿಗಳಿಗೆ ಸೇರಿದವರು ಕುತ್ತಿಗೆಗೆ ಚಿಕ್ಕ ಗಡಿಗೆಯನ್ನು ಕಟ್ಟಿಕೊಳ್ಳಬೇಕಾಗಿತ್ತು. ರಸ್ತೆಯ ಮೇಲೆ ಮೂಡುವ ಕಾಲಿನ ಗುರುತುಗಳನ್ನು ಅಳಿಸಿಹಾಕಲು ಅಸ್ಪೃಶ್ಯರು ಸೊಂಟಕ್ಕೆ ಮುಳ್ಳಿನ ಗಿಡಗಂಟೆಗಳನ್ನು ಸಿಕ್ಕಿಸಿಕೊಳ್ಳಬೇಕಾಗಿತ್ತು. ಅಸ್ಪೃಶ್ಯನಾದವನು ದೇವಸ್ಥಾನ ಪ್ರವೇಶ ಮಾಡುವಂತಿರಲಿಲ್ಲ. ವೇದಮಂತ್ರ ಕೇಳುವಂತಿರಲಿಲ್ಲ–ಅಸ್ಪೃಶ್ಯರ ಮಕ್ಕಳಿಗೆ ಶಿಕ್ಷಣದ ಸೌಲಭ್ಯವಿರಲಿಲ್ಲ. ಸವರ್ಣೀಯ ಧಣಿಗಳ ಚಾಕರಿ ಮಾಡಿ, ಜೀತದಾಳಾಗಿ ಬದುಕಬೇಕಾಗಿತ್ತು.

ಮಹಿಳೆಯರ ಯಾತನೆಯನ್ನು ಕೇಳುವವರಿರಲಿಲ್ಲ. ಅವರು ಶಿಕ್ಷಣದ ಹಕ್ಕಿನಿಂದ ವಂಚಿತರಾಗಿದ್ದರು. ಹಾಗಾಗಿ ಮೌಢ್ಯ, ಕಂದಾಚಾರಗಳ ಗುಲಾಮರಾಗಿದ್ದರು. ಶತಮಾನಗಳಿಂದ ಬೆಳೆದು ಬಂದ ಕೀಳರಿಮೆಯಿಂದಾಗಿ ಅವಮಾನದ ಬದುಕನ್ನು ಒಪ್ಪಿಕೊಂಡು ಜೀವಿಸುತ್ತಿದ್ದರು.

ಫುಲೆ ದಂಪತಿಗಳು ಮಹಿಳೆಯರ, ವಿಶೇಷವಾಗಿ ನಿಮ್ನ ವರ್ಗದ ಮಹಿಳೆಯರ ಗೋಳನ್ನು ನೋಡಿ ತುಂಬ ನೊಂದಿದ್ದರು. ದಲಿತ ಮಹಿಳೆಯರನ್ನು ದೇವದಾಸಿಯರನ್ನಾಗಿ ಪರಿವರ್ತಿಸುವ ಸಮಾಜ ವ್ಯವಸ್ಥೆಯನ್ನು ಬದಲಾಯಿಸುವುದು ಸಾಧ್ಯವಾಗಬೇಕಾದರೆ ಮಹಿಳೆಯರಿಗೆ ಶಿಕ್ಷಣದ ಅವಕಾಶವನ್ನು ಕಲ್ಪಿಸುವುದು ಅತ್ಯಗತ್ಯ ಎಂದು ಮನಗಂಡರು.

ಸಾವಿತ್ರಿಬಾಯಿಯವರು ಹೆಣ್ಣು ಮಕ್ಕಳಿಗಾಗಿ ಮತ್ತು ದಲಿತರಿಗಾಗಿ ಜ್ಯೋತಿಬಾರವರ ಮಾರ್ಗದರ್ಶನದಲ್ಲಿ ಅನೇಕ ಕಾರ್ಯಗಳನ್ನು ಮಾಡಿದರು. ಅಸ್ಪೃಶ್ಯರಿಗಾಗಿ, ಮತ್ತು ಹೆಣ್ಣುಮಕ್ಕಳಿಗಾಗಿ ಶಾಲೆಗಳನ್ನು ಆರಂಭಿಸಿದರು. ಬರಗಾಲದ ಸಮಯದಲ್ಲಿ ಬಡವರಿಗಾಗಿ ಅನ್ನಛತ್ರಗಳನ್ನು ಪ್ರಾರಂಭಿಸಿದರು. ಬ್ರಾಹ್ಮಣ ವಿಧವೆಯರು ತಲೆಬೋಳಿಸುವುದನ್ನು ವಿರೋಧಿಸುವ ಮತ್ತು ಅವರ ಪುನರ್ವಿವಾಹವನ್ನು ಪ್ರೋತ್ಸಾಹಿಸುವ ಜಾಗೃತಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡರು. ದೇವದಾಸಿ ಪದ್ಧತಿಯ ವಿರುದ್ಧ ಮಹಿಳಾ ಜಾಗೃತಿ ಉಂಟುಮಾಡಲು ಶ್ರಮಿಸಿದರು.

ಆ ಕಾಲದ ಬ್ರಾಹ್ಮಣ ವಿಧವೆಯರು ಅತಿ ಹೆಚ್ಚು ಕೌಟುಂಬಿಕ ಹಿಂಸೆಗೆ ಬಲಿಯಾಗುತ್ತಿದ್ದರು. ಮನೆಯಲ್ಲಿ ಮಾವ, ಮೈದುನ ಮೊದಲಾದವರಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದರು. ಅವರಿಗೆ ಮಕ್ಕಳಾದರೆ 'ಬಾಲ ಹತ್ಯೆ' ಮಾಡುತ್ತಿದ್ದರು. ಅಥವ ಗರ್ಭವತಿಯರಾದರೆ ವಿಧವೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಈ ದೌರ್ಜನ್ಯವನ್ನು ತಡೆಯಲು ಜ್ಯೋತಿಬಾರವರು 'ಬಾಲಹತ್ಯಾ ಪ್ರತಿಬಂಧಕ ಗೃಹ' ವನ್ನು ಸ್ಥಾಪಿಸಿದರು. ತರುಣ ಬ್ರಾಹ್ಮಣ ವಿಧವೆಯರಿಗೆ ಇದು ಬಹುದೊಡ್ಡ ಆಧಾರವಾಯಿತು. ಸ್ವಂತ ಮನೆಯಲ್ಲಿ ಸ್ಥಾಪಿಸಲಾದ ಆಶ್ರಮದಲ್ಲಿ ಸಾವಿತ್ರಿಬಾಯಿಯವರು 35 ಮಂದಿ ಬ್ರಾಹ್ಮಣ ವಿಧವೆಯರ ಬಾಣಂತನವನ್ನು ಮಾಡಿದರು.

ಸಾವಿತ್ರಿಬಾಯಿ ಫುಲೆಯವರು ಕೇವಲ ಶಿಕ್ಷಕಿಯಾಗಿರಲಿಲ್ಲ. ಅವರು ಜ್ಯೋತಿಬಾರವರ ಇಡೀ ಸಮಾಜ ಸುಧಾರಣಾ ಆಂದೋಲನಕ್ಕೆ ಬೆಂಬಲವಾಗಿ ನಿಂತ ಕ್ರಿಯಾಶೀಲ ಕಾರ್ಯಕರ್ತೆಯಾಗಿದ್ದರು. ಸಾವಿತ್ರಿಬಾಯಿಯವರು ಭಾರತದ ಇತಿಹಾಸದಲ್ಲಿ ಹೆಣ್ಣು ಮಕ್ಕಳ ಹಾಗೂ ಶೂದ್ರ, ಅತಿಶೂದ್ರರ ಶೈಕ್ಷಣಿಕ ಮುನ್ನೆಡೆಯ ಪ್ರಥಮ ಕ್ರಾಂತಿಕಾರಿ. ಜ್ಯೋತಿಬಾರವರು 1890 ನವೆಂಬರ್ 28 ರಂದು ದೀರ್ಘ ಅನಾರೋಗ್ಯದಿಂದ 73 ನೇ ವಯಸ್ಸಿನಲ್ಲಿ ನಿಧನರಾದರು. ಪತಿಯ ನಿಧನದ ನಂತರ ಸಾವಿತ್ರಿಬಾಯಿಯವರು ತನ್ನ ಪತಿ ಬಿಟ್ಟುಹೋದ ಸಮಾಜ ಸುಧಾರಣೆಯ ಕೆಲಸವನ್ನು ಮುಂದುವರೆಸಿದರು. ಕೊನೆಗೆ 1897 ಮಾರ್ಚ್ 10 ರಂದು ಪ್ಲೇಗ್ ರೋ ಪೀಡಿತರಾಗಿ ಮಹಾಪರಿನಿರ್ವಾಣ ಹೊಂದಿದರು. ಜನವರಿ 3, ಅವರ ಜನ್ಮದಿನ. ಅವರನ್ನು ಗೌರವದಿಂದ ಸ್ಮರಿಸುವ ದಿನ.

ಕುವೆಂಪು ಅವರ 117ನೇ ಹುಟ್ಟು ಹಬ್ಬದ ಪ್ರಯುಕ್ತ

ಹಗರಿಬೊಮ್ಮನಹಳ್ಳಿಯಲ್ಲಿ 10 ಜೋಡಿಗಳ ಸರಳ ಸಾಮೂಹಿಕ ಮದುವೆ



ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ವತಿಯಿಂದ ಕುವೆಂಪು ಅವರ 117ನೇ ಹುಟ್ಟು ಹಬ್ಬದ ಪ್ರಯುಕ್ತ ಹಗರಿಬೊಮ್ಮನಹಳ್ಳಿಯ ಸಮುದಾಯ ಭವನದಲ್ಲಿ 10 ಜೋಡಿಗಳ ಸರಳ ಸಾಮೂಹಿಕ ಮದುವೆ ಮಾಡಿಸಲಾಯಿತು.

ವಿವಾಹ ಕಾರ್ಯಕ್ರಮಕ್ಕೆ ಮಾ.ನಿ.ಪ್ರ.ಪ್ರಭುಸ್ವಾಮಿ, ಪ್ರಭುದೇವರ ವಿರಕ್ತಮಠ, ಸಂಡೂರು. ಇವರು ನವಜೋಡಿಗಳಿಗೆ ಪ್ರತಿಜ್ಞೆ ಬೋಧನೆ ಮಾಡಿ ಈ ಸಂಘಟನೆ ಸಮಾಜದ ಬೆಳವಣಿಗೆ ಮತ್ತು ಶೋಷಣೆ ವಿಮುಕ್ತಿಗೆ ಅಡಿ ಇಡುತ್ತಿದೆ. ಅಂದರೆ ನಮ್ಮ ಬದುಕಿನಲ್ಲಿ ಯಾವುದೇ ಮೂಡ ನಂಬಿಕೆಗಳು ಅಡ್ಡಿಯಾಗತೆ ಇಂದು ಪ್ರತಿಜ್ಞಾ ವಚನಗಳ ಬೋಧಿಸುವ ಮೂಲಕ ನಿಮ್ಮ ಬದುಕು ಹೊಸ ಬೆಳಕಿನತ್ತ ಸಾಗಲಿ. ನಾವು ಬೋಧಿಸುವ ಪ್ರತಿ ಸಾರ ನಿಮ್ಮ ಜೀವನಕ್ಕೆ ದಾರಿ ದೀಪವಾಗಿ ನಿಲ್ಲಲಿ. ಕಳೆದ ಎರಡು ವರ್ಷಗಳ ಕಾಲ ನಾನು ಈ ವಿವಾಹ ಕಾರ್ಯದಲ್ಲಿ ಬಂದಿದ್ದೇನೆ ಪ್ರತಿ ಸಾರಿಗಿಂತ ಈ ಸಂಧರ್ಬ ಬಹಳ ವಿಭಿನ್ನ ಏಕೆಂದರೆ ಕೋರಾಣ ಜನರದನ್ನು ಎದುರಿಸುವ ಬದಲು ಹಲವು ಮಾಧ್ಯಮಗಳು ಜನರನ್ನು ಎದುರಿಸುವ ಮತ್ತು ನಮ್ಮ ಪ್ರಭುತ್ವದ ದಾಳ ಎಲ್ಲರಿಗೂ ಭಯ ಹುಟ್ಟಿಸುತ್ತದೆ. ಇದಲ್ಲದೆ ದೇಶದಲ್ಲಿ ಹಲವು ಕೃಷಿ ನೀತಿಗಳು ಬದಲಾಯಿಸಲು ಮುಂದಾಗಿದ್ದಾರೆ. ಜನರ ಬದುಕಿನ ಭವನೆಗಳು ಬದಲಾಗಿದ್ದರು ಮತ್ತು ಇಂದು ಜನ ಹೋರಾಟದ ದಾರಿ ಹಿಡಿದಿದ್ದರು, ಸಾವು ನೋವುಗಳ ಮದ್ಯೆ ಸಾಗಿದ್ದರು ಇದಕ್ಕೆ ಅಂತಿಮ ದಾರಿ ಸಿಗದಾಗಿದೆ.



ಇಂತಹ ಸಂದರ್ಭದಲ್ಲಿ ಈ ಸರಳವಾಗಿ ವಿವಾಹ ನಡೆಯುತ್ತದೆ ಎಂದರೆ ಇತಿಹಾಸದಲ್ಲಿ ಹೆಸರಿಸಲಾಗುವುದೇ ಸರಿ ಎಂದರು.

ಯು.ಬಸವರಾಜು, ಗೌರವ ಅಧ್ಯಕ್ಷರು, ಬಡತನದ ಬದುಕು ಯಾರನ್ನು ಬಿಟ್ಟಿಲ್ಲ ನಾವು ಈ ಸಂದರ್ಭಗಳಲ್ಲಿ ಎಲ್ಲಾರು ನೋವಿನ ಬದುಕಿನಲ್ಲಿ ಬದುಕುವಂತಾಗಿದೆ. ಇದರ ಕಾಳಜಿ ನಮ್ಮ ಸಂಘಟನೆಗೆ ಇದೆ ಎಂದು ಹೇಳಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ಮಾತನ್ನು ಮಾಳಮ್ಮ.ಬಿ ರಾಜ್ಯ ಪ್ರಧಾನಕಾರ್ಯದರ್ಶಿ ನಾವು ಮಾಡಿದ ನಾಲ್ಕು ವರ್ಷದ ಈ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆದಿದೆ. ಸರ್ಕಾರದ ಆದೇಶದಂತೆ ನಾವು ಎಲ್ಲಾರೀತಿಯಿಂದಲು ಭದ್ರತೆಯನ್ನು ಕಾಪಾಡಿಕೊಂಡು ಬಂದಿದ್ದೇವೆ ಎಂದು ಮಾತನಾಡಿದರು.

ಕಾರ್ಯಕ್ರಮದಲ್ಲಿಶ್ರೀ ಮತಿ ಕವಿತ ಹಾಲ್ದಳ್ ವಿಜಯಕುಮಾರ್.ಪುರ ಸಭೆ ಅಧ್ಯಕ್ಷರು ಹಗರಿಬೊಮ್ಮನಹಳ್ಳಿ, ಆರ್.ಎಸ್. ಬಸವರಾಜು,ಗೋಪಲ್ ನಾಯ್ಕ. ನೋಡಲ್ ಅಧಿಕಾರಿಗಳು, ಹುರಿಕಡ್ಲಿ ಶಿವಕುಮಾರ್. ಸಾಹಿತಿಗಳು, ಆಂಜನೇಯ ರೆಡ್ಡಿ, ಕೆ.ಪಿ.ದೇವರಾಜ್. ಕೃಷಿಕ ಸಮಾಜ, ಸೈಯ್ಯದ್ ಇರ್ಫಾನ್. ಟಿಪ್ಪು ಸುಲ್ತಾನ್ ಸಂಘ, ಮೇಟಿ ಕೊಟ್ರಪ್ಪ. ಸಾಹಿತಿಗಳು, ಎಸ್ ಜಗನ್ನಾಥ ಇದ್ದರು. ಈ ಕಾರ್ಯಕ್ರಮವನ್ನು ದೊಡ್ಡಬಸವರಾಜ್ .ಎಸ್.ಎಫ್.ಐ ಅವರು ನಿರೂಪಣೆ ಮಾಡಿದರು ಅಬ್ದುಲ್ ಸುಬಾನ್ ವಂಧನರ್ಪನೆ ಮಾಡಿದರು.

ಅತಿಥಿ ಅಂಕಣ



ನಾ ದಿವಾಕರ

ಕಾರ್ಮಿಕ ಹೋರಾಟಗಳಿಗೆ ಐಕ್ಯತೆಯ ಸ್ಪರ್ಶ ಬೇಕಿದೆ

2020 ಜ್ಞಾನೋದಯದ ವರ್ಷ ಎಂದರೂ ಅಡ್ಡಿಯಿಲ್ಲ.. ಪೌರತ್ವ ತಿದ್ದುಪಡಿ ಕಾಯ್ದೆ, ಕೋವಿಡ್ ಸಂದರ್ಭದ ವಲಸೆ ಕಾರ್ಮಿಕರ ಬವಣೆ, ಕೋಟ್ಯಂತರ ರೈತರ ಸುದೀರ್ಘ ಮುಷ್ಕರ ಮತ್ತು ವಿವಿಧ ನೆಲೆಗಳಲ್ಲಿ ಸ್ಫೋಟಿಸುತ್ತಿರುವ ಕಾರ್ಮಿಕರ ಆಕ್ರೋಶ ಇವೆಲ್ಲವೂ ಶ್ರಮಜೀವಿಗಳಿಗೆ ಸಂಬಂಧಪಟ್ಟಿರುವುದನ್ನು ಗಮನಿಸಲು ಈ ವರ್ಷದ ಬೆಳವಣಿಗೆಗಳು ಅವಕಾಶ ನೀಡಿವೆ. ಸಂಘಟಿತ ಕಾರ್ಮಿಕ ವಲಯ ಈ ಸೂಕ್ಷ್ಮವನ್ನು ಅರ್ಥಮಾಡಿಕೊಂಡರೆ ಭಾರತದ ಶ್ರಮಿಕರ ಭವಿಷ್ಯದಲ್ಲಿ ಬೆಳಕು ಕಾಣಲು ಸಾಧ್ಯ. ಇದು ಚಾರಿತ್ರಿಕ ಸತ್ಯವೂ ಹೌದು, ಸವಾಲೂ ಹೌದು.

ನವೆಂಬರ್ 26 2020 ನವ ಶತಮಾನದ ಭಾರತದಲ್ಲಿ ಇತಿಹಾಸ ಸೃಷ್ಟಿಸಿದ ದಿನ. ಮೂರು ದಶಕಗಳ ನವ ಉದಾರವಾದಿ ಆರ್ಥಿಕ ನೀತಿಗಳು ಮತ್ತು ಖಾಸಗೀಕರಣದ ಪ್ರಕ್ರಿಯೆ ಭಾರತೀಯ ಸಮಾಜದಲ್ಲಿ ಸೃಷ್ಟಿಸಿರುವ ತರತಮಗಳು ಸಾಮಾಜಿಕ ಸಮತೋಲನವನ್ನೇ ಭಂಗಗೊಳಿಸಿದ್ದು, ಬಡವ ಶ್ರೀಮಂತರ ನಡುವಿನ ಕಂದರ ಹೆಚ್ಚಾಗುತ್ತಿರುವಂತೆಲ್ಲಾ, ಸುರಕ್ಷಿತ ವಲಯದಲ್ಲಿರುವ ಮತ್ತು ಹಿತವಲಯದಲ್ಲಿರುವ ಮಧ್ಯಮ ವರ್ಗದ ಜನತೆಯೂ ಈಗ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. 1990ರ ದಶಕದಲ್ಲಿ ಭಾರತ ಮಾರುಕಟ್ಟೆ ಆರ್ಥಿಕತೆಯನ್ನು ಅಪ್ಪಿಕೊಂಡಾಗ ಉಂಟಾಗಿದ್ದ ಆತಂಕಗಳು ಇಂದು ಆಕ್ರೋಶದ ನೆಲೆಗಳಾಗಿ ಪರಿವರ್ತನೆಯಾಗಿವೆ.

2020 ಆರೋಗ್ಯದ ದೃಷ್ಟಿಯಿಂದ ಒಂದು ಕರಾಳ ವರ್ಷ. ಕೋವಿಡ್ 19 ಸೃಷ್ಟಿಸಿದ ಆತಂಕಗಳು ಮತ್ತು ಕೋವಿಡ್ ನಿರ್ವಹಣೆಯಲ್ಲಿನ ದೋಷಗಳಿಂದ ಸಾವಿರಾರು ಮಂದಿ ಜೀವ ಕಳೆದುಕೊಂಡಿದ್ದಾರೆ, ಲಕ್ಷಾಂತರ ಮಂದಿ ಬದುಕು ಕಳೆದುಕೊಂಡಿದ್ದಾರೆ, ಕೋಟ್ಯಂತರ ಮಂದಿ ತಮ್ಮ ಜೀವನೋಪಾಯದಿಂದ ವಂಚಿತರಾಗಿದ್ದಾರೆ. ಈ ಸಮಸ್ಯೆ ಮತ್ತು ಬಿಕ್ಕಟ್ಟುಗಳಿಗೆ ಕೊರೋನಾ ವೈರಾಣುವೊಂದೇ ಕಾರಣವಲ್ಲ. ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಕಾಳಜಿಯ ಪರಿಕಲ್ಪನೆ ಜೀವಂತವಾಗಿದ್ದಿದ್ದಲ್ಲಿ ಇಷ್ಟೊಂದು ಸಾವು ನೋವು ಸಂಭವಿಸುತ್ತಿರಲಿಲ್ಲ. ಕೋವಿಡ್ ನಿರ್ವಹಣೆಗೆ ಪ್ರತ್ಯೇಕ ಕಾನೂನು ರಚಿಸದೆ ಇರುವ ಕೆಲವೇ ರಾಷ್ಟ್ರಗಳ ಪೈಕಿ ಭಾರತ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ.

ಇಷ್ಟಾದರೂ ಒಂದು ಕೋಟಿ ಸೋಂಕಿತರು, ಒಂದೂವರೆ ಲಕ್ಷ ಮೃತರು ಮತ್ತು ಲಕ್ಷಾಂತರ ಸಂಖ್ಯೆಯ ಬದುಕು ಕಳೆದುಕೊಂಡವರ ನಡುವೆ ನಿಂತು "ಇಡೀ ದೇಶವೇ ಒಗ್ಗಟ್ಟಿನಿಂದ ಕೋವಿಡ್ ವಿರುದ್ಧ ಹೋರಾಡುತ್ತಿದೆ" ಎಂದು ಹೇಳುವುದು ಆತ್ಮವಂಚನೆಯೇ ಸರಿ. ಹೋರಾಡಿರುವುದು ನಿಜ, ವಾರಿಯರ್ಸ್ ಎಂದು ಕರೆಯಲಾಗುವ ಮುಂಚೂಣಿ ಕಾರ್ಯಕರ್ತರು, ಸರ್ಕಾರದ ತಿಕ್ಕಲು ನಿಯಮಗಳ ಪಾಲನೆಯನ್ನು ಗಮನಿಸುವ ಪೊಲೀಸ್ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರು ಮತ್ತು ವೈದ್ಯರು ಈ ಹೋರಾಟದ ನೈಜ ಸೇನಾನಿಗಳು. ಆದರೆ ಇಡೀ ದೇಶವೇ ಸಾವುಗಳ ನಡುವೆ ಪರದಾಡುತ್ತಿದ್ದಾಗ ತಮಗೆ ಸಂಬಂಧವೇ ಇಲ್ಲದಂತಿದ್ದ ಖಾಸಗಿ ವೈದ್ಯಲೋಕದ ಒಂದು ವರ್ಗ, ಜನಸಾಮಾನ್ಯರ ಅಸಹಾಯಕತೆ ಮತ್ತು ಜೀವ ಭಯವನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡ ಖಾಸಗಿ ಆಸ್ಪತ್ರೆಗಳೂ ನಮ್ಮ ನಡುವೆ ಇರುವುದನ್ನು ಗಮನಿಸಬೇಕಿದೆ. ಈ ವರ್ಗಗಳನ್ನು ಸಮೀಪಿಸುವ ಧೈರ್ಯವನ್ನೂ ಭಾರತದ ಆಡಳಿತ ವ್ಯವಸ್ಥೆ ತೋರದೆ ಇರುವುದು





ಈ ದೇಶದ ಮತ್ತೊಂದು ಅಮಾನುಷ ಮುಖವನ್ನು ಪರಿಚಯಿಸುತ್ತದೆ.

ಈ ವಿಕೃತಿಗಳ ನಡುವೆಯೇ ಭಾರತದ ದುಡಿಯುವ ವರ್ಗಗಳು ಕೊರೋನಾಗಿಂತಲೂ ಮಾರಕವಾದಂತಹ ಒಂದು ಆಡಳಿತ ವ್ಯವಸ್ಥೆಯನ್ನು ಎದುರಿಸಬೇಕಾಗಿದ್ದು 2020ರ ದುರಂತಗಳಲ್ಲೊಂದು. ಕೋವಿಡ್ 19 ಹಿನ್ನೆಲೆಯಲ್ಲಿ ಇಡೀ ದೇಶದ ಜನಜೀವನ ಸ್ತಬ್ಧವಾಗಿದ್ದಾಗ, ಮಾರುಕಟ್ಟೆ ಬಂದ್ ಆಗಿದ್ದಾಗ, ಜನಸಾಮಾನ್ಯರು ಮನೆಯಿಂದ ಹೊರಬರುವುದೂ ನಿರ್ಬಂಧಕ್ಕೊಳಪಟ್ಟಿದ್ದಾಗ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ದೇಶದ ಕೋಟ್ಯಂತರ ಕಾರ್ಮಿಕರ ಬದುಕಿಗೆ ಮಾರಕವಾಗುವಂತಹ ಮಸೂದೆಗಳನ್ನು ಜಾರಿಗೊಳಿಸಿ, ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಮೂಲಕ ನಾಲ್ಕು ಸಂಹಿತೆಗಳನ್ನು ರೂಪಿಸಿವೆ. ಈ ನೂತನ ಕಾಯ್ದೆಗಳು ಕಾರ್ಪೋರೇಟ್ ಉದ್ದಿಮೆಗಳ ಮತ್ತು ಮಾರುಕಟ್ಟೆಯ ಪರ ಇರುವುದರಿಂದ ಸಹಜವಾಗಿಯೇ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತದೆ.

ಭಾರತದ ಕಾರ್ಮಿಕ ಚಳುವಳಿಗೆ ನೂರು ವರ್ಷಗಳ ಇತಿಹಾಸವಿದೆ. ಒಂದು ಸುದೀರ್ಘ ಪರಂಪರೆಯೂ ಇದೆ. ಗ್ರಾಮೀಣ ಕೃಷಿ ಕಾರ್ಮಿಕರಿಂದ ಅತ್ಯುನ್ನತ ಹಂತದ ಹಿತವಲಯದ ಕಾರ್ಮಿಕರವರೆಗೂ ಈ ದೇಶದ ದುಡಿಯುವ ವರ್ಗಗಳು ಪಡೆಯುತ್ತಿರುವ ಸೌಲಭ್ಯ, ಸವಲತ್ತು ಮತ್ತು ವೇತನ ಇತ್ಯಾದಿ ಹಣಕಾಸು ಸೌಲಭ್ಯಗಳ ಹಿಂದೆ ಕಾರ್ಮಿಕ ಚಳುವಳಿಯ ಪರಿಶ್ರಮ ಇರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಪ್ರಭುತ್ವದ ಕುಟಿಲ ನೀತಿಗಳು, ಅಧಿಕಾರ ರಾಜಕಾರಣದ ಆಮಿಷ, ಔದ್ಯಮಿಕ ಜಗತ್ತಿನ ಹುನ್ನಾರಗಳು, ಜಾತಿ, ಧರ್ಮ ಮತ್ತು ಪ್ರಾದೇಶಿಕ ಅಸ್ಮಿತೆಗಳ ಆತಂಕಗಳು ಭಾರತದ ಕಾರ್ಮಿಕ ಚಳುವಳಿಯ ವಿಘಟನೆಗೆ ಕಾರಣವಾಗಿದ್ದರೂ ಈ ದೇಶದ ಕಾರ್ಮಿಕರು ತಮ್ಮ ಹೋರಾಟಗಳ ಮೂಲಕ ಹಕ್ಕುಗಳನ್ನು ಪಡೆದುಕೊಂಡಿದ್ದಾರೆ, ಉಳಿಸಿಕೊಂಡು ಬಂದಿದ್ದಾರೆ.

ಇಂದು ಈ ಹಕ್ಕುಗಳಿಗೆ ಚ್ಯುತಿ ಬರುವ ಸಾಧ್ಯತೆಗಳು ಹೆಚ್ಚಾಗಿದ್ದು, ಕಾರ್ಮಿಕರು ಅಭದ್ರತೆಯ ನೆರಳಲ್ಲೇ ಬದುಕುವಂತಹ ವಾತಾವರಣವನ್ನು ಸೃಷ್ಟಿಸಲಾಗಿದೆ. ಕಾರ್ಮಿಕ ಕಾನೂನುಗಳಿಗೆ ಮಾಡಿರುವ ತಿದ್ದುಪಡಿಗಳು ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯನ್ನು ಪುಷ್ಟೀಕರಿಸುವ ಮತ್ತು ಕಾರ್ಪೋರೇಟ್ ಔದ್ಯಮಿಕ ಹಿತಾಸಕ್ತಿಗಳನ್ನು ಸಂರಕ್ಷಿಸುವ ಸಾಧನಗಳಾಗಿದ್ದು, ಕಾರ್ಮಿಕರು ಅನಿಶ್ಚಿತತೆಯ ನೆರಳಲ್ಲೇ ತಮ್ಮ ದುಡಿಮೆಯಲ್ಲಿ ತೊಡಗುವ ಸಂದರ್ಭ ಎದುರಾಗಲಿದೆ. ನವ ಉದಾರವಾದ ಕೇವಲ ಒಂದು ಆರ್ಥಿಕ ವಿದ್ಯಮಾನವಲ್ಲ ಎನ್ನುವುದನ್ನು ಆತ್ಮನಿರ್ಭರ ಭಾರತ ಪದೇ ಪದೇ ನಿರೂಪಿಸುತ್ತಿದೆ. ಮಾರುಕಟ್ಟೆಯ ಹಿತಾಸಕ್ತಿಗಳನ್ನು ಕಾಪಾಡಲು ಚುನಾಯಿತ ಸರ್ಕಾರ, ನ್ಯಾಯಾಂಗ ಮತ್ತು ಕಾರ್ಯಾಂಗ ವ್ಯವಸ್ಥೆ ಮತ್ತು ಕಾನೂನು ಪಾಲಕರು ತುದಿಗಾಲಲ್ಲಿ ನಿಂತಿರುವುದನ್ನೂ ಇತ್ತೀಚಿನ ಬೆಳವಣಿಗೆಗಳಲ್ಲಿ ಗಮನಿಸಿದ್ದೇವೆ.

ಹಾಗೆಯೇ ಪ್ರಭುತ್ವ ಮತ್ತು ಪ್ರಜೆಗಳ ನಡುವಿನ ಸೂಕ್ಷ್ಮ ಕೊಂಡಿಯಾಗಿ, ಪ್ರಭುತ್ವದ ಮತ್ತು ಆಡಳಿತ ವ್ಯವಸ್ಥೆಯ ಲೋಪಗಳನ್ನು ಎತ್ತಿ ತೋರಿಸುತ್ತಾ ಸಾರ್ವಭೌಮ ಪ್ರಜೆಗಳ ಹಿತಾಸಕ್ತಿಗಳನ್ನು ಕಾಪಾಡುವ ಒಂದು ಸಾಧನವಾಗಿ ಕಾರ್ಯ ನಿರ್ವಹಿಸಬೇಕಾದ ಮಾಧ್ಯಮ ವಲಯವೂ ನವ ಉದಾರವಾದದಲ್ಲಿ ತನ್ನ ಮೂಲ ನೆಲೆಯನ್ನು ಕಳೆದುಕೊಂಡು ಮಾರುಕಟ್ಟೆಯ ಒಂದು ಭಾಗವಾಗಿದೆ. ಕರ್ನಾಟಕದ ಗ್ರಾಮಪಂಚಾಯತ್ ಚುನಾವಣೆಗಳಲ್ಲಿ ಪಂಚಾಯತ್ ಸದಸ್ಯ ಸ್ಥಾನಗಳನ್ನು ಹರಾಜು ಹಾಕಿರುವುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಆದರೆ ಶಾಸಕರ ಖರೀದಿ, ರೆಸಾರ್ಟ್ ರಾಜಕಾರಣ ಮತ್ತು ಮಾಧ್ಯಮಗಳ ವಂದಿಮಾಗಧ ಧೋರಣೆಗಳನ್ನು ನೋಡಿದರೆ ಈ ಬೆಳವಣಿಗೆಯಿಂದ ಅಚ್ಚರಿಯೇನೂ ಆಗಬೇಕಿಲ್ಲ. ಆಡಳಿತ ವ್ಯವಸ್ಥೆಯ ಎಲ್ಲ ಅಂಗಗಳೂ ಮಾರುಕಟ್ಟೆಯ ಸರಕುಗಳಾಗಿರುವ ಸಂದರ್ಭದಲ್ಲಿ ನಾವಿದ್ದೇವೆ. ಈ ಎಲ್ಲ ವಿದ್ಯಮಾನಗಳು ಸಂವಿಧಾನದ ಚೌಕಟ್ಟಿನಲ್ಲೇ ನಡೆಯುತ್ತಿವೆ, ಸಾಂವಿಧಾನಿಕ ಸಂಸ್ಥೆಗಳು ಕೈಕಟ್ಟಿ ಕುಳಿತಿವೆ. ಇದು ಏನನ್ನು ಸೂಚಿಸುತ್ತದೆ ?

ಕರ್ನಾಟಕವನ್ನೂ ಸೇರಿದಂತೆ ದೇಶದ ಇತರೆಡೆಗಳಲ್ಲಿ ಹೆಚ್ಚುತ್ತಿರುವ ಕಾರ್ಮಿಕ ಮುಷ್ಕರಗಳನ್ನು ಈ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಎರಡು ಮುಷ್ಕರಗಳು ಗಮನ ಸೆಳೆಯುತ್ತವೆ. ಯಾವುದೇ ಕಾರ್ಮಿಕ ಸಂಘಟನೆಯೇ ಇಲ್ಲದೆ ಮಾಲಿಕ ವರ್ಗದ ವಿರುದ್ಧ ಹೋರಾಡಿದ ಕೋಲಾರದ ಬಳಿಯ ನರಸಾಪುರದ ವಿಸ್ಟ್ರಾನ್ ಐಫೋನ್ ಕಂಪನಿಯ ಮುಷ್ಕರ ಮತ್ತು ಅಧಿಕೃತ ಕಾರ್ಮಿಕ ಸಂಘಟನೆಯ ಆದೇಶವನ್ನೂ ಮೀರಿ ಬೆಂಗಳೂರು ಮತ್ತು ರಾಜ್ಯಾದ್ಯಂತ ನಡೆದ ಸಾರಿಗೆ ನೌಕರರ ಮುಷ್ಕರ. ಈ ಎರಡೂ ಕಾರ್ಮಿಕ ಮುಷ್ಕರಗಳಲ್ಲಿ ಲೋಪಗಳನ್ನು ಗುರುತಿಸುವ ಮುನ್ನ, ಈ ಕಾರ್ಮಿಕರು ಹಠಾತ್ತನೆ, ಏಕಾಏಕಿ ಬೀದಿಗೆ ಬಂದಿದ್ದಾದರೂ ಏಕೆ ಎಂದು ಯೋಚಿಸಿದಾಗ, ದುಡಿಯುವ ವರ್ಗಗಳ ಆತಂಕ, ಹತಾಶೆ ಮತ್ತು ಅನಿಶ್ಚಿತತೆ ಅರ್ಥವಾಗಲು ಸಾಧ್ಯ.

ವಿಸ್ಟ್ರಾನ್ ಕಾರ್ಮಿಕರು ದಾಂಧಲೆ ನಡೆಸಿ, ಕಂಪನಿಯ ಆಸ್ತಿಪಾಸ್ತಿಗೆ ಹಾನಿ ಉಂಟುಮಾಡಿರುವುದನ್ನೇ ಮುಂದಿಟ್ಟುಕೊಂಡು ಅಲ್ಲಿನ ಗುತ್ತಿಗೆ ಕಾರ್ಮಿಕರನ್ನು ಗೂಂಡಾಗಳಂತೆ ಬಣ್ಣಿಸಲಾಗುತ್ತಿದೆ. ಈ ದಾಂಧಲೆಗೆ ಕಮ್ಯುನಿಸ್ಟರೇ ಕಾರಣ ಎನ್ನುವ ಕ್ಷುಲ್ಲಕ ಆರೋಪಗಳೂ ಸಹ ಕೇಳಿಬರುತ್ತಿದೆ. ಕಾರ್ಮಿಕರ ಈ ರೀತಿಯ ಪ್ರವೃತ್ತಿಯನ್ನು ತಡೆಗಟ್ಟದೆ ಹೋದರೆ, ಕಾರ್ಮಿಕರ ಮೇಲೆ ನಿಯಂತ್ರಣ ಸಾಧಿಸದೆ ಹೋದರೆ ಆತ್ಮನಿರ್ಭರ ಭಾರತ ಸಾಧ್ಯವಾಗುವುದಿಲ್ಲ ಎಂಬ ವಿಶ್ಲೇಷಣೆಗಳು ದೇಶದ ಪ್ರಮುಖ ಪತ್ರಿಕೆಗಳಲ್ಲಿ ಹರಿದಾಡುತ್ತಿವೆ. ವಿಸ್ಟ್ರಾನ್ ಘಟನೆಯಲ್ಲಿ ಪ್ರಭುತ್ವಕ್ಕೆ ವಿಧ್ವಂಸಕರು ಕಾಣುತ್ತಿದ್ದಾರೆ. ಈ ಪ್ರವೃತ್ತಿಯನ್ನು ಹತ್ತಿಕ್ಕಲು ಬಹುಶಃ ಮುಂಬರುವ ದಿನಗಳಲ್ಲಿ ಅಲಿಖಿತ ನಿಯಮಗಳನ್ನು ರೂಪಿಸಲಾಗುತ್ತದೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, "ನಮ್ಮಲ್ಲಿ ಬಂದು ಉತ್ಪಾದನೆ ಮಾಡಿ, ನಾವು ನಿಮಗೆ ಸುಗಮ ಔದ್ಯಮಿಕ ಹಾದಿಯನ್ನು ನಿರ್ಮಿಸುತ್ತೇವೆ, ಯಾವುದೇ ಅಡೆತಡೆ ಇಲ್ಲದೆ ಉತ್ಪಾದನೆ ಮಾಡಿ ಲಾಭ ಗಳಿಸಿ ದೇಶದ ಆರ್ಥಿಕತೆಗೆ ಪುಷ್ಟಿ ನೀಡಲು ಮುಕ್ತ ಅವಕಾಶ ನೀಡುತ್ತೇವೆ" ಎನ್ನುವ ಆಶ್ವಾಸನೆಯೊಂದಿಗೆ ವಿದೇಶಿ ಕಂಪನಿಗಳನ್ನು ಆಹ್ವಾನಿಸುತ್ತಿರುವ ಆತ್ಮನಿರ್ಭರ ಭಾರತದಲ್ಲಿ ಕಾರ್ಮಿಕರ ಹಕ್ಕೊತ್ತಾಯಗಳೇ ಅಡ್ಡಗೋಡೆಗಳಾಗಿಬಿಡುತ್ತವೆ. ವಿದೇಶದಲ್ಲಿರುವ ಒಂದು ಬೃಹತ್ ಉದ್ಯಮ ತನ್ನ ಉತ್ಪನ್ನಗಳ ತಯಾರಿಕೆಯನ್ನು ಭಾರತದಲ್ಲಿ ಬಂಡವಾಳ ಹೂಡುವ ಮತ್ತೊಂದು ಬಹುರಾಷ್ಟ್ರೀಯ ಅಥವಾ ಸ್ಥಳೀಯ ಉದ್ದಿಮೆಗೆ ಒಪ್ಪಿಸುತ್ತದೆ. ಈ ಉದ್ದಿಮೆಯ ಕಾರ್ಮಿಕರನ್ನು ನೇಮಿಸಲು ಪ್ರತ್ಯೇಕ ಗುತ್ತಿಗೆ ಕಂಪನಿಗಳಿಗೆ ಅವಕಾಶ ನೀಡಲಾಗುತ್ತದೆ. ಈ ಗುತ್ತಿಗೆ ಕಾರ್ಮಿಕರ ವೇತನ, ಭತ್ಯೆ, ಭವಿಷ್ಯ ನಿಧಿ ಎಲ್ಲವೂ ಗುತ್ತಿಗೆ ಕಂಪನಿಗಳ ಹೊಣೆಯಾಗಿರುತ್ತದೆ.

ತಾವು ಕೆಲಸ ಮಾಡುವ ಕಾರ್ಖಾನೆ ಅಥವಾ ಉತ್ಪಾದನೆಯ ಘಟಕದ ಆಡಳಿತ ಮಂಡಲಿಗೂ ಈ ಗುತ್ತಿಗೆ ಕಾರ್ಮಿಕರಿಗೂ ನೇರ ಸಂಬಂಧ ಇರುವುದಿಲ್ಲ. ನೌಕರಿಗೆ ಅವಶ್ಯವಾದ ದೈನಂದಿನ ಸೌಲಭ್ಯಗಳನ್ನು ಒದಗಿಸುವುದು ಮಾತ್ರ ಉತ್ಪಾದನಾ ಘಟಕದ ಹೊಣೆಯಾಗಿರುತ್ತದೆ. ಹಾಗಾಗಿ ಈ ಗುತ್ತಿಗೆ ನೌಕರರನ್ನು ಯಾವುದೇ ಸಂದರ್ಭದಲ್ಲಾದರೂ ಉಚ್ಚಾಟಿಸುವ ಆಯ್ಕೆ ಉತ್ಪಾದನಾ ಘಟಕಕ್ಕೆ ಇರುತ್ತದೆ. ಗುತ್ತಿಗೆ ಕಂಪನಿಗಳು ಈ ಕಾರ್ಮಿಕರನ್ನು ಒಮ್ಮಿಂದೊಮ್ಮೆಲೆ ಮತ್ತಾವುದೋ ಘಟಕದಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸುವ ಅವಕಾಶವೂ ಇರುತ್ತದೆ. ಈ ಅನಿಶ್ಚಿತತೆ

ಪುಟ 15 ಕ್ಕೆ











ಆಶಾವಾದದೊಂದಿಗೆ 2021 ರ ಎಡೆಗೆ

ಪ್ರಕಾಶ ಕಾರಟ್

2020 ಭೀಕರ ವರ್ಷವಾಗಿದ್ದಾಗ್ಯೂ, ಕೊರೊನ ಮಹಾಸೋಂಕು ನಮ್ಮ ದೇಶದಲ್ಲೇ ಒಂದೂವರೆ ಲಕ್ಷ ಸಾವುಗಳನ್ನು ತಂದರೂ, ಕಪ್ಪು ಮೋಡಗಳ ನಡುವೆ ಬೆಳಕಿನ ಕಿರಣಗಳೂ ಕಾಣಿಸಿವೆ. ಮೊದಲ ಮೂರು ತಿಂಗಳಲ್ಲಿ ಸಿಎಎ-ಎನ್‌ಆರ್‌ಸಿ ವಿರೋಧಿ ಚಳುವಳಿ ದೇಶದೆಲ್ಲೆಡೆ ಹಬ್ಬಿ ಹಿಂದುತ್ವ ಕಾರ್ಯಸೂಚಿಯ ವಿರುದ್ಧ ಮೊಟ್ಟ ಮೊದಲ ಸಾಮೂಹಿಕ ಚಳುವಳಿಯಾಗಿ ಮಾರ್ಪಟ್ಟರೆ, ವರ್ಷದ ಕೊನೆಯ ಎರಡು ತಿಂಗಳಲ್ಲಿ ಎರಡನೆಯ ಸಾಮೂಹಿಕ ಚಳುವಳಿಯನ್ನು ದೇಶ ಕಂಡಿದೆ. ಅದು ಹೊಸ ವರ್ಷದಲ್ಲೂ ಮುಂದು ವರಿಯುತ್ತಿದೆ. ಹೊಸ ವರ್ಷವು ಆಶಾದಾಯಕ ಕಥನದೊಂದಿಗೆ ಆರಂಭವಾಗುತ್ತಿದೆ.

ಈಗ ತಾನೆ ಅಂತ್ಯಗೊಂಡ 2020ರ ವರ್ಷವನ್ನು 'ಭೀಕರ ವರ್ಷ' ಎಂದು ವ್ಯಾಪಕವಾಗಿ ಹಾಗೂ ಅರ್ಥವಾಗುವಂತೆ ವರ್ಣಿಸಲಾಗುತ್ತಿದೆ. ಇದು ಅರ್ಥವಾಗುವಂತದ್ದೇ. ಈ ಅಭೂತಪೂರ್ವ ವರ್ಷಕ್ಕೆ ಇದು ಸರಿಯಾದ ಸಹಜವಾದ ವಿವರಣೆಯೇ ಆಗಿದೆ; ಜಾಗತಿಕ ಮಹಾರೋಗವನ್ನು – ಕೊರೋನಾ ವೈರಾಣು ಮಹಾರೋಗವನ್ನು – ಕಂಡ ವರ್ಷ ಇದಾಗಿದೆ. ಇದಕ್ಕೆ ಸರಿಸಾಟಿಯಾಗಿ ಒಂದು ಶತಮಾನದ ಹಿಂದೆ 1918–19ರಲ್ಲಿ ಕಂಡ "ಸ್ಪಾನಿಶ್ ಫ್ಲು" ಜಗತ್ತಿನಾದ್ಯಂತ ಒಂದು ದೊಡ್ಡ ಅನಾಹುತವನ್ನೇ ಉಂಟುಮಾಡಿತ್ತು.

ಕೋವಿಡ್–19 ಮಹಾರೋಗವು ಈ ವರ್ಷದ ಕೊನೆಯ ಹೊತ್ತಿಗೆ 8.1 ಕೋಟಿ ಜನರನ್ನು ಬಾಧಿಸಿದೆ, ಮತ್ತು 18 ಲಕ್ಷ ಜನರನ್ನು ಕೊಂದುಹಾಕಿದೆ. ಅದು ದೊಡ್ಡ ಮಟ್ಟದಲ್ಲಿ ನರಳಾಟ ಉಂಟುಮಾಡಿದೆ, ಮುಖ್ಯವಾಗಿ ಆಪ್ತರನ್ನು ಕಳೆದುಕೊಂಡ ಕುಟುಂಬದವರನ್ನು ನರಳುವಂತೆ ಮಾಡಿದೆ, ಹಲವಾರು ಬದುಕುಳಿದವರಿಗೆ ಆರೋಗ್ಯದ ಸಮಸ್ಯೆಯನ್ನು ಉಂಟುಮಾಡಿದೆ.

ಈ ಮಹಾರೋಗದ ಏಕಾಏಕಿ ಆರಂಭ ಹಾಗೂ ಆ ಮಹಾರೋಗವನ್ನು ತಡೆಯಲು ಜಗತ್ತಿನಾದ್ಯಂತ ಸರ್ಕಾರಗಳು ಕೈಗೊಂಡ ಲಾಕ್ಡೌನ್ ಮತ್ತಿತರ ಕ್ರಮಗಳು ಹಿಂದೆಂದೂ ಕಾಣದ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ – ಉತ್ಪಾದನೆಗಳನ್ನು ನಿಲ್ಲಿಸುವ, ಉತ್ಪನ್ನಗಳ ತೀವ್ರ ಕಡಿತ ಹಾಗೂ ಲಕ್ಷಾಂತರ ಜನರ ಉದ್ಯೋಗ ನಷ್ಟಕ್ಕೆ – ಕಾರಣವಾಗಿದೆ.

ಈ ಜಾಗತಿಕ ಮಹಾರೋಗವು ನಮ್ಮ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ವೈರುಧ್ಯಗಳು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳನ್ನು ಎದ್ದು ಕಾಣುವಂತೆ ಎತ್ತಿ ತೋರಿಸಿತು. ಆರ್ಥಿಕ ಹಿಂಜರಿತದ ನಡುವೆ, ಶ್ರೀಮಂತರು ಇನ್ನೂ ಶ್ರೀಮಂತರಾದರು. ಹಣಕಾಸು ಕಾರ್ಪೊರೇಟುಗಳ ಲಾಭಗಳು ಗಗನಕ್ಕೇರಿದವು, ಅದೇ ಸಮಯದಲ್ಲಿ ಕೋಟ್ಯಾಂತರ ಜನರು ನಿರುದ್ಯೋಗ, ಬಡತನ ಮತ್ತು ಹಸಿವಿನಿಂದ ನರಳಿದರು.

ಭಾರತದ ಸ್ಥಿತಿ ಭಿನ್ನವಾಗಿರಲಿಲ್ಲ. ಅಮೆರಿಕದ ನಂತರ ಅತ್ಯಂತ ಹೆಚ್ಚು ಕೋವಿಡ್ ಬಾಧಿತರನ್ನು ಹೊಂದಿದ ದೇಶವೆಂದು ಭಾರತ ಕುಖ್ಯಾತಿಯನ್ನು ಪಡೆದಿದೆ. ಭಾರತದಲ್ಲಿ ಕೋವಿಡ್ ಬಾಧಿತರು 1ಕೋಟಿಗಿಂತಲೂ ಹೆಚ್ಚಿದ್ದರು. ಸರಿಸುಮಾರು 1,50,000 ಜನರು ಆ ವೈರಾಣುವಿನಿಂದ ಸಾವನ್ನಪ್ಪಿದ್ದಾರೆ. ಪೂರ್ವಯೋಜಿತವಲ್ಲದ ಹಾಗೂ ಆತುರಾತುರದ ಲಾಕ್ಡೌನ್ ಹೇರಿಕೆಯಿಂದ ಮೋದಿ ಸರ್ಕಾರವು ಆರ್ಥಿಕತೆಯನ್ನು ತೀವ್ರ ಬಿಕ್ಕಟ್ಟಿಗೆ ತಳ್ಳಿತು. ಆರ್ಥಿಕತೆಯ ನಾಶವು ಕೋಟ್ಯಾಂತರ ವಲಸೆ ಕಾರ್ಮಿಕರು ಹಸಿವು ಹಾಗೂ ರೋಗಗಳಿಂದ ತತ್ತರಿಸಿ ದೂರದಲ್ಲಿರುವ ತಮ್ಮ ಹಳ್ಳಿಗಳಿಗೆ ಪ್ರಯಾಸದಿಂದ ನಡೆದುಕೊಂಡೇ ಹೋಗಬೇಕಾದುದನ್ನು ಕಂಡಿತು. ಒಂದು ತಾತ್ಸಾರ ಭರಿತ ಸರ್ಕಾರದಿಂದಾಗಿ ಸಾಮೂಹಿಕ ದುರವಸ್ಥೆಯನ್ನು ಜನರು ಅನುಭವಿಸಬೇಕಾಯಿತು.

ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಶೇಕಡಾ (–)23.9ಕ್ಕೆ ಮತ್ತು ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡಾ (–)7.5 ಕ್ಕೆ ಕುಸಿಯಿತು. ಕೋಟ್ಯಾಂತರ ಜನರು ಉದ್ಯೋಗ ಕಳೆದುಕೊಂಡರು. ಇದು ಅನೌಪಚಾರಿಕ ವಲಯದಲ್ಲಿ ಹೆಚ್ಚಾಗಿತ್ತು. ಏಪ್ರಿಲ್ ತಿಂಗಳಲ್ಲಿ ನಿರುದ್ಯೋಗದ ದರವು ಆಘಾತಕಾರಿ ಶೇಕಡಾ 24 ರಷ್ಟಾಗಿತ್ತು ಮತ್ತು ಆರ್ಥಿಕತೆಯನ್ನು ಮತ್ತೆ ತೆರೆದಮೇಲೆ ಅದು ಸ್ವಲ್ಪ ಕಡಿಮೆಯಾದರೂ, ಡಿಸೆಂಬರ್‌ನಲ್ಲಿ ಅದು ಶೇಕಡಾ 8.5 ರಷ್ಟಾಗಿ ಹೆಚ್ಚಾಗಿಯೇ ಇತ್ತು.

ಮಹಾಸೋಂಕು ಹಾಗೂ ಸರ್ವಾಧಿಕಾರಿ ಆಳ್ವಿಕೆಯು ಜನರ ಬದುಕನ್ನು ಹಿಪ್ಪಿಹಿಂಡೆ ಮಾಡಿದೆ. ನಾಡನ್ನು ಹಸಿವು ಕದ್ದು ಬೆನ್ನಟ್ಟಿದೆ. 2020ರ ಜಾಗತಿಕ ಹಸಿವು ಸೂಚ್ಯಾಂಕದ ಪ್ರಕಾರ ಭಾರತವು 107 ದೇಶಗಳಲ್ಲಿ 94 ನೇ ಸ್ಥಾನಕ್ಕೆ ಜಾರಿದೆ. ಅದು ಕೂಡ ಭಾರತದ ಆಹಾರ ನಿಗಮದ ಉಗ್ರಾಣಗಳಲ್ಲಿ 7 ಕೋಟಿ ಆಹಾರ ಧಾನ್ಯಗಳು ದಾಸ್ತಾನಾಗಿರುವ ಸಮಯದಲ್ಲಿ!

ಈ ಕೋವಿಡ್ ಬಿಕ್ಕಟ್ಟನ್ನು ಜಗತ್ತಿನ ಇತರ ಸರ್ವಾಧಿಕಾರಿ ಆಡಳಿತಗಳು ಬಳಸಿದಂತೆ ಮೋದಿ ಸರ್ಕಾರವು ತನ್ನ ಸರ್ವಾಧಿಕಾರಿ ಆಡಳಿತವನ್ನು ಇನ್ನೂ ಬಿಗಿಗೊಳಿಸಲು ಬಳಸಿಕೊಂಡಿದೆ. ಮೊದಲನೆಯದಾಗಿ, 20 ಲಕ್ಷ ಕೋಟಿ ರೂಪಾಯಿ ಕಂತೆಯ ಅಬ್ಬರದ ಘೋಷಣೆ ಮಾಡಿದ್ದರೂ ಕಷ್ಟದಲ್ಲಿರುವ ಜನರಿಗೆ ಅಗತ್ಯ ನೆರವು ನೀಡಲು ಸರ್ಕಾರ ನಿರಾಕರಿಸಿತು. ಆದರೆ ನಿಜವಾಗಿಯೂ ಸರ್ಕಾರದ ವೆಚ್ಚವು 2.5 ಲಕ್ಷ ಕೋಟಿ ರೂಪಾಯಿಗಿಂತಲೂ ಹೆಚ್ಚಿರಲಿಲ್ಲ ಮತ್ತು ಜಿಡಿಪಿಯ ಶೇಕಡಾ ಎರಡಕ್ಕಿಂತಲೂ ಕಡಿಮೆ ಇತ್ತು. ನವ–ಉದಾರವಾದಿ ಆರ್ಥಿಕತಜ್ಞರ ಬುದ್ಧಿವಾದವನ್ನು ಕೂಡ– ಆರ್ಥಿಕತೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು ಜನರಿಗೆ ಹಣ ಸಹಾಯ ಮಾಡಬೇಕೆಂಬ ಪ್ರತಿಪಾದನೆಯನ್ನು – ಕೇಳಲೂ ಅದು ಸಿದ್ಧವಿಲ್ಲ. ಪುನಶ್ಚೇತನದ ಪ್ಯಾಕೇಜು ಕಾರ್ಪೊರೇಟ್ ಕಂಪನಿಗಳ ಲಾಭಗಳನ್ನು ಇನ್ನಷ್ಟು ಹೆಚ್ಚಿಸಲು ಸಹಾಯ ಮಾಡಿತಷ್ಟೆ. ದೇಶದ ಡಾಲರ್ ಬಿಲಿಯಾಧಿಪತಿಗಳ ಪಟ್ಟಿಯು ಇನ್ನೂ ಉದ್ದವಾಗಿ 90 'ನ್ನು ತಲುಪಿತು, 2019ರ ಡಿಸೆಂಬರ್ ತಿಂಗಳಲ್ಲಿ ಅದು 80 ಇತ್ತು. ಮುಖೇಶ್ ಅಂಬಾನಿಯ ಸಂಪತ್ತು ರೂ.6.43 ಟ್ರಿಲಿಯನ್ ಆಗಿ ಶೇಕಡಾ 37.2 ರಷ್ಟು ಹೆಚ್ಚಾಗಿದ್ದರೆ, ಅದಾನಿಯ ಸಂಪತ್ತು ರೂ.3.02 ಟ್ರಿಲಿಯನ್ ಆಗಿ ಶೇಕಡಾ 113 ರಷ್ಟು ಹೆಚ್ಚಾಗಿತ್ತು.

ಸಂಸದೀಯ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಹಾಗೂ ಕಾನೂನುಗಳ ಸರಮಾಲೆಯನ್ನೇ ಸುಗ್ರೀವಾಜ್ಞೆಗಳ ಮೂಲಕ ತಳ್ಳುವ ಯತ್ನ ತೀವ್ರಗೊಳಿಸಲಾಯಿತು. ಮೂರು ಕೃಷಿ ಕಾನೂನುಗಳು ಹಾಗೂ ಮೂರು ಕಾರ್ಮಿಕ ಕಾನೂನುಗಳು(ಮುಂಚೆಯೇ ಅಂಗೀಕರಿಸಿದ್ದ ಒಂದನ್ನು ಹೊರತುಪಡಿಸಿ) ಕಾರ್ಮಿಕರ ಹಾಗೂ ರೈತರ ಹಕ್ಕುಗಳ ಮೇಲೆ ನಡೆಸಿದ ಗಂಭೀರ ದಾಳಿಗಳಾಗಿವೆ. ಆ ಎರಡು ಜೊತೆ ಕಾನೂನುಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ಹಾಗೂ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಪ್ರಯೋಜನವಾಗುವಂತೆ ರೂಪಿಸಲಾಗಿದೆ.

ಗಣಿ ಕಾನೂನುಗಳ(ತಿದ್ದುಪಡಿ) ಕಾಯಿದೆಯನ್ನು ತೂರಿಸುವ ಮೂಲಕ ಖಾಸಗಿ ಕಲ್ಲಿದ್ದಲು ಗಣಿ ಮತ್ತು ಇತರ ಗಣಿಗಾರಿಕೆಗೆ ಅನುವು ಮಾಡಿಕೊಡಲಾಗುತ್ತಿದೆ. ಪರಿಸರ ಪ್ರಭಾವ ತಿದ್ದುಪಡಿ ನಿಯಮಗಳ ಕರಡನ್ನು ಹಲವಾರು ನಿಯಂತ್ರಣಗಳನ್ನು ಹಾಗೂ ತೀವ್ರವಾಗಿ ಬಾಧಿತರಾದ ಸ್ಥಳೀಯ ಜನರ ಅಕ್ಷೇಪಣೆಗಳನ್ನು ಬದಿಗೊತ್ತಿ ಪರಿಯೋಜನೆಗಳಿಗೆ ಅವಕಾಶ ಕಲ್ಪಿಸುವಂತೆ ವಿನ್ಯಾಸಗೊಳಿಸಲಾಗಿದೆ. ಇದು ಅರಣ್ಯ ಪ್ರದೇಶಗಳಲ್ಲಿ



ವಾಸಿಸುತ್ತಿರುವ ಆದಿವಾಸಿಗಳನ್ನು ಬಹಳವಾಗಿ ತಟ್ಟುತ್ತದೆ.

ಮಹಾಸೋಂಕಿನ ಅವಧಿಯು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ವ್ಯಾಪಕ ದಾಳಿಯನ್ನೂ ಕಂಡಿದೆ. ಯುಎಪಿಎ(ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ) ಮತ್ತು ದೇಶದ್ರೋಹ ಕಾನೂನುಗಳ ಬಳಕೆ ಮಿತಿಮೀರಿದೆ. ಹಲವಾರು ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ವಾಂಸರುಗಳು ಬಹಳವಾಗಿದ್ದ ಬಹು ಸಂಖ್ಯೆಯ ಸಿಎಎ–ವಿರೋಧಿ ಪ್ರತಿಭಟನಾಕಾರರ ಮೇಲೆ ಈಶಾನ್ಯ ದೆಹಲಿಯ ಕೋಮು ಗಲಭೆಯಲ್ಲಿ ಪಾಲ್ಗೊಂಡಿದ್ದಾರೆಂದು ಅವರ ಮೇಲೆ ಯುಎಪಿಎ ಅಡಿಯಲ್ಲಿ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿದೆ. ಅಂತರ್ಜಾತಿಯ ಮದುವೆಗಳು ಹಾಗೂ ದಂಪತಿಗಳನ್ನು ಗುರಿಯಾಗಿಸಿ 'ಲವ್–ಜಿಹಾದ್' ಸುಗ್ರೀವಾಜ್ಞೆಯನ್ನು ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶಗಳಲ್ಲಿ ಹೊರಡಿಸಲಾಗಿದೆ. ಕಾಶ್ಮೀರದಲ್ಲಿ, ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ನಾಗರಿಕ ಹಕ್ಕುಗಳ ಲಜ್ಜಾಹೀನ ಉಲ್ಲಂಘನೆ ಮುಂದುವರಿದಿದ್ದು ಹಲವಾರು ರಾಜಕೀಯ ಕಾರ್ಯಕರ್ತರನ್ನು ಜೈಲಿನಲ್ಲಿಡಲಾಗಿದೆ ಮತ್ತು ದೂರಸಂಪರ್ಕದ 4ಜಿ ಸಂಪರ್ಕವನ್ನು ಜನರಿಗೆ ವಂಚಿಸಲಾಗಿದೆ.

ಒಕ್ಕೂಟ ತತ್ವಗಳ ಕನಿಷ್ಠ ಸ್ವರೂಪವನ್ನೂ ತೆಗೆದುಹಾಕಿ ಅಧಿಕಾರ ಕೇಂದ್ರೀಕರಣ ಭರದಿಂದ ಸಾಗಿದೆ. ರಾಜ್ಯಗಳ ಹಕ್ಕುಗಳನ್ನು ಹರಣ ಮಾಡಲಾಗಿದೆ, ಅಥವಾ ಎಲ್ಲಾ ರಂಗಗಳಲ್ಲಿ ಬದಿಗೊತ್ತಲಾಗಿದೆ – ಜಿ.ಎಸ್.ಟಿ. ಕೊರತೆ ಪರಿಹಾರವನ್ನು ನಿರಾಕರಿಸಲಾಗಿದೆ; ಕೃಷಿ ಕಾಯಿದೆಗಳು ಹಾಗೂ ವಿದ್ಯುತ್ ಮಸೂದೆಗಳಂತಹ ಶಾಸನಗಳ ಮೂಲಕ ರಾಜ್ಯಗಳ ಹಕ್ಕುಗಳ ಮೇಲೆ ಅತಿಕ್ರಮಣ ನಡೆದಿದೆ; ಚುನಾಯಿತ ರಾಜ್ಯ ಸರ್ಕಾರಗಳನ್ನು ದುರ್ಬಲಗೊಳಿಸಲು ರಾಜ್ಯಪಾಲರುಗಳನ್ನು ಬಳಸಲಾಗುತ್ತಿದೆ ಮತ್ತು ರಾಜ್ಯಗಳಿಗೆ ಸಂಪನ್ಮೂಲಗಳನ್ನು ವರ್ಗಾಯಿಸಲು ಸಂವಿಧಾನೇತರ ಷರತ್ತುಗಳನ್ನು ವಿಧಿಸಲಾಗುತ್ತಿದೆ.

ಅಮೆರಿಕಾದೊಂದಿಗಿನ ರಕ್ಷಣಾ ಸಂಬಂಧವನ್ನು ಬಿಗಿಗೊಳಿಸುವ ಮೂಲಕ ಹಿಂದುತ್ವ ಶಕ್ತಿಗಳು ಹಾಗೂ ಅಮೆರಿಕ ಸಾಮ್ರಾಜ್ಯಶಾಹಿಗಳ ನಡುವಿನ ನಂಟನ್ನು ಗಟ್ಟಿಗೊಳಿಸಲಾಗಿದೆ. ಮಹಾಸೋಂಕಿನ ಅವಧಿಯು ಕ್ವಾಡ್ ಮಿಲಿಟರಿ ಮೈತ್ರಿಕೂಟವೊಂದನ್ನು ಹುಟ್ಟುಹಾಕಿದೆ.

2020 ಭೀಕರ ವರ್ಷವಾಗಿದ್ದಾಗ್ಯೂ, ಕಪ್ಪು ಮೋಡಗಳ ನಡುವೆ ಬೆಳಕಿನ ಕಿರಣಗಳೂ ಕಾಣಿಸಿವೆ. ವರ್ಷದ ಆರಂಭವು ಪೌರತ್ವ ತಿದ್ದುಪಡಿ ಕಾಯಿದೆ ಹಾಗೂ ಅದರ ಪ್ರತಿರೂಪವಾದ ರಾಷ್ಟ್ರೀಯ ಪೌರರ ರಿಜಿಸ್ಟರ್ ವಿರುದ್ಧ ಸಮರಶೀಲ ಪ್ರತಿಭಟನೆಗಳನ್ನು ಕಂಡಿತು. ಡಿಸೆಂಬರ್ 2019 ರಲ್ಲಿ ಪ್ರಾರಂಭವಾದ ಈ ಪ್ರತಿಭಟನೆಗಳು ವಿಸ್ತಾರಗೊಂಡು 2020ರ ಮೊದಲ ಮೂರು ತಿಂಗಳಲ್ಲಿ ದೇಶದೆಲ್ಲೆಡೆ ಹಬ್ಬಿದವು. ಹಿಂದುತ್ವ ಕಾರ್ಯಸೂಚಿಯ ವಿರುದ್ಧ ಇದು ಮೊಟ್ಟ ಮೊದಲ ಸಾಮೂಹಿಕ ಚಳುವಳಿಯಾಯಿತು; ಸಿಎಎ–ಎನ್‌ಆರ್‌ಸಿಯ ಉದ್ದೇಶವು ಭಾರತೀಯ ಪೌರತ್ವವನ್ನು ಮರುನಿರ್ವಚಿಸುವುದಾಗಿತ್ತು ಮತ್ತು ಮುಸ್ಲಿಮರನ್ನು ಗುರಿಯಾಗಿಸಿ ಅವರನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿ ಮಾಡುವುದಾಗಿತ್ತು. ಮಹಾಸೋಂಕು ಹಾಗೂ ಲಾಕ್ಡೌನ್ ದೇಶವ್ಯಾಪಿ ಸಾಮೂಹಿಕ ಚಳುವಳಿಯನ್ನು ಹಠಾತ್ತಾಗಿ ಅಂತ್ಯಗೊಳಿಸಿತು. ವರ್ಷದ ಕೊನೆಯ ಎರಡು ತಿಂಗಳುಗಳು ಎರಡನೆಯ ಸಾಮೂಹಿಕ ಚಳುವಳಿಗೆ, ಈ ಬಾರಿ ರೈತರ ಚಳುವಳಿಗೆ, ಮೂರು ಕೃಷಿ ಕಾನೂನುಗಳ ವಿರುದ್ಧದ ಚಳುವಳಿಗೆ ಸಾಕ್ಷಿಯಾಯಿತು. ನವಂಬರ್ 26 ರಂದು 'ದೆಹಲಿ ಚಲೋ' ಶುರುವಾದ ದಿನವೇ ಕಾರ್ಮಿಕ ವರ್ಗದ ಬೃಹತ್ ಸಾರ್ವತ್ರಿಕ ಮುಷ್ಕರ ನಡೆಯಿತು. ರೈತರ ಹೋರಾಟ ಹೊಸ ವರ್ಷದಲ್ಲೂ ಮುಂದುವರಿಯಲಿದೆ.

ಮೋದಿ ಸರ್ಕಾರದ ಕಾರ್ಪೊರೇಟ್ ಪರ ಹಾಗೂ ಹಿಂದುತ್ವ ಕಾರ್ಯಸೂಚಿಗೆ ಪ್ರತಿರೋಧವಾಗಿ ಈ ಎರಡೂ ಚಳುವಳಿಗಳು ಹೊಸ ಮನ್ವಂತರವಾಗಿ ಪರಿಣಮಿಸಲಿವೆ. ಹೀಗೆ ಹೊಸ ವರ್ಷವು ಆಶಾದಾಯಕ ಕಥನದೊಂದಿಗೆ ಆರಂಭವಾಗಲಿದೆ: ವರ್ಷದ ಮಧ್ಯದ ಹೊತ್ತಿಗೆ ಲಸಿಕೆಯು ಎಲ್ಲರಿಗೂ ಸಿಗುವಂತಾಗಿ ಮಹಾಸೋಂಕಿನ ಅಂತ್ಯವನ್ನು ನೋಡುವ ಆಶಾದಾಯಕ ವರ್ಷವಾಗಲಿದೆ ಮತ್ತು ಪ್ರತಿಗಾಮಿ ಜನ–ವಿರೋಧಿ ಆಳ್ವಿಕೆಗೆ ಎದುರಾಗಿ ವ್ಯಾಪಕ ಪ್ರತಿರೋಧ ಹುಟ್ಟುಹಾಕುವ ಸಾಧ್ಯತೆಗಳ ವರ್ಷವಾಗಿ ಹೊರಹೊಮ್ಮಲಿದೆ.

ಅನು: ಟಿ.ಸುರೇಂದ್ರ ರಾವ್



ರೈತರ ಚಾರಿತ್ರಿಕ ಪ್ರತಿಭಟನಾ ಕಾರ್ಯಾಚರಣೆಯ ಬೇಡಿಕೆಗಳನ್ನು ಯಾವುದೇ ವಿವೇಕಯುತ ಸರಕಾರ ಒಪ್ಪಿಕೊಳ್ಳುತ್ತಿತ್ತು. ಆದರೆ ಪ್ರಧಾನ ಮೋದಿ ನಿರಾಕರಿಸುತ್ತಿದ್ದಾರೆ. ಏಕೆಂದರೆ, ನವ–ಉದಾರವಾದಿ ಸುಧಾರಣೆಯ ದಿಕ್ಕಿನಲ್ಲಿ ಉಗ್ರ ರೀತಿಯಲ್ಲಿ ಸಾಗುತ್ತಿರುವ ಮೋದಿ ಸರಕಾರ ಕಾರ್ಪೊರೇಟ್‌ಗಳಿಗೆ ಗರಿಷ್ಟ ಲಾಭಗಳಿಕೆಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸ‌ಲಿಕ್ಕಾಗಿಯೇ ಈ ಕಾಯ್ದೆಗಳ ಮೂಲಕ ಕೃಷಿಯ ಮೇಲೆ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ಈ ರೀತಿಯ ಸಂಪೂರ್ಣ ಹತೋಟಿಯನ್ನು ಕಲ್ಪಿಸ ಬಯಸುತ್ತಿದೆ. ಬಿಜೆಪಿ ಕೇಂದ್ರ ಸರಕಾರ ಭಾರತದಲ್ಲಿ ಆಳುವ ವರ್ಗಗಳ ಕ್ರೋಢೀಕರಣದ ಪ್ರಧಾನ ದಲ್ಲಾಳಿಯಾಗಿ ಬಿಟ್ಟಿದೆ. ಅವರ ವರ್ಗ ಹಿತಗಳನ್ನು ಈಡೇರಿಸುವ ಸುಧಾರಣೆಗಳ ಮೂಲಕ ಭಾರತೀಯ ಜನತೆಯ ಮೇಲೆ ವರ್ಗದಾಳಿಯನ್ನು ತೀವ್ರಗೊಳಿಸುವ ಬಿಜೆಪಿಯ ಪ್ರಯತ್ನಗಳಿಗೆ ಶೋಷಿತ ವರ್ಗಗಳ ಮತ್ತು ಇತರ ಜನವಿಭಾಗಗಳ ಪ್ರತಿ–ದಾಳಿಯ ಮೂಲಕ ಸವಾಲು ಹಾಕಬೇಕು, ಅವನ್ನು ಎದುರಿಸಬೇಕು.

ಸೀತಾರಾಮ್ ಯೆಚುರಿ

ಮೂರು ಕೃಷಿ ಕಾಯ್ದೆಗಳು: ಜನತೆಯ ವಿರುದ್ಧ ಬಂಡವಳಿಗರ ಪರವಾದ ಬಿಜೆಪಿ ವರ್ಗದಾಳಿ

ಮತ್ತೊಮ್ಮೆ ಕೇಂದ್ರ ಸರಕಾರ ಮತ್ತು ರೈತ ಸಂಘಟನೆಗಳ ನಡುವಿನ ಮಾತುಕತೆ ಈ ಅಭೂತಪೂರ್ವ ರೈತ ಪ್ರತಿಭಟನೆಗಳು ಎತ್ತಿರುವ ಪ್ರಧಾನ ಪ್ರಶ್ನೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿದೆ. ಡಿಸೆಂಬರ್ 30 ರಂದು ನಡೆದ ಈ ಆರನೇ ಸುತ್ತಿನಲ್ಲೂ ಕೇಂದ್ರ ಸರಕಾರ ಈ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವುದನ್ನು ಪರಿಶೀಲಿಸಲು ನಿರಾಕರಿಸಿತು, ಆದರೆ ವಿದ್ಯುತ್(ತಿದ್ದುಪಡಿ) ಮಸೂದೆಯನ್ನು ಮರುಪರಿಶೀಲಿಸಲು ಹಾಗೂ ಪರಿಸರ ಮಾಲಿನ್ಯ ಕಾಯ್ದೆಯಿಂದ ರೈತರನ್ನು ತೆಗೆಯಲು ಒಪ್ಪಿಕೊಂಡಿರುವಂತೆ ಕಾಣುತ್ತದೆ. ಇನ್ನೊಂದು ಸುತ್ತಿನ ಮಾತುಕತೆ ಜನವರಿ 4, 2021ರಂದು ನಡೆಯಲಿದೆ.

ಬಿಜೆಪಿ ಕೇಂದ್ರ ಸರಕಾರ ಮೂರು ಕೃಷಿ ಕಾಯ್ದೆಗಳ ರದ್ಧತಿ ಕುರಿತಂತೆ ತನ್ನ ಹಠಮಾರಿತನವನ್ನು ಮುಂದುವರೆಸುತ್ತಿರುವುದು ಈಗ ನಡೆಯುತ್ತಿರುವ ಅತ್ಯಂತ ಶಾಂತಿಯುತವಾದ ರೈತ ಪ್ರತಿಭಟನೆಗಳಲ್ಲಿ ಉಂಟಾಗಿರುವ ಮಹಾ ಅಡಚಣೆಯನ್ನು ಇನ್ನೂ ದೀರ್ಘಗೊಳಿಸುತ್ತಿದೆ.

ಹೇಗೆ ಲೆಕ್ಕ ಹಾಕಿದರೂ, ದಿಲ್ಲಿ ಪ್ರವೇಶಿಸುವ ಎಲ್ಲ ರಾಷ್ಟ್ರೀಯ ಹೆದ್ದಾರಿಗಳಲ್ಲೂ, ದಿಲ್ಲಿ ಗಡಿಗಳಲ್ಲಿ ರೈತರ ಸಂಖ್ಯೆ ಏರುತ್ತಲೇ ಹೋಗುತ್ತಿದೆ, ರೈತರು ತಮ್ಮ ಬೇಡಿಕೆಗಳನ್ನು ಸಾಧಿಸಲು ಅಸಾಧಾರಣ ಸಂಕಲ್ಪವನ್ನು, ದೃಢನಿರ್ಧಾರವನ್ನು ಪ್ರದರ್ಶಿಸುತ್ತಿದ್ದಾರೆ. ದಿಲ್ಲಿಯ ಎಲ್ಲ ನೆರೆ ರಾಜ್ಯಗಳಿಂದಲೂ, ಮತ್ತು ದೂರದ ಮಹಾರಾಷ್ಟ್ರ, ಗುಜರಾತ, ಉತ್ತರಾಖಂಡ ಮುಂತಾದ ರಾಜ್ಯಗಳಿಂದಲೂ ಬಂದಿದ್ದಾರೆ. ಇತರ ಹಲವು ಸ್ಥಳಗಳಲ್ಲಿ, ಸುಮಾರಾಗಿ ಪ್ರತಿಯೊಂದು ರಾಜ್ಯದಿಂದಲೂ, ಪಾಟ್ನಾ ಮತ್ತು ರಾಯ್ಪುರದಿಂದ ಹಿಡಿದು ಗುಲ್ಬರ್ಗ ಮತ್ತು ತಂಜಾವೂರಿನ ವರೆಗೂ ರೈತಾಪಿಗಳು ನಿರಂತರ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾರೆ.

ಈ ರೈತ ಹೋರಾಟಕ್ಕೆ ಕಾರ್ಮಿಕ ವರ್ಗದಿಂದ ಮತ್ತು ಅದರ ಟ್ರೇಡ್ ಯೂನಿಯನ್ ಆಂದೋಲನದಿಂದ ಸಕ್ರಿಯ ಸೌಹಾರ್ದದ ಪ್ರಶಂಸನೀಯ ಬೆಂಬಲ ಸಿಗುತ್ತಿದೆ. ಸಮಾಜದ ಇತರೆಲ್ಲ ವಿಭಾಗಗಳು–ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು–ಕೂಡ ದೇಶದ ಅನ್ನದಾತರಾದ ರೈತರ ಬೆಂಬಲಕ್ಕೆ ಒಂದಾಗಿದ್ದಾರೆ.

ಈ ಪ್ರತಿಭಟನಾ ಕಾರ್ಯಾಚರಣೆಯ ಬೇಡಿಕೆಗಳು ಸಂಪೂರ್ಣವಾಗಿ ಉಚಿತವಾಗಿವೆ, ಯಾವುದೇ ವಿವೇಕಯುತ ಸರಕಾರ ಅವನ್ನು ಒಪ್ಪಿಕೊಳ್ಳುತ್ತಿತ್ತು. ಕೇಂದ್ರ ಸರಕಾರದಿಂದ ಕೇಳುತ್ತಿರುವುದು ಈಗ ಅವನ್ನು ರದ್ದು ಮಾಡಿ, ಮತ್ತು ರೈತರೊಂದಿಗೆ, ಕೃಷಿ ಸಮುದಾಯದೊಂದಿಗೆ, ಕಾರ್ಪೊರೇಟ್‌ಗಳೊಂದಿಗೆ, ಸಂಬಂಧಪಟ್ಟ ಎಲ್ಲರೊಂದಿಗೆ ಚರ್ಚೆ ನಡೆಸಿ, ಅದರ ಆಧಾರದಲ್ಲಿ ಹೊಸ ಕಾಯ್ದೆಗಳನ್ನು ರೂಪಿಸಿ ಸಂಸತ್ತಿನಲ್ಲಿ ಒಂದು ಸಂರಚನಾತ್ಮಕ ಚರ್ಚೆಗಳ ನಂತರ ಅದನ್ನು ತರಬೇಕು ಎಂದು. ಪ್ರಧಾನ ಮಂತ್ರಿ ಮೋದಿ ಇದನ್ನು ಮಾಡಲು ನಿರಾಕರಿಸುತ್ತಿದ್ದಾರೆ. ರೈತರ ಬೇಡಿಕೆಗಳನ್ನು ಒಪ್ಪಬೇಕಾಗುವ ಒತ್ತಡದಿಂದ ತಪ್ಪಿಸಿಕೊಳ್ಳಲು, ಕೇಂದ್ರ ಸರಕಾರ ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ರದ್ದು ಮಾಡಿ, ಉತ್ತರದಾಯಿಯಾಗುವ ತನ್ನ ಹೊಣೆಗಾರಿಕೆಯಿಂದ ಕೈತೊಳೆದುಕೊಂಡು ಬಿಟ್ಟಿದೆ.

ತಪ್ಪುಮಾಹಿತಿ ಹರಡುವ ಪ್ರಚಾರ

ಈ ಮೈನಡುಗಿಸುವ ಚಳಿಗಾಳಿಯಲ್ಲಿ, ಅತ್ಯಂತ ಶಾಂತಿಯುತವಾಗಿ ಮತ್ತು ಶಿಸ್ತುಬದ್ಧವಾಗಿ ನಡೆಯುತ್ತಿರುವ ಈ ಬೃಹತ್ ಐಕ್ಯ ಪ್ರತಿಭಟನೆಯ ಹೆಸರುಗೆಡಿಸಲು, ಬಿಜೆಪಿ ಮತ್ತು ಪ್ರಧಾನ ಮಂತ್ರಿಗಳ ನೇತೃತ್ವದ ಕೇಂದ್ರ ಸರಕಾರ ಒಂದು ದುಷ್ಪ್ರಚಾರದಲ್ಲಿ, ತಪ್ಪು ಮಾಹಿತಿಗಳನ್ನು ಹರಡುವಲ್ಲಿ ತೊಡಗಿದೆ. ಮೊದಲಿಗೆ, ಪ್ರತಿಭಟನಾಕಾರರು ಖಲಿಸ್ತಾನಿಗಳು, ಪಾಕಿಸ್ತಾನಿಗಳು, ಚೀನೀ ಏಜೆಂಟರು, ನಗರ ನಕ್ಸಲರು, ಟುಕ್ಡೆ ಟುಕ್ಡೆ ಗ್ಯಾಂಗ್ ಎಂದೆಲ್ಲಾ ಆರೋಪಿಸಲಾಯಿತು. ನಂತರ ವಿಪಕ್ಷಗಳು ರೈತರನ್ನು ದಾರಿ ತಪ್ಪಿಸುತ್ತಿವೆ ಎಂಬ ಮಿಥ್ಯಾಪವಾದ ಹೊರಿಸಲಾಯಿತು. ಆದರೂ ಈ ಪ್ರತಿಭಟನೆಯನ್ನು ದೇಶದ ಎಲ್ಲೆಡೆಗಳ 500ಕ್ಕೂ ಹೆಚ್ಚು ರೈತ ಸಂಘಟನೆಗಳ ವೇದಿಕೆಯಾದ 'ಸಂಯುಕ್ತ ಕಿಸಾನ್ ಮೋರ್ಚಾ' ಸಂಘಟಿಸುತ್ತಿದೆ, ನಡೆಸುತ್ತಿದೆ, ಯಾವುದೇ ರಾಜಕೀಯ ಪಕ್ಷ ಇದರಲ್ಲಿ ಕೈಹಾಕಿಲ್ಲ ಎಂಬುದು ನಿಜಸಂಗತಿ.

ಪ್ರಧಾನ ಮಂತ್ರಿಗಳೇ ಇಂತಹ ಪ್ರಚಾರಕ್ಕೆ ವೈಯಕ್ತಿಕವಾಗಿ ನೇತೃತ್ವ ಕೊಡುತ್ತಿದ್ದಾರೆ, ವಿಪಕ್ಷಗಳು ಎಲ್ಲವೂ ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಕರ್ಷಕ ಸುಧಾರಣೆಗಳ ಬಗ್ಗೆ ಹೇಳಿದ್ದವು, ಆದರೆ ಈಗ ವಿರೋಧಿಸುವುದಕ್ಕಾಗಿಯೆ ವಿರೋಧಿಸುತ್ತಿವೆ ಎಂಬ ಅಪಾದನೆಯನ್ನೂ ಮಾಡುತ್ತಿದ್ದಾರೆ. ಹೌದು, ಸಿಪಿಐ(ಎಂ) ಸದಾ ಕರ್ಷಕ ಸುಧಾರಣೆಗಳ ಬಗ್ಗೆ ಹೇಳುತ್ತ ಬಂದಿದೆ, ಇತರ ಹಲವು ಪಕ್ಷಗಳೂ ಹೇಳಿವೆ. ಆದರೆ ಯಾವ ತೆರನ ಸುಧಾರಣೆಗಳು? ಸಿಪಿಐ(ಎಂ) ಬಯಸುತ್ತಿರುವುದು ಭಾರತದ ಆಹಾರ ಭದ್ರತೆಯನ್ನು ಬಲಪಡಿಸಲಿಕ್ಕಾಗಿ, ನಮ್ಮ ಜನಗಳಿಗೆ ಉಣಬಡಿಸಲು, ಅವರ ಸರಿಯಾದ ಪೌಷ್ಟಿಕತೆ ಮತ್ತು ಆರೋಗ್ಯವನ್ನು ಖಾತ್ರಿಪಡಿಸಲು ಸಾಕಾಗುವಷ್ಟು ಧಾನ್ಯಗಳನ್ನು ಉತ್ಪಾದಿಸಲಿಕ್ಕಾಗಿ, ನಮ್ಮ ರೈತರಿಗೆ ಸಾಲುವಂತಹ ಪ್ರತಿಫಲವನ್ನು ಒದಗಿಸುವುದಕ್ಕಾಗಿ, ಅದರೊಂದಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಬಳಕೆದಾರರಿಗೆ ವಿವೇಕಯುತ ಬೆಲೆಗಳಲ್ಲಿ ಸಿಗುವಂತೆ ಖಾತ್ರಿಪಡಿಸಲಿಕ್ಕಾಗಿ ಹಾಗೂ ನಮ್ಮ ಕೃಷಿ ವಲಯವನ್ನು ಇನ್ನಷ್ಟು ಅಭಿವೃದ್ಧಿಪಡಿಸಲಿಕ್ಕಾಗಿ.

ಆದರೆ, ಈ ಕಾಯ್ದೆಗಳಲ್ಲಿ ಅಡಕವಾಗಿರುವ ಪ್ರಧಾನ ಮೋದಿಯವರ ಸುಧಾರಣೆಗಳು, ಭಾರತೀಯ ಕೃಷಿಯನ್ನು, ಅದರ ಮಾರುಕಟ್ಟೆಗಳನ್ನು ಮತ್ತು ಅದರ ಉತ್ಪನ್ನಗಳನ್ನು ಬಹುರಾಷ್ಟ್ರೀಯ ಕೃಷಿ–ವ್ಯವಹಾರ ದೈತ್ಯರಿಗೆ, ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡಲಿಕ್ಕಾಗಿ– ಈ ಮೂಲಕ ಇವು ಭಾರತದ ಆಹಾರ ಭದ್ರತೆಯನ್ನು ತೀವ್ರ ಗಂಡಾಂತರಕ್ಕೆ ಒಳಪಡಿಸುವಂತವು; ಆವಶ್ಯಕ ಸರಕುಗಳ ದೊಡ್ಡ ಪ್ರಮಾಣದ ಕಳ್ಳ ದಾಸ್ತಾನಗಾಗಿ ಅವಕಾಶ ಕೊಡಲಿಕ್ಕಾಗಿ, ಆಮೂಲಕ ಕೃತಕ ಆಹಾರ ಕೊರತೆಗಳನ್ನು ಸೃಷ್ಟಿಸಿ ಬೃಹತ್ ಪ್ರಮಾಣದ ಬೆಲೆಯೇರಿಕೆಗಳಿಗೆ ದಾರಿ ಮಾಡಿಕೊಡುವಂತವು; ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮತ್ತು ಕೈಗೆಟಕುವ ಬೆಲೆಗಳಲ್ಲಿ ಆಹಾರಧಾನ್ಯಗಳನ್ನು ಒದಗಿಸುವುದನ್ನು ಕಳಚಿ ಹಾಕುವಂತವು. ಈ ಕಾಯ್ದೆಗಳು ಭಾರತೀಯ ಕೃಷಿಯನ್ನು ನಾಶಪಡಿಸುತ್ತವೆ ಮತ್ತು ನಮ್ಮ ಜನಗಳ ಮೇಲೆ ಹೆಚ್ಚಿನ ಸಂಕಟಗಳನ್ನು ಹೇರುತ್ತವೆ. ಆದ್ದರಿಂದಲೇ ಹೆಚ್ಚಿನ ಜಾತ್ಯತೀತ ಪಕ್ಷಗಳು ಈ ಮಸೂದೆಗಳನ್ನು ವಿರೋಧಿಸಿವೆ, ರೈತರ ಪ್ರತಿಭಟನೆಗಳಿಗೆ

ಪುಟ 12 ನೋಡಿ



ಕೃಪೆ: ಗುರುಪ್ರೀತ್ ಆರ್ಟಿಸ್ಟ್ ಭಟಿಂಡ



ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ



ಮಹಾರಾಷ್ಟ್ರದ ನಾಶಿಕ್‌ನಿಂದ ವಾಹನ ಜಾಥಾದಲ್ಲಿ ಬಂದ ರೈತರು

ಜಾನುವಾರು ಹತ್ಯಾ ನಿಷೇದ: ಕಾರ್ಪೋರೇಟ್ ಲೂಟಿಯನ್ನು ವಿಸ್ತರಿಸಿ ವೇಗಗೊಳಿಸುವ ಹುನ್ನಾರ

ಭಾಗ 2

ಯು. ಬಸವರಾಜ

ಯಾವ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಯನ್ನು ರಾಜ್ಯದ ಜನತೆ ವ್ಯಾಪಕವಾಗಿ ವಿರೋಧಿಸಿದ್ದರೋ ಮತ್ತು ಎಲ್ಲಾ ವಿರೋಧ ಪಕ್ಷಗಳು ವಿರೋಧಿಸಿದ್ದವೋ, ಮತ್ತು ಸಿದ್ಧರಾಮಯ್ಯ ನೇತೃತ್ವದ ಸರಕಾರ ಹಿಂಪಡೆದಿತ್ತೋ, ಅದನ್ನು ರಾಜ್ಯದ ಜನತೆಯ ಮುಂದೆ ಅದರ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಸದೇ, ಮಂತ್ರಿ ಮಂಡಲದ ಸದಸ್ಯರಿಗೂ ತಿಳಿಸದೇ, ವಿಧಾನ ಸಭೆಯಲ್ಲಿ ಶಾಸಕರು ಚರ್ಚಿಸಲು ಅವಕಾಶ ನೀಡದೇ, ವಿಧಾನ ಪರಿಷತ್ ಕಲಾಪ ನಡೆಸಿ ಪ್ರಜಾಸತ್ತಾತ್ಮಕವಾಗಿ ಅಂಗೀಕರಿಸದೇ, ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವ ಅಗತ್ಯ ಮತ್ತು ಅವಸರವಾದರೂ ಏನಿತ್ತು? ಈ ಪ್ರಶ್ನೆಗಳನ್ನು ಹಾಕಿಕೊಂಡು ಈ ದೀರ್ಘ ಲೇಖನ ಸಮಗ್ರವಾಗಿ ಉತ್ತರಿಸುತ್ತದೆ. ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗುತ್ತಿದೆ.

ಈಗಾಗಲೇ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವ ಭಾಗ–1 ರಲ್ಲಿ ಕರ್ನಾಟಕದ ಜಾನುವಾರು ಸಾಕಾಣೆ ಸ್ಥಿತಿಯ ಸ್ಥೂಲ ವಿವರ ನೀಡಲಾಗಿದೆ. ಮಸೂದೆ ಅದರ ಘೋಷಿತ ಉದ್ದೇಶಗಳಾದ ದೇಶೀ ತಳಿಗಳ ರಕ್ಷಣೆಗೆ ಸಹಕಾರಿಯಾಗಿದೆಯೇ? ಅಥವಾ ದೇಶೀ ತಳಿಗಳ ಮತ್ತು ಉಪಕಸುಬುದಾರರ ಏಳಿಗೆಗೆ ನೆರವು ನೀಡಲಿದೆಯೇ, ಅಥವಾ ಬೇರೇನಾದರು ಕ್ರಮ ವಹಿಸಲು ತರಲಾಗಿದೆಯೇ ಎಂಬುದನ್ನು ಪರಿಶೀಲಿಸುತ್ತದೆ. ಈ ಭಾಗ–2ರಲ್ಲಿ ತಿದ್ದುಪಡಿಗಳ ಉದ್ದೇಶ ಜಾನುವಾರು ಸಂರಕ್ಷಣೆಯೇ? ಅಥವಾ ಉಪಕಸುಬು ಆಧಾರಿತ ಉದ್ಯಮಗಳ ನಾಶವೇ? ಎಂಬುದನ್ನು ವಿಶ್ಲೇಷಿಸುತ್ತದೆ. ಈ ತಿದ್ದುಪಡಿಗಳು ಜಾರಿಗೆ ಬಂದರೆ ಅದರ ಪರಿಣಾಮಗಳು, ಅಪಾಯಗಳು ಏನು ಎಂಬುದನ್ನೂ ತಿಳಿಸುತ್ತದೆ.

ಜಾನುವಾರು ಸಂರಕ್ಷಣೆಯೇ? ಉಪಕಸುಬು ಆಧಾರಿತ ಉದ್ಯಮಗಳ ನಾಶವೇ?


ಇಲ್ಲಿಯವರೆಗೆ ಜಾನುವಾರು ಅಥವಾ ಗೋವುಗಳ ಸಂತತಿಯನ್ನು ಮತ್ತು ದೇಶೀಯ ತಳಿ ರಕ್ಷಣೆಯನ್ನು ಮತ್ತು ಅವುಗಳ ಅಭಿವೃದ್ಧಿಯನ್ನು ರೈತರು, ಕೂಲಿಕಾರರು, ಕಸುಬುದಾರರು ಹಾಗೂ ಇತರೇ ಉಪಕಸುಬುದಾರರು ಮಾಡುತ್ತಾ ಬಂದಿದ್ದಾರೆ. ಈ ದಿನ ಅವರ ಉಪ ಕಸುಬು ಸರಕಾರಗಳ ದಿವಾಳಿಕೋರ ನೀತಿಗಳಿಂದಾಗಿ ಅಳಿವಿನಂಚಿಗೆ ತಲುಪಿದೆ. ಜಾನುವಾರು ಸಂರಕ್ಷಣೆ ಅಥವಾ ದೇಶೀಯ ತಳಿಗಳ ರಕ್ಷಣೆಯೆಂದರೇ, ಉಪ ಕಸುಬಿನ ಅಭಿವೃದ್ಧಿ ಮತ್ತು ದೇಶೀಯ ತಳಿಯ ಇಳುವರಿ ಹೆಚ್ಚಳಕ್ಕೆ ಕೈಗೊಳ್ಳುವ ಕ್ರಮಗಳಾಗಿರುತ್ತವೆ. ಆದರೇ ಮಸೂದೆಯಲ್ಲಿ ಅಂತಹ ಯಾವುದೇ ಕ್ರಮಗಳು ಕಂಡು ಬರುತ್ತಿಲ್ಲ. ಬದಲಿಗೆ, ಸಂಕಷ್ಟದಲ್ಲಿರುವ ಉಪಕಸುಬನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುವ ಅಂಶಗಳೇ ರಾಚುತ್ತವೆ.

ಜಾನುವಾರುಗಳ ಉಪಯುಕ್ತತೆಯ ಕಾರಣದಿಂದ ಅವುಗಳ ಸಂತತಿಯನ್ನು ಜಗತ್ತಿನಾದ್ಯಂತ ಮಾನವ ಅಥವಾ ಉಪಕಸುಬುದಾರ ಹೆಚ್ಚಿಸುತ್ತಾ ಬಂದಿರುವುದು ನಮಗೆ ತಿಳಿದಿದೆ. ಅವುಗಳ ಉಪಯುಕ್ತತೆಯಲ್ಲಿ ಮಾಂಸೋದ್ಯಮವು ಪ್ರಧಾನವಾಗಿದೆ. ಆದರೆ, ಸರಕಾರದ ಜಾನುವಾರು ಹತ್ಯೆ ನಿಷೇಧವು, ಮಾಂಸೋದ್ಯಮಕ್ಕೆ ದೊಡ್ಡ ಅಡಚಣೆ ಉಂಟು ಮಾಡುವಂತಹದ್ದಾಗಿದೆ.

ಅದರಲ್ಲೂ, ಉಪ ಕಸುಬುದಾರರೂ ಮತ್ತು ಮಾಂಸೋದ್ಯಮದ ಕಾರ್ಮಿಕರು, ವ್ಯಾಪಾರಿಗಳು ಖಂಡಿತಾ ಇದರಿಂದ ಭಾರೀ ತೊಂದರೆಗೊಳಗಾಗುತ್ತಾರೆ.

ಈಗಾಗಲೇ ಹೊರೆಯಾಗಿರುವ ಜಾನುವಾರು ಸಾಕಾಣಿಕೆಯ ಉಪಕಸುಬನ್ನು ಇದು ಮತ್ತಷ್ಟು ಹೊರೆಯನ್ನಾಗಿಸಲಿದೆ. ಸಾಮಾನ್ಯವಾಗಿ, ನಿರುಪಯುಕ್ತ ಜಾನುವಾರುಗಳನ್ನು ಮಾಂಸಕ್ಕಾಗಿ ಮಾರಾಟ ಮಾಡುವುದು ವಾಡಿಕೆಯಾಗಿದೆ. ಅದರಿಂದ ಸ್ವಲ್ಪವಾದರೂ ಆದಾಯವನ್ನು ಉಪಕಸುಬುದಾರರು ಗಳಿಸುತ್ತಾರೆ. ಇನ್ನು ಮುಂದೆ ಈ ಕಾಯ್ದೆಯಿಂದಾಗಿ ಆಂತಹ ನೆರವು ಅವರಿಗೆ ಸಿಗುವುದಿಲ್ಲ ಬದಲಿಗೆ, 13 ವರ್ಷದವರೆಗೆ ಯಾವುದೇ ಆದಾಯದ ನಿರೀಕ್ಷೆ ಇಟ್ಟು ಕೊಳ್ಳದೇ ಅವುಗಳಿಗಾಗಿ ಲಕ್ಷಾಂತರ ರೂ ವೆಚ್ಚ ಮಾಡ ಬೇಕಾಗುತ್ತದೆ. ಇಲ್ಲವೇ, ಅವುಗಳನ್ನು ಬೀದಿಗೆ ದೂಡ ಬೇಕಾಗುತ್ತದೆ. ಹೀಗೆ ಬೀದಿಗೆ ಬರುವ ದನಗಳು ಮುಂದೆ ರೈತರ ಬೆಳೆಗಳನ್ನು ಹಾಳು ಮಾಡುವ ಸಂಭವಗಳಿವೆ. ಹೀಗಾಗಿ, ರೈತರು ಮತ್ತು ಉಪಕಸುಬುದಾರರು ಈ ಹೊರೆ ಮತ್ತು ಉಸಾಬರಿ ತಮಗೇಕೆಂದು ಉಪಕಸುಬನ್ನು ಅನ್ಯ ಮಾರ್ಗವಿಲ್ಲದೇ ಕೈ ಬಿಡುವ ಸಂಭವಗಳೇ ಹೆಚ್ಚಾಗಿವೆ. ಆದ್ದರಿಂದಲೇ, ಇದರಿಂದ ಅತಂಕಿತರಾದ ಉಪಕಸುಬುದಾರರು, ಮಾಂಸೋದ್ದಮದವರು ಈ ಮಸೂದೆ ಬೇಡವೆನ್ನುತ್ತಿದ್ದಾರೆ. ಇವರ ಕೇಳಿಕೆಯಲ್ಲಿ ಖಂಡಿತಾ ನ್ಯಾಯವಿದೆ.

ಆದರೇ, ಸರಕಾರ ಅದು ಏನೇ ಇದ್ದರೂ, ಈ ಮಸೂದೆಯನ್ನು ಶಾಸನವಾಗಿಸಿ, ಜಾರಿಗೊಳಿಸಲು ಬದ್ಧವಾಗಿದೆ.





ಶಾಸನವಾದರೆ ಸಂಭವಿಸುವ ಅಪಾಯಗಳೇನು?

ಒಂದು, ಕಸುಬುದಾರರು ನಷ್ಟ ಭರಿಸಲಾಗದೇ ಉಪ ಕಸುಬನ್ನು ಕೈಬಿಡುತ್ತಾರೆ. ಎರಡು, ಇದರಿಂದ ಇವರೇ ರಚಿಸಿಕೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ರಾಜ್ಯದಾದ್ಯಂತ ಇರುವ ಅವುಗಳ ದೊಡ್ಡ ದೊಡ್ಡ ಒಕ್ಕೂಟಗಳು, ನಿಧಾನವಾಗಿ ಹಾಲಿನ ಕೊರತೆ ಮತ್ತು ಖಾಸಗೀ ಹೈನೋದ್ಯಮದ ಸ್ಪರ್ಧೆಗಳಿಂದ ನಾಶವಾಗಲಿವೆ.

ಇದನ್ನೇ ಖಾಸಗೀ ಸಂಸ್ಥೆಗಳು ಬೇಡುತ್ತಿವೆ.

ಜನತೆಯ ಹಾಲು ಒಕ್ಕೂಟಗಳು ನಶಿಸಿ ಹೋದರೆ, ಹಾಲು ಮತ್ತು ಹಾಲು ಆಧಾರಿತ ಉತ್ಪನ್ನಗಳ ಉತ್ಪಾದನೆಯು ಲೂಟಿಕೋರ ಖಾಸಗೀ ವಲಯಕ್ಕೆ ದೊಡ್ಡ ಕೊಡುಗೆಯಾಗಿ ದೊರೆಯಲಿದೆ.

ಮೂರು, ಸಾರ್ವಜನಿಕ ಹಾಲು ಉತ್ಪಾದಕ ಸಹಕಾರ ಸಂಘಗಳು ಮತ್ತು ಒಕ್ಕೂಟಗಳಲ್ಲಿ ದುಡಿಯುವ ಲಕ್ಷಾಂತರ ನೌಕರರು, ಕೆಲಸಗಾರರು, ಸಹಕಾರ ಸಂಘಗಳ ನಿರ್ವಾಹಕರು ಉಪಕಸುಬುದಾರರಂತೆ, ಮಾಂಸೋದ್ಯಮದ ಕೆಲಸಗಾರರಂತೆ ಉದ್ಯೋಗ ಕಳೆದುಕೊಂಡು ಬೀದಿಗೆ ದೂಡಲ್ಪಡುತ್ತಾರೆ.

ಹೀಗೆ ಈ ಉಪಕಸುಬುದಾರರ ಆಧಾರಿತ ಹೈನೋದ್ಯಮ, ಮಾಂಸೋದ್ಯಮ ಮತ್ತು ಅವುಗಳೊಂದಿಗೆ ಚರ್ಮ ಮತ್ತಿತರೆ ಉದ್ಯಮಗಳು ಸಂಕಷ್ಟಕ್ಕೀಡಾಗಿ ನಶಿಸಿ ಹೋಗುತ್ತವೆ.

ಈ ಎಲ್ಲಾ ಉದ್ಯಮಗಳ ಆಧಾರ ಮತ್ತು ಬೆನ್ನೆಲುಬಾಗಿದ್ದ ಉಪಕಸುಬಿಗೆ ಬಲವಾದ ಏಟು ನೀಡಿ ಅದನ್ನು ಅದರ ಆಧಾರಿತವಾದವುಗಳನ್ನು ಉರುಳಿಸಿ ಮಣ್ಣು ಮುಕ್ಕಿಸಿ ಕಾರ್ಪೊರೇಟ್ ಉದ್ಯಮಗಳಿಗೆ ನೆರವಾಗುವುದೇ ಮಸೂದೆಯ ಗುರಿಯಾಗಿದೆ ಎಂಬುದು ಈ ವಿಶ್ಲೇಷಣೆಯಿಂದ ಕಂಡು ಬರುತ್ತದೆ.

ಆದರೇ, ಯಾರೂ ಹೆದರಬೇಕಿಲ್ಲ ದೇಶೀಯ ಖಾಸಗೀ ಉದ್ಯಮಗಳನ್ನು ನುಂಗಿ, ಕಾರ್ಪೋರೇಟ್ ಹೈನೊದ್ಯಮಗಳು, ಮಾಂಸೋದ್ಯಮಗಳು, ಚರ್ಮೋದ್ಯಮಗಳು ತಲೆ ಎತ್ತಲಿವೆ. ಹಾಲು, ಹಾಲು ಉತ್ಪನ್ನಗಳು, ಅದೇ ರೀತಿ, ಇನ್ನಷ್ಟು ಮೌಲ್ಯವರ್ಧಿತ ಇತರೇ ಉತ್ಪನ್ನಗಳು ನಿಮಗೆ ಸಿಗಲಿವೆ. ಆದರೆ ದುಬಾರಿ ಬೆಲೆ ತೆರಬೇಕಷ್ಟೇ!? ಮಾಂಸವು ದೊರೆಯಲಿದೆ. ಇದೇ ಕಾರ್ಪೋರೇಟ್ ಉದ್ಯಮಗಳು ವಿದೇಶಗಳಿಂದ ಆರಂಭದಲ್ಲಿ ನಂತರ ಇಲ್ಲಿಯೆ ಉತ್ಪಾದಿಸಿಕೊಡಲಿದ್ದಾರೆ ಆದರೇ, ದುಬಾರಿ ಬೆಲೆ ನೀಡಬೇಕಷ್ಟೇ? ಚಿಂತಿಸಬೇಕಿಲ್ಲ. ಕಾರ್ಪೋರೇಟ್

ಪುಟ 10 ಕ್ಕೆ

ಮೋದಿ ಅವರ 'ಗುಲಾಬಿ ಕ್ರಾಂತಿ'!

ಒಂದೆಡೆ ಗೋಹತ್ಯೆ ನಿಷೇಧ, ಇನ್ನೊಂದೆಡೆ ಗೋಮಾಂಸ ರಫ್ತಿನಲ್ಲಿ ಜಗತ್ತಿನಲ್ಲಿ ಮೊದಲ ಸ್ಥಾನ ! ಪ್ರಮುಖ ಗೋಮಾಂಸ ರಫ್ತುದಾರರಿಗೆ ಬಲವಾದ ಬಿಜೆಪಿ ಕನೆಕ್ಶನ್ !

ಬಿಜೆಪಿ ಗೋಸುಂಬೆ ನೀತಿ : ಗೋಪೂಜೆ ಕೆಲವು ರಾಜ್ಯಗಳಲ್ಲಿ ಗೋಹತ್ಯೆ ಇತರ ರಾಜ್ಯಗಳಲ್ಲಿ !



ಕಾವಲುಕೋರತನಕ್ಕೆ ಕಾನೂನಿನ ರಕ್ಷಣೆ!

ಇತ್ತೀಚಿನ ದಿನಗಳಲ್ಲಿ ಬಿಜೆಪಿ ನೇತೃತ್ವದ ಸರಕಾರಗಳ ಒಂದು ಮುಖ್ಯ ಲಕ್ಷಣವೆಂದರೆ ನ್ಯಾಯ ಪಡೆಯುವ ನಾಗರಿಕರ ಹಕ್ಕನ್ನೇ ಮೊಟಕು ಮಾಡುವುದು. ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಹೇಳುವಂತೆ ಈ ಸರಕಾರಗಳು ತರುವ ಕಾಯ್ದೆಗಳನ್ನು ನ್ಯಾಯಾಂಗದ ಪರೀಕ್ಷಣೆಯಿಂದ ಹೊರತುಪಡಿಸುವ ಪ್ರವೃತ್ತಿ ಈಗ ಎದ್ದು ಕಾಣುತ್ತಿದೆ. ಇದಕ್ಕೆ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಮಸೂದೆಯನ್ನೇ ಅವರು ಉದಾಹರಣೆಯಾಗಿ ನೀಡುತ್ತಾರೆ.

ಈ ಮಸೂದೆಯ ಪರಿಚ್ಛೇದ 17, ಈ ಕಾಯ್ದೆಯ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಅಥವ ಚಲಾಯಿಸಬೇಕೆಂದಿರುವ ಯಾವುದೇ ಪ್ರಾಧಿಕಾರ ಅಥವ ವ್ಯಕ್ತಿಯ ವಿರುದ್ದ ನ್ಯಾಯಾಲಯದಲ್ಲಿ ಅರ್ಜಿ, ವಿಚಾರಣೆ ಅಥವ ಕಾನೂನು ಕಲಾಪಗಳನ್ನು ನಡೆಸುವಂತಿಲ್ಲ ಎನ್ನುತ್ತದೆ. ಅದರ ಹಿಂದಿನ ಪರಿಚ್ಛೇದ 16 ಈ ಕಾಯ್ದೆಯ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಎಲ್ಲ ವ್ಯಕ್ತಿಗಳೂ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 21 ರಲ್ಲಿ ಹೇಳಿರುವ ಅರ್ಥದಲ್ಲಿ ಸಾರ್ವಜನಿಕ ಸೇವೆಯಲ್ಲಿರುವವರು ಎಂದು ಪರಿಗಣಿಸಲಾಗುವುದು ಎನ್ನುತ್ತದೆ. ಅಂದರೆ ಈ ಕಾಯ್ದೆಯ ಹೆಸರು ಹೇಳಿಕೊಂಡು ಯಾವುದೇ ವ್ಯಕ್ತಿ, ಉದಾ: ಭಜರಂಗ ದಳ ಅಥವ ವಿ.ಹೆಚ್.ಪಿ.ಯ ಕಾರ್ಯಕರ್ತರು ಕಾನೂನನ್ನು ತಮ್ಮ ಕೈಗಳಿಗೆ ತಗೊಳ್ಳಬಹುದು. 2014ರ ನಂತರ ಕಾಣಬರುತ್ತಿರುವ 'ಕಾವಲುಕೋರತನ'ಕ್ಕೆ ಈಗ ಕಾನೂನು ರಕ್ಷಣೆ ಸಿಕ್ಕಿದಂತಾಗಿದೆ!



ಜಾನುವಾರು ಹತ್ಯಾ ನಿಷೇದ: ಕಾರ್ಪೋರೇಟ್ ಲೂಟಿಯನ್ನು ವಿಸ್ತರಿಸಿ ವೇಗಗೊಳಿಸುವ ಹುನ್ನಾರ.............

ಪುಟ 9 ರಿಂದ

ಕಂಪನಿಗಳ ಪರವಾಗಿ ಇದೇ ಸರಕಾರಗಳೇ ಜಾನುವಾರು ಹತ್ಯೆ ನಿಷೇಧ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ಹಿಂಪಡೆಯಲಿವೆ.

ಜಾನುವಾರು ಸಾಕಾಣೆಯ ಉಪಕಸುಬು ಇದ್ದರೆ ತಾನೇ ಅವುಗಳ ನಾಶಕ್ಕಾಗಿ ಗೋ ಸಂರಕ್ಷಕರು ಬರುವುದು!

ಬೀಡಾಡಿ ದನಗಳ ಚಿಂತೆ ಬೇಕಿಲ್ಲ!

ಉಪ ಕಸುಬುಗಳಿಂದ ಹೊರ ಬಿದ್ದ ಬೀಡಾಡಿ ದನಗಳು ಮೊದ ಮೊದಲು ರೈತರಿಗೆ ತೊಂದರೆ ನೀಡಲಿವೆ. ರೈತರೇನಾದರೂ ಅವುಗಳ ಹಿಂಸೆಗೆ ಮುಂದಾದರೇ ಗೋ ರಕ್ಷಕರು ಇರುತ್ತಾರಲ್ಲಾ ರೈತರನ್ನು ಹಿಂಸಿಸಲು!?

ಅಷ್ಟರೊಳಗೆ ಕಾರ್ಪೋರೇಟ್ ಕೃಷಿ ಕಾಯ್ದೆಗಳು ಜಾರಿಗೆ ಬಂದು ವ್ಯವಸಾಯವು ಕಾರ್ಪೋರೇಟ್ ಹಿಡಿತಕ್ಕೆ ಸಿಕ್ಕರೆ, ಖಂಡಿತಾ ಅವುಗಳಿಗೆ ಮುಕ್ತಿ ಸಿಗಲಿದೆ. ಆಹಾರ ಮತ್ತಿತರೇ ಕೃಷಿ ಉತ್ಪನ್ನಗಳಿಗೆ ತೊಂದರೆ ನೀಡುವ ಅವುಗಳನ್ನು ಗುಂಡು ಹೊಡೆದು ಕೊಲ್ಲಲು ಇಲ್ಲವೇ, ಅವುಗಳನ್ನು ಹಿಡಿದು ಮಾಂಸೋದ್ಯಮಕ್ಕೆ ಸಾಗಿಸುವ ಆದೇಶ ಬರಲಿವೆ. ಭಯಪಡುವುದು ಅಗತ್ಯವಿಲ್ಲಾ! ಹೌದು,

ದೇಶೀ ತಳಿಗಳು ಕೂಡಾ ನೋಡಲು ಸಿಗುತ್ತವೆ ನಿಮಗೆ ಮತ್ತು ನಿಮ್ಮ ಮಕ್ಕಳು ಮೊಮ್ಮಕ್ಕಳಿಗೆ, ಆದರೇ ಅವು ಇರುವುದು ಮ್ಯುಸಿಯಂಗಳಲ್ಲಿ.

ದಲಿತರು ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಗಳಿಗೆ ಕುಮ್ಮಕ್ಕು

ಈ ಮಸೂದೆ ಕಾಯ್ದೆಯಾಗಿ ಜಾರಿಗೆ ಬಂದರೇ, ಈ ಎಲ್ಲರ ಜೊತೆ ತೀವ್ರ ಸಂಕಷ್ಟಕ್ಕೊಳಗಾಗುವ ಸಮುದಾಯಗಳಲ್ಲಿ, ಅಲ್ಪ ಸಂಖ್ಯಾತರು ಮತ್ತು ಪರಿಶಿಷ್ಠ ಜಾತಿ ಮತ್ತು ಪಂಗಡಗಳ ದಲಿತರು ಮುಖ್ಯವಾಗಿದ್ದಾರೆ. ಅದಾಗಲೇ ಕರ್ನಾಟಕ ಹಾಗೂ ದೇಶದ ಹಲವು ರಾಜ್ಯಗಳಲ್ಲಿ ಗೋರಕ್ಷಕ ಅಪರಾಧಿಗಳಿಂದ ತೀವ್ರ ರೀತಿಯ ದೈಹಿಕ ಧಾಳಿಗಳಿಗೆ ತುತ್ತಾಗಿದ್ದಾರೆ.

ಈ ಸಮುದಾಯಗಳಲ್ಲಿ ಬಹುತೇಕರು ಜಾನುವಾರು ಮಾಂಸಹಾರಿಗಳಾಗಿದ್ದಾರೆ. ಅದರಲ್ಲೂ ದಲಿತರು ತಾರತಮ್ಯದ ಕಾರಣದಿಂದಾಗಿ ಪೌಷ್ಠಿಕ ಸಸ್ಯಹಾರದ ಕೊರತೆಯಿಂದ ನಲುಗಿದ್ದಾರೆ. ಕಳೆದ ಒಂದೆರೆಡು ದಶಕಗಳವರೆಗೆ, ಗ್ರಾಮೀಣ ಪ್ರದೇಶದ ಮೇಲ್ಜಾತಿಗಳ ಮೇಲ್ವರ್ಗದ ಭೂಮಾಲಕರ ಮನೆಗಳಲ್ಲಿ ಜೀತದಾಳುಗಳಾಗಿ ಮತ್ತು ಸಂಬಳದಾಳುಗಳಾಗಿ ದುಡಿದಿದ್ದಾರೆ. ಆದರೆ ಅಲ್ಲಿಯೂ ಅವರು ಬಹುತೇಕ ತಂಗಳು ತಿಂದು ಕಾರ್ಯ ನಿರ್ವಹಿಸಿದ್ದಾರೆ.

ಕೂಲಿಕೆಲಸ, ಕೂಲಿಯ ಮೊತ್ತ ಅಷ್ಟಕ್ಕಷ್ಟೇ ಪಡೆದಿದ್ದಾರೆ. ಇಂತಹ ಎಲ್ಲರೂ ಕೂಡಾ ಜಾನುವಾರು ಮಾಂಸ ಸೇವನೆಯಿಂದಲೇ ಬದುಕುಳಿದಿದ್ದಾರೆ. ಈಗಲೂ ಈ ಕುಟುಂಬಗಳ ಬಹುತೇಕರಿಗೆ, ತಲಾ ಆದಾಯದಲ್ಲಿ ಪೌಷ್ಠಿಕ ಆಹಾರವಲ್ಲಾ, ಸರಕಾರ ನೀಡುವ ಅಕ್ಕಿ-ಗೋದಿಯ ನಡುವೆಯೂ ಕನಿಷ್ಠ ಸಾಮಾನ್ಯ ಆಹಾರವನ್ನು ಪಡೆಯಲಾಗುತ್ತಿಲ್ಲ. ಪೌಷ್ಟಿಕತೆಗಾಗಿ ಈಗಲೂ ಜಾನುವಾರು ಮಾಂಸವನ್ನು ಅವಲಂಬಿಸಿದ್ದಾರೆ.

ಇದೀಗ ಈ ಮಸೂದೆ ಕಾಯ್ದೆಯಾಗಿ ಜಾರಿಗೆ ಬಂದರೇ, ಅದೂ ಕೂಡಾ ಅವರಿಗೆ ದೊರೆಯುವುದಿಲ್ಲ. ಜಾತಿ ತಾರತಮ್ಯ ಹಾಗೂ ಅಸ್ಪೃಸ್ಯಾಚರಣೆಯ ಕಾರಣದಿಂದಲೂ ಮತ್ತು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಹೆಚ್ಚಳದಿಂದಲೂ ಕೂಲಿ ಕೆಲಸವೂ ಇಲ್ಲದಂತಾಗುತ್ತಿದೆ. ಅದರಿಂದಾಗಿಯೂ ಅವರ ಆದಾಯ ಮತ್ತಷ್ಟು ಕುಸಿದಿದೆ. ಮಾತ್ರವಲ್ಲಾ, ಜಾಗತೀಕರಣ ಹಾಗೂ ಖಾಸಗೀಕರಣ ಮತ್ತು ಉದಾರೀಕರಣದ ಭಾಗವಾಗಿ, ಅವರ ಮಕ್ಕಳಿಗೆ ಸಿಗುವ ಅಂಗನವಾಡಿಗಳ ಪೌಷ್ಠಿಕ ಆಹಾರಕ್ಕೂ ಮತ್ತು ಶಿಕ್ಷಣದ ಖಾಸಗೀಕರಣದಿಂದ ಮಕ್ಕಳಿಗೆ ಸಿಗುತ್ತಿದ್ದ ಶಿಕ್ಷಣ ಮಾತ್ರವಲ್ಲಾ, ಅಲ್ಲಿ ದೊರೆಯುತ್ತಿದ್ದ ಆಹಾರಕ್ಕೂ ಮತ್ತು ರೇಷನ್ ಕಾರ್ಡ ಮೂಲಕ ಪಡೆಯುತ್ತಿದ್ದ ಪಡಿತರಕ್ಕೂ ಸಂಚಕಾರ ಬರುತ್ತಿರುವಾಗ, ಈ ಕಾಯ್ದೆಯು ದಲಿತ ಸಮುದಾಯಗಳ ಮೇಲೆ ಎಂತಹ ಗಂಭೀರ ಪರಿಣಾಮ ಬೀರಬಹುದೆಂದು ಊಹಿಸಬಹುದಾಗಿದೆ. ಸತ್ತ ಜಾನುವಾರುಗಳ ಚರ್ಮ ಸುಲಿದು ಮಾರಾಟ ಮಾಡುತ್ತಿದ್ದ ಉದ್ಯೋಗವು ಅದರೊಂದಿಗೆ ಇಲ್ಲವಾಗುತ್ತದೆ.

ಅಲ್ಪ ಸಂಖ್ಯಾತರು, ಧಾರ್ಮಿಕ ದ್ವೇಶಕ್ಕೆ, ಮತಾಂದತೆ, ಭಯೋತ್ಪಾದನೆಗೆ ಈಗಾಗಲೇ ನಲುಗಿದ್ದಾರೆ. ಯಾವಾಗ, ಜನತೆಯ ಒಗ್ಗಟ್ಟು ಮುರಿಯಲು ಮತ್ತು ಮುಖ್ಯ ವಾಹಿನಿಯಿಂದ ಅವರ ಗಮನವನ್ನು ಬೇರೆಡೆ ಸೆಳೆಯಲು ಆಳುವ ವರ್ಗಗಳು ಬಯಸುತ್ತವೋ ಅಂತಹ ಎಲ್ಲಾ ಸಂದರ್ಭಗಳಲ್ಲೂ, ಅಲ್ಪಸಂಖ್ಯಾತರ ಮೇಲೆ ಧಾಳಿ ಎಸಗಲು ಈ ಕಾಯ್ದೆಯ ದುರುಪಯೋಗವನ್ನು ಮಾಡುವ ಸಂಭವಗಳು ಇದ್ದೇ ಇವೆ.

ಮೇಲಾಗಿ, ಇದು ಜನತೆಯ ಆಹಾರದ ಹಕ್ಕು, ಬದುಕುವ ಹಕ್ಕು, ಉದ್ಯೋಗದ ಹಕ್ಕುಗಳ ಮೇಲಿನ ಧಾಳಿಯಾಗಿದೆ. ಹೀಗೆ ಈ ಮಸೂದೆ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸಂವಿದಾನದ ವಿರೋಧಿಯೂ ಆಗಿದೆ.

ಗೋವುಗಳ ಪೂಜಿಸುವುದು ನಮ್ಮ ಸಂಸ್ಕೃತಿ?

ಹೌದು, ಗೋವುಗಳನ್ನು ಅಥವಾ ಜಾನುವಾರುಗಳನ್ನು ಪೂಜಿಸುವುದು ಖಂಡಿತಾ, ನಮ್ಮ ಸಂಸ್ಕೃತಿಯ ಭಾಗ.

ಆದ್ದರಿಂದ, ಗೋಮಾತೆಯನ್ನು ಹತ್ಯೆ ಮಾಡುವುದು ನ್ಯಾಯವೆ? ಅಪರಾಧವಲ್ಲವೇ? ನಿಮ್ಮನ್ನು ಪೊರೆದವಳಲ್ಲವೇ? ಕೊಲ್ಲುವುದು ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ವಿರುದ್ದವಲ್ಲವೇ? ಎಂಬ ಪ್ರಶ್ನೆಗಳನ್ನು ಮುಂದಿಟ್ಟು,

ಆದ್ದರಿಂದಲೇ ಅವುಗಳ ರಕ್ಷಣೆಗಾಗಿ ಈ ಮಸೂದೆ, ಎಂಬ ವಾದವನ್ನು ಈ ಮಸೂದೆಯೊಂದಿಗೆ ಹರಿಬಿಡಲಾಗಿದೆ. ನಾವು ಮಾತ್ರವೇ ಸಂಸ್ಕೃತಿಯ ರಕ್ಷಕರು ಎಂದು ಹೇಳಿಕೊಳ್ಳಲಾಗುತ್ತದೆ ಮತ್ತು ಆ ಮೂಲಕ ತಮಗೆ ಹಾಗೂ ಈ ಮಸೂದೆಗೆ ಬೆಂಬಲ ಕ್ರೋಢೀಕರಿಸುವುದು ನಡೆದಿದೆ!

ಅದಾಗಲೇ ಮೇಲಿನ ವಿಶ್ಲೇಷಣೆಯ ಮೂಲಕ, ಈ ಮಸೂದೆಯ ಪರಿಣಾಮಗಳನ್ನು ಮತ್ತು ಅದರ ಉದ್ದೇಶವನ್ನು ಗಮನಿಸಿದ್ದೇವೆ. ಅದರಂತೆ, ಈ ಮಸೂದೆಯ ಒಟ್ಟು ಸಾರಾಂಶ, ಹೈನುಗಾರಿಕೆಯ ಉಪಕಸುಬನ್ನು ನಾಶ ಮಾಡಿ ಕಾರ್ಪೋರೇಟ್ ಉದ್ಯಮಗಳಿಗೆ ವೇಗವಾಗಿ ಹಾದಿ ಮಾಡಿಕೊಡುವುದೇ ಆಗಿದೆ. ದೇಶೀಯ ಹೈನೋದ್ಯಮ, ಮಾಂಸೋದ್ಯಮ, ಚರ್ಮೋದ್ಯಮಗಳನ್ನು ನಾಶ ಮಾಡಿ ಅವುಗಳ ಸ್ಥಾನಗಳಲ್ಲಿ ಕಾರ್ಪೋರೇಟ್ ಕಂಪನಿಗಳು ತಲೆ ಎತ್ತಲು ವೇಗವಾಗಿ ಅವಕಾಶ ಮಾಡಿಕೊಡುವುದೇ ಆಗಿದೆ. ಇದರಿಂದ ಸಂಕಷ್ಟಕ್ಕೀಡಾಗುವ ಜನತೆ ಕಾರ್ಪೋರೇಟ್ ಕಂಪನಿಯ ವಿರುದ್ದ ಮತ್ತು ಸರಕಾರಗಳ ವಿರುದ್ದ ನಿಲ್ಲುವುದನ್ನು ತಡೆಯಬೇಕಲ್ಲವೆ?

ಅದಕ್ಕಾಗಿ, ಸಂಸ್ಕೃತಿ ರಕ್ಷಣೆಯ ವಿಚಾರವನ್ನು ಮುಂದೆ ಮಾಡಲಾಗುತ್ತದೆ ಎಂಬುದು ಸ್ಪಷ್ಟವಾಗಿದೆ. ಇದು ಜನಗಳ ತಲೆಯಲ್ಲಿ ಬಲವಾಗಿ ಹೊಕ್ಕರೇ, ಮಾಂಸಹಾರಿಗಳು ಮತ್ತು ಸಸ್ಯಹಾರಿಗಳ ನಡುವೆ ವಿಭಜನೆ ಬರಲಿದೆ. ಮಾತ್ರವಲ್ಲಾ, ದನದ ಮಾಂಸ ಸೇವಿಸುವವರು ಮತ್ತು ಇತರೆ ಮಾಂಸ ಸೇವಿಸುವವರ ನಡುವೆ ವಿಭಜನೆ ಉಂಟು ಮಾಡಬಹುದಾಗಿದೆ.

ಹೀಗೆ ಕಾರ್ಪೋರೇಟ್ ಕಂಪನಿಗಳ ವಿರುದ್ದ ಹಾಗೂ ಅವುಗಳ ಪರವಾಗಿ ಕಾರ್ಯ ನಿರ್ವಹಿಸುವ ಸರಕಾರಗಳ ವಿರುದ್ದ ಏಳುವ ಜನಗಳ ವ್ಯಾಪಕ ಅಸಮಾಧಾನಗಳನ್ನು ಅವರವರ ನಡುವೆಯ ತಿರುಗಿಸಿ ಪರಸ್ಪರರ ವಿರುದ್ಧದವೇ ಹರಿಯುವಂತೆ ಮಾಡಲಿದೆ.

ಹಾಗಾದರೇ ಗೋಮಾತೆ ಪೂಜಿಸುವುದು ನಮ್ಮ ಸಂಸ್ಕೃತಿಯಲ್ಲವೇ?

ಖಂಡಿತಾ ನಿಜಾ! ಅದು ನಮ್ಮ ಸಂಸ್ಕೃತಿಯ ಭಾಗವೇ. ಅದರಲ್ಲಿ ಯಾವುದೇ ಅನುಮಾನ ಬೇಡಾ! ಆದರೇ ಅದಷ್ಟೇ ಅಲ್ಲ, ಮುಂದುವರೆದು, ಇನ್ನೂ ಇದೆ. ಆದರೇ ಅದನ್ನು ಜಾಣತನದಿಂದ ಮರೆ ಮಾಚಲಾಗುತ್ತಿದೆ.

ನಾವು ರೈತರು, ಗ್ರಾಮೀಣ ಜನರು ಯಾವ ಯಾವುದರಿಂದ ಪ್ರಯೋಜನ ಅಥವಾ ಉಪಯೋಗ ಪಡೆದಿದ್ದೇವೋ ಅವುಗಳಿಗೆ ಕೃತಜ್ಞರಾಗಿದ್ದೇವೆ. ಅದಕ್ಕಾಗಿ ನಮಸ್ಕರಿಸುತ್ತೇವೆ. ಪೂಜಿಸುತ್ತೇವೆ.

ಕಾರಹುಣ್ಣಿಮೆ, ಮಣ್ಣೆತ್ತಿನ ಅಮವಾಸ್ಯೆ, ಸಂಕ್ರಾಂತಿ ಮುಂತಾದ ಹಬ್ಬಗಳಲ್ಲಿ ನಮ್ಮ ಜಾನುವಾರುಗಳನ್ನು ವಿಶೇಷವಾಗಿ ಪೂಜಿಸುತ್ತೇವೆ. ಸ್ಮರಿಸುತ್ತೇವೆ. ಜಾನುವಾರುಗಳನ್ನು ಮಾತ್ರವಲ್ಲಾ, ಭೂಮಿ ತಾಯಿಯನ್ನು, ಬೆಳೆಯನ್ನು, ಕೃಷಿ ಉತ್ಪಾದನಾ ಸಲಕರಣೆಗಳನ್ನು ಮತ್ತು ಬೆಳೆರಾಸಿಗಳನ್ನು, ಗಂಗೆ ಅಂದರೆ ಜಲವನ್ನು...ಇನ್ನು ಮುಂತಾಗಿ ಪೂಜುತ್ತಾ ಬಂದಿದ್ದೇವೆ!

ಗಮನಿಸ ಬೇಕಾದುದು ಏನೆಂದರೇ, ನಮಗೆ ಯಾವುದು ಉಪಯುಕ್ತವೋ ಅದನ್ನು ಉತ್ಪಾದಿಸಿದ್ದೇವೆ ಯಾವುದನ್ನು ಉತ್ಪಾದಿಸಿದ್ದೇವೋ, ಯಾವುದನ್ನು ಉತ್ಪಾದಿಸಲು ನೆರವಾದ ಸಾಧನಗಳಿವೆಯೋ ಅವುಗಳನ್ನು ಪೂಜಿಸಿದ್ದೇವೆ! ಅವುಗಳಿಗೆ ಕೃತಜ್ಞರಾಗಿದ್ದೇವೆ. ಮಾತ್ರವಲ್ಲಾ! ಯಾವುದನ್ನು ಉತ್ಪಾದಿಸಿದ್ದೇವೋ ಅವುಗಳನ್ನು ಕೇವಲ ಪೂಜಿಸಲಷ್ಠೇ ಉತ್ಪಾದಿಸಿದ್ದಲ್ಲ! ಉತ್ಪಾದನೆಯ ಅನುಭವ ಇಲ್ಲದವರು ಮತ್ತು ನಿಜವನ್ನು ತಿರುಚುವವರು ಮಾತ್ರವೇ ಹಾಗೆ ಹೇಳುವುದು.

ನಾವು ಉತ್ಪಾದಿಸಿದ್ದನ್ನು ಸೇವಿಸಿದ್ದೇವೆ. ಇದು ನಮ್ಮ ಒಟ್ಟು ಸಂಸ್ಕೃತಿಯಾಗಿದೆ.

ಜಾನುವಾರುಗಳನ್ನು ಪೂಜಿಸುತ್ತಿದ್ದೇವೆಂಬ ಕಾರಣಕ್ಕೆ ಅವುಗಳನ್ನು ಉಳುಮೆಯಲ್ಲಿ ತೊಡಗಿಸದೇ ಬಿಟ್ಟಿಲ್ಲ? ಭೂಮಿಯನ್ನು ತಾಯಿಯೆಂದು ಪೂಜಿಸುತ್ತೇವೆ ಎಂಬ ಕಾರಣಕ್ಕೆ ಉಳುವುದನ್ನು ಬಿಟ್ಟಿಲ್ಲ. ಸುಗ್ಗಿ ಸಂದರ್ಭದಲ್ಲಿ ಪೈರನ್ನು ಪೂಜಿಸುತ್ತೇವೆಂಬ ಕಾರಣಕ್ಕೆ ಕೊಯ್ಲು ಮಾಡುವುದನ್ನು ಬಿಟ್ಟಿಲ್ಲ. ರಾಶಿಯನ್ನು ಪೂಜಿಸುತ್ತೇವೆಂಬ ಕಾರಣಕ್ಕೆ ಧಾನ್ಯಗಳನ್ನು ಸೇವಿಸುವುದನ್ನು ನಿಲ್ಲಿಸಿಲ್ಲ.

ಮಾತ್ರವಲ್ಲಾ, ಮೂಲ ಮಾನವ ಅವುಗಳನ್ನು ಕಾಡಿನಿಂದ ನಾಡಿಗೆ ತಂದು ಅಭಿವೃದ್ಧಿ ಪಡಿಸಿರುವುದೇ ತನ್ನ ಉಪಯೋಗಕ್ಕಾಗಿ ಎಂಬುದನ್ನು ಮರೆಯಬಾರದು! ಆದ್ದರಿಂದ ಅವುಗಳನ್ನು ಆಹಾರವಾಗಿಯೂ ಬಳಸುತ್ತಾ ಬಂದಿದ್ದಾನೆ. ಈಗಿನ ಸಸ್ಯ ಹಾರಿಗಳು ಮಾಜಿ ಮಾಂಸಹಾರಿಗಳೇ ಆಗಿದ್ದಾರೆ. ಇದೇ

ನಮ್ಮ ನಿಜ ಸಂಸ್ಕೃತಿಯಾಗಿದೆ.

ಮಾಂಸಾಹಾರವೇಕೆ? ಪ್ರಾಣಹಿಂಸೆ ಅಲ್ಲವೇ?

ಜಾನುವಾರು ಹತ್ಯೆ ನಿಷೇದ ಮಸೂದೆ ಸಮರ್ಥನೆಗೆ ಮತ್ತೊಂದು ವಾದವನ್ನು ಹರಿಬಿಡಲಾಗಿದೆ.

ಮಾಂಸಹಾರಿಗಳು ಮಾಂಸ ಸೇವಿಸುವುದರಿಂದ ಪ್ರಾಣಿ ಹತ್ಯೆಯಾಗುತ್ತದೆ. ಪ್ರಾಣಿ ಹಿಂಸೆ ಮಹಾ ಪಾಪವಲ್ಲವೇ? ನಮ್ಮ ಹಾಗೆ ಅವುಗಳು ಜೀವಿಗಳಲ್ಲವೇ? ಅವುಗಳನ್ನು ಬದುಕಲು ಬಿಡಿ!

ಎನ್ನಲಾಗುತ್ತದೆ.

ಈ ಪ್ರಶ್ನೆ ವಿದ್ಯಾವಂತ ಮಕ್ಕಳು ತಮ್ಮ ತಮ್ಮ ಮನೆಗಳಲ್ಲಿಯೂ ವ್ಯಾಪಕವಾಗಿ ಕೇಳುವಂತಹ ರೀತಿಯಲ್ಲಿ ಅದನ್ನು ವ್ಯಾಪಕವಾಗಿ ವಿಸ್ತರಿಸಲಾಗಿದೆ. ಇದೂ ಕೂಡಾ ಜಾನುವಾರು ಹತ್ಯೆ ಮಸೂದೆಗೆ/ ಕಾಯ್ದೆಗೆ ಸಮರ್ಥನೆಯಾಗಿ ಮುಂದೆ ಬಂದಿದೆ.

ಮತ್ತೊಮ್ಮೆ ಇಲ್ಲಿ ನೆನಪಿಸುತ್ತೇನೆ. ಈ ಮುಂಚೆಯೇ ವಿಶ್ಲೇಷಿಸಿದಂತೆ ಈ ಮಸೂದೆ/ ಕಾಯ್ದೆಯ ನಿಜವಾದ ಉದ್ದೇಶ ಉಪಕಸುಬಾಗಿದ್ದ ಜಾನುವಾರು ಸಾಕಾಣೆ ಬೆನ್ನೆಲುಬಾಗಿದ್ದ ಹೈನು, ಮಾಂಸ ಹಾಗೂ ಚರ್ಮ ಮತ್ತಿತರೇ ಉದ್ಯಮಗಳನ್ನು ಕಾರ್ಪೋರೇಟ್ ಲೂಟಿಗೊಳಪಡಿಸುವುದೇ ಆಗಿದೆ.

ಇದಕ್ಕೂ ಈ ವಾದಕ್ಕೂ ಸಂಬಂಧವಿಲ್ಲವಾದರೂ, ಸಂಬಂದವನ್ನು ತಳಕು ಹಾಕಲಾಗಿದೆ.

ಯಾರಿಗಾದರೂ, ಮಾಂಸಹಾರ ಸೇವನೆ ಪ್ರಾಣಿ ಹಿಂಸೆ ಅನಿಸಿದರೇ ಅವರು ಮಾಂಸಹಾರ ಸೇವನೆಯಿಂದ ದೂರವಿರಬಹುದು! ಯಾರು, ಯಾವ ಆಹಾರ ಸೇವಿಸ ಬೇಕೆಂಬುದು ಅವರಿಗೆ ಬಿಟ್ಟ ವಿಚಾರವಾಗಿದೆ. ಅದವರ ಹಕ್ಕಾಗಿದೆ.

ಯಾರ ಮೇಲೂ ಇಂತಹದ್ದೇ ಆಹಾರ ಸೇವಿಸಿ ಎಂದು ಬಲವಂತ ಮಾಡುವುದು ಅಪರಾಧವಾಗುತ್ತದೆ.

ಅದೇ ರೀತಿ, ಮಾಂಸಾಹಾರ ಸೇವಿಸುವವರನ್ನು ಕಡೆಗಣಿಸಿ ನೋಡುವುದು ಕೂಡಾ ಅಪರಾಧವಾಗುತ್ತದೆ. ಮಾಂಸಾಹಾರ ಯಥೇಚ್ಛ ಪ್ರೋಟೀನ್ ನಿಂದ ಕೂಡಿದ ಪೌಷ್ಠಿಕ ಆಹಾರವಾಗಿದೆ.

ಆದಿಮಾನವನಿಗೆ ಪ್ರಾಣಿ ಮಾಂಸವೇ ಆಗಲಿ ಅಥವಾ ಸಸ್ಯಾಹಾರವೇ ಆಗಲಿ ದೊರೆಯದೇ ಇದ್ದಾಗ ಅವನು ನರಭಕ್ಷಕನೂ ಆಗಿದ್ದನು. ಅದಕ್ಕೆ ನಮ್ಮ ಸಂಪ್ರದಾಯಗಳ ಆಚರಣೆಗಳಲ್ಲಿ, ಉತ್ಖನನಗಳಲ್ಲಿ, ಪುರಾಣಗಳಲ್ಲಿ ವೇದೋಪನಿಷತ್ತುಗಳಲ್ಲಿ ಸಾಕ್ಷಿಗಳು ದೊರೆಯುತ್ತವೆ.

ಯಾವಾಗ ಮಾನವನಿಗೆ ಪ್ರಾಣಿ ಮಾಂಸ ಮತ್ತು ಸಸ್ಯಹಾರ ಸಾಕಷ್ಟು ದೊರೆಯಿತೋ, ಆಗ ಅದನ್ನು ಬಿಟ್ಟಿದ್ದಾನೆ. ಅದೇ ರೀತಿ, ಮುಂದೆ ಸಸ್ಯಾಹಾರ ಹೇರಳವಾಗಿ ದೊರಕಿತಂತೆ

ಮಾಂಸಾಹಾರವನ್ನು ತ್ಯಜಿಸಿ ಕೇವಲ ಸಸ್ಯಾಹಾರಕ್ಕೆ ಅಂಟಿಕೊಂಡಿದ್ದು ಇದೆ. ಆದರೇ ಅಗತ್ಯಕ್ಕೆ ಬೇಕಾದಷ್ಟು ಸಸ್ಯಾಹಾರ ದೊರೆಯದಾದಾಗ ಮತ್ತು ಮಾಂಸಾಹಾರ ದೊರೆಯುವಾಗ ಎರಡನ್ನೂ ಉಪಯೋಗಿಸುವುದು ನಡೆದಿದೆ.

ಮೇಲಾಗಿ, ಮಾನವನಿಗೆ ಮಾಂಸಾಹಾರವು ಅವನ ಪೌಷ್ಠಿಕತೆಗೆ ಸಹಾಯ ಮಾಡುತ್ತಿರುವುದರಿಂದ, ಮಾಂಸಾಹಾರ ಸೇವನೆಯು ಸಾಮಾಜಿಕವಾಗಿ ಮತ್ತು ಸಾರ್ವಜನಿಕವಾಗಿ ನಿಷಿದ್ದವಲ್ಲದೇ ಇರುವುದರಿಂದ ಅದನ್ನು ಈಗಲೂ ಜಗತ್ತಿನಾದ್ಯಂತ ವ್ಯಾಪಕವಾಗಿ ಬಳಸುತ್ತಿರುವುದರಿಂದ ಮಾಂಸಾಹಾರವು ಆಹಾರದ ಪಟ್ಟಿಗಳಲ್ಲಿ ಈಗಲೂ ಮುಂದುವರೆಯುತ್ತಿರುವುದರಿಂದ ಮಾಂಸಾಹಾರ ಸೇವನೆ ಅಯೋಗ್ಯವೂ, ಅನಾರೋಗ್ಯಕರವೂ ಆಗಿಲ್ಲದಿರುವುದರಿಂದ ಅದನ್ನು ಆಹಾರವಾಗಿ ಸೇವಿಸುವವರು ಸೇವಿಸಬಹುದು.

ಇನ್ನು ಪ್ರಾಣಿ ಅಥವಾ ಪ್ರಾಣಹಿಂಸೆ ಥರವೇ? ಎಂಬ ಪ್ರಶ್ನೆಯೂ ಇದೆ.

ನಾವು ಯಾವುದೇ ಆಹಾರವನ್ನು ಅದರ ಮೂಲದಿಂದ ಬೇರ್ಪಡಿಸದೇ ದೊರೆಯದಾಗಿದೆ.

ಮಾಂಸಾಹಾರಕ್ಕಾಗಿ ಸಂಬಂದಿಸಿದ ಪ್ರಾಣಿಗಳನ್ನು ಹತ್ಯೆ ಮಾಡಲೇ ಬೇಕಾಗುತ್ತದೆ. ಅದೇ ರೀತಿ, ಸಸ್ಯಾಹಾರವನ್ನು ಪಡೆಯಲು ಕೂಡಾ ಸಸ್ಯವನ್ನು ಕಟಾವು ಮಾಡಲೇ ಬೇಕಾಗುತ್ತದೆ. ಉದಾಹರಣೆಗೆ, ಜೋಳದ ಸಸ್ಯದಿಂದ ಜೋಳದ ತೆನೆಯನ್ನು ಬೇರ್ಪಡಿಸಲು ಕೊಯ್ಲು ಮಾಡಲೇಬೇಕು. ಇದು ಸಹಜ ನಿಯಮವಾಗಿದೆ.

ಪ್ರಾಣಿಯಲ್ಲೂ ಮತ್ತು ಸಸ್ಯದಲ್ಲೂ ಪ್ರಾಣಗಳಿವೆ. ಈಗ ಪ್ರಾಣ ಹಿಂಸೆ ಎಂದು ಸುಮ್ಮನಾದರೇ ನೀವು ಆಹಾರ ಸೇವನೆಯನ್ನು ನಿಲ್ಲಿಸ ಬೇಕಾಗುತ್ತದೆ.

ಪ್ರಾಣಿ ಹಿಂಸೆ ಅಥವಾ ಸಸ್ಯದ ಜೀವ ಹಿಂಸೆ ಎಂದು ಯೋಚಿಸುತ್ತಾ ಕುಳಿತರೇ, ಸ್ವಯಂ ಹತ್ಯೆಗೊಳಗಾಗಬೇಕಾಗುತ್ತದೆ. ಅಥವಾ ಮಾನವ ಹತ್ಯೆಯಾಗುತ್ತದೆ. ●

ಕಾರ್ಮಿಕ ವರ್ಗದ ಚಳವಳಿಯ ಆರಂಭದ ವರ್ಷಗಳು



ವಿಕಾಸದ ಹಾದಿಯನ್ನು ಅನುಸರಿಸಿ, ಭಾರತದ ಕಾರ್ಮಿಕ-ವರ್ಗದ ಚಳುವಳಿಯನ್ನು ನಾಲ್ಕು ವಿಶಾಲ ಹಂತಗಳಾಗಿ ವಿಂಗಡಿಸಬಹುದು– ಮೊದಲ ಹಂತವು 1850 ರಿಂದ 1900 ರವರೆಗೆ ಕಾರ್ಮಿಕ-ವರ್ಗದ ಚಳವಳಿಯ ಪ್ರಾರಂಭದ ಅವಧಿ; ಹೊಸದಾಗಿ ಜನಿಸಿದ ಭಾರತದ ಕಾರ್ಮಿಕ ವರ್ಗದ ಚಿಂತಾಜನಕ ಪರಿಸ್ಥಿತಿಯು ಕೆಲವು ವಿದ್ಯಾವಂತ ಲೋಕಚಿಂತಕರು ಮತ್ತು ಸಾಮಾಜಿಕ ಕಾರ್ಯಕರ್ತರ ಗಮನವನ್ನು ಸೆಳೆಯಿತು. ಅವರಲ್ಲಿ ಯಾರೊಬ್ಬರೂ ಹೋರಾಟಗಾರರಾಗಲಿ ಅಥವಾ ಅದರ ಬಗ್ಗೆ ಯಾವುದೇ ಪರಿಕಲ್ಪನೆಯನ್ನು ಹೊಂದಿದವರಾಗಲಿ ಆಗಿರಲಿಲ್ಲ. ಆದರೆ ಸಮಾಜ ಸೇವೆಯ ಮನೋಭಾವ ಮತ್ತು ಸಹಾನುಭೂತಿಯ ಭಾವದಿಂದ ಅವರು ಸರ್ಕಾರ ಮತ್ತು ಸಾರ್ವಜನಿಕರ ಮುಂದೆ ಕಾರ್ಮಿಕರ ವಿಷಾದಕರ ಅವಸ್ಥೆಯನ್ನು ನಿವೇದಿಸಲು ಪ್ರಯತ್ನಿಸಿದರು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್ ಶಾನಭಾಗ

ಸಾಮಾಜಿಕ ಹಿನ್ನೆಲೆ

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ನವಜಾತ ಭಾರತೀಯ ಬಂಡವಳಿಗ ವರ್ಗ ಮತ್ತು ಸಾಮ್ರಾಜ್ಯಶಾಹಿ ಆಡಳಿತದ ನಡುವೆ ಹೆಚ್ಚುತ್ತಿದ್ದ ಹಿತಾಸಕ್ತಿ ಸಂಘರ್ಷವು 1885 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹುಟ್ಟಿಗೆ ಹಿನ್ನೆಲೆಯನ್ನು ಒದಗಿಸಿತು. ಅಂದಿನ ಭಾರತೀಯ ಸಮಾಜದ ಉನ್ನತ ಶ್ರೇಣಿಯಿಂದ ಬಂದ ಡಬ್ಲ್ಯೂ.ಸಿ. ಬ್ಯಾನರ್ಜಿ ಮತ್ತು ದಾದಾಭಾಯಿ ನೌರೋಜಿ ಯವರಂತಹ ವ್ಯಕ್ತಿಗಳು ಈ ಸಂಘಟನೆಯ ಚುಕ್ಕಾಣಿ ಹಿಡಿದಿದ್ದದ್ದು ಕೇವಲ ಆಕಸ್ಮಿಕವಲ್ಲ. ಭಾರತದ ಉದಯೋನ್ಮುಖ ಬಂಡವಳಿಗ ವರ್ಗದ ಪ್ರತಿನಿಧಿಗಳು ಈ ಸಂಘಟನೆಯ ಆರಂಭಿಕ ಹಂತದಲ್ಲಿ ಅದನ್ನು ಸೇರಿಕೊಂಡು ಅದರ ವ್ಯವಹಾರಗಳನ್ನು ನಿರ್ವಹಿಸಿದರು. ಬ್ರಿಟಿಷ್ ಮತ್ತು ಭಾರತದ ಬಂಡವಾಳದ ಸಂಘರ್ಷದ ಆಸಕ್ತಿ ಮತ್ತು ವಿದ್ಯಾವಂತ ಮಧ್ಯಮ ವರ್ಗದವರ ಆಕಾಂಕ್ಷೆಗಳು ಇನ್ನೂ ರಚನಾತ್ಮಕ ಹಂತದಲ್ಲಿದ್ದುದು, ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಧಾನ ಚಾಲನೆಯಾಗಿ ಕಾರ್ಯನಿರ್ವಹಿಸಿತು. ಶಾಸಕಾಂಗ ಪರಿಷತ್ತಿನಲ್ಲಿ ಭಾರತೀಯ ಪ್ರಾತಿನಿಧ್ಯದ ಕಿರಿದಾದ ಪರಿಧಿಯೊಳಗೆ ಕಾಂಗ್ರೆಸ್‌ನ ಉದ್ಘಾಟನೆ ಮತ್ತು ನಂತರದ ಕೆಲವು ಅಧಿವೇಶನಗಳಲ್ಲಿ ಅಂಗೀಕರಿಸಿದ ನಿರ್ಣಯಗಳ ಕಟ್ಟುನಿಟ್ಟಾದ ಮಿತಿ, ಭಾರತದಲ್ಲಿ ಏಕಕಾಲದಲ್ಲಿ ನಾಗರಿಕ ಸೇವಾ ಪರೀಕ್ಷೆಯನ್ನು ನಡೆಸುವುದು, ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು ಮತ್ತು ಇತರ ವಿಷಯಗಳು ಸಂಘಟನೆಯ ವರ್ಗ-ಲಕ್ಷಣಗಳ ಕಾರಣದಿಂದಲೇ ಉಂಟಾಗಿದ್ದವು.

ಭಾರತದ ರಾಷ್ಟ್ರೀಯತೆ ಹೀಗೆ ಕಾಂಗ್ರೆಸ್ ಮತ್ತು ವಿದ್ಯಾವಂತ ಶ್ರೀಮಂತರನ್ನು ಕೇಂದ್ರೀಕರಿಸಿಯೇ ಮೊಳಕೆಯೊಡೆಯಿತು. 80% ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೂ, ರೈತರನ್ನು ಸಂಘಟಿಸಲು ಕಾಂಗ್ರೆಸ್ಸಿಗೆ ಯಾವುದೇ ಕಾರ್ಯಕ್ರಮ ವಿರಲಿಲ್ಲ. ಹೊಸ ಸಾಮಾಜಿಕ ಶಕ್ತಿಯಾಗಿ ಹೊರಹೊಮ್ಮಲು ಪ್ರಾರಂಭಿಸಿದ ಕಾರ್ಮಿಕ ವರ್ಗವು ಸಹ: ಕಾಂಗ್ರೆಸ್ಸಿನ ಗಮನವನ್ನು ಸೆಳೆಯಲಿಲ್ಲ.


ಬಂಡವಾಳಶಾಹಿ ಮತ್ತು ಅದರ ಸಮಾಧಿ-ತೊಡುವವರು ಏಕಕಾಲದಲ್ಲಿ ಜನಿಸುತ್ತಾರೆ- ಮತ್ತು ಬಂಡವಾಳಶಾಹಿಯ ಸಮಾಧಿಯನ್ನು ತೊಡುವುದು ಕಾರ್ಮಿಕ ವರ್ಗವಾಗಿದೆ ಎಂದು ಮಾರ್ಕ್ಸ್ ಹೇಳಿದ್ದಾರೆ. ಭಾರತದಲ್ಲೂ ಇತಿಹಾಸದ ಚೈತನ್ಯವು ಕಾರ್ಮಿಕ ವರ್ಗವನ್ನು ಹೋರಾಟದ ರಂಗದಲ್ಲಿ ಸ್ವತಃ ಒಂದು ವರ್ಗವಾಗಿ ನಿಲ್ಲುವಂತೆ ಪ್ರೇರೇಪಿಸಿತು. ಹೀಗಾದರೂ, ವಸಾಹತುಶಾಹಿ ಭಾರತದ ಒಂದು ಐತಿಹಾಸಿಕ ಅನಿವಾರ್ಯತೆಯೆಂದರೆ, ಬಡ ಗ್ರಾಮೀಣ ಜನರಿಂದ ಜನಿಸಿದ, ದೌರ್ಬಲ್ಯಗಳೊಂದಿಗೆ ಹುಟ್ಟಿದ- ಮತ್ತು ಆರಂಭದಲ್ಲಿ ಅಲ್ಪ ಸಂಖ್ಯೆಯಲ್ಲಿದ್ದ ಮತ್ತು ಅಮಾನವೀಯ ಜೀವನ ಮತ್ತು ಕೆಲಸದ ಪರಿಸ್ಥಿತಿಗಳ ಒತ್ತಡಕ್ಕೊಳಗಾದ ಕಾರ್ಮಿಕ ವರ್ಗ, ವರ್ಗ ಪ್ರಜ್ಞೆಯನ್ನು ಪಡೆಯಲು ಮತ್ತು ಬಲಗೊಳ್ಳಲು ಸಾಕಷ್ಟು ಸಮಯ ತೆಗೆದುಕೊಂಡಿತು. ಇದು ರಾಷ್ಟ್ರೀಯ ಚಳವಳಿಯ ಆರಂಭಿಕ ಹಂತದಲ್ಲಿ ಕಾರ್ಮಿಕ ವರ್ಗವು ಬಂಡವಳಿಗ ವರ್ಗದ ಹಿಂದೆ ಉಳಿಯಲು ಕಾರಣವಾಯಿತು, ಇದರ ದೂರಗಾಮಿ ಪರಿಣಾಮವು ನಂತರದ ದಿನಗಳಲ್ಲಿ ಹೆಚ್ಚು ಎದ್ದುಕಂಡಿತು.

1857 ರ ಮಹಾ ಬಂಡಾಯದ ನಂತರ, ದೇಶವು ರೈತರ ಬಂಡಾಯಗಳ ಸರಣಿಗಳ ಮೂಲಕ ಹಾದುಹೋಯಿತು. ಇಂಡಿಗೊ ತೋಟದ ರೈತರ ದಂಗೆಗಳು, ಸಂತಾಲರು, ಮಹಾರಾಷ್ಟ್ರದ ರೈತರು ಮತ್ತು ಮಲಬಾರ್ ಕರಾವಳಿಯ ಮಾಪಿಳ್ಳೆಗಳ ಹೋರಾಟಗಳು ಮಹತ್ವದ್ದಾಗಿದ್ದವು. ಈ ದಂಗೆಗಳು ಚದುರಿದಂತವು ಮತ್ತು ಪರಸ್ಪರ ಸಂಪರ್ಕವಿಲ್ಲದಿದ್ದರೂ, ಭಾರತೀಯ ಜನರನ್ನು ಗಣನೀಯ ಪ್ರಮಾಣದಲ್ಲಿ ತಟ್ಟಿದವು. ಸಮಕಾಲೀನ ಸಾಹಿತ್ಯದಲ್ಲೂ ಈ ದಂಗೆಗಳ ಮುದ್ರೆಯನ್ನು ಕಾಣಬಹುದು.

ಆದಾಗ್ಯೂ, ಈ ಪ್ರಾಥಮಿಕ ಹೋರಾಟಗಳ ಲಕ್ಷಣಗಳು ಸಂಪೂರ್ಣವಾಗಿ ಚದುರಿಹೋದಂತೆ ಮತ್ತು ಅಸಂಘಟಿತ ಸ್ವರೂಪದಾಗಿತ್ತು. ಈ ಪ್ರಾಥಮಿಕ ಹಂತದಲ್ಲಿ ಕಾರ್ಮಿಕರು ನಿಜವಾದ ಅರ್ಥದಲ್ಲಿ ಯಾವುದೇ ಕಾರ್ಮಿಕ ಸಂಘವನ್ನು ಹೊಂದಿರಲಿಲ್ಲ. ತರುವಾಯ, ಹೆಚ್ಚುತ್ತಿರುವ ಅನುಭವಗಳು ಮತ್ತು ಕಾರ್ಮಿಕರ ಸಾಮೂಹಿಕ ಹೋರಾಟದ ಪ್ರಗತಿಯೊಂದಿಗೆ, ಕಾರ್ಮಿಕ ಸಂಘಗಳು ಬೆಳೆಯಲು ಪ್ರಾರಂಭಿಸಿದವು. ಆದರೆ ಅಲ್ಲಿಯವರೆಗೆ ಕಾರ್ಮಿಕರ ಪ್ರಜ್ಞೆ ಸಂಪೂರ್ಣವಾಗಿ ಪ್ರಾಥಮಿಕ ಹಂತದಾಗಿತ್ತು. ಆದಾಗ್ಯೂ, 1914–18 ರಲ್ಲಿ ನಡೆದ ಮೊದಲ ಸಾಮ್ರಾಜ್ಯಶಾಹಿ ಯುದ್ಧದ ನಂತರದ ವಿಶ್ವವ್ಯಾಪಿ ಜಾಗೃತಿ, ರಷ್ಯಾದ ಸಮಾಜವಾದಿ ಕ್ರಾಂತಿಯ ದೊಡ್ಡ ಪರಿಣಾಮ, ವಿಶೇಷವಾಗಿ ಯುರೋಪಿನಲ್ಲಿ ವಿನಾಶಕಾರಿ ಯುದ್ಧದ ನಂತರ, ಶ್ರಮಜೀವಿಗಳ ಮುಷ್ಕರ-ಹೋರಾಟಗಳ ಅಲೆ ಅನುಕೂಲಕರ ಪರಿಸ್ಥಿತಿಯನ್ನು ಸೃಷ್ಟಿಸಿತು ಮತ್ತು ಭಾರತದಲ್ಲಿ ಪ್ರಜ್ಞಾವಂತ ಮತ್ತು ಸಂಘಟಿತ ಟ್ರೇಡ್ ಯೂನಿಯನ್ ಆಂದೋಲನಕ್ಕೆ ನಾಂದಿ ಹಾಡಿತು. ಅಂದಿನಿಂದ, ಭಾರತದ ಕಾರ್ಮಿಕ-ವರ್ಗದ ಚಳುವಳಿ ಸಂಘಟಿತ ಶಕ್ತಿ ಮತ್ತು ಪ್ರಜ್ಞೆಯನ್ನು ಸ್ಥಿರವಾಗಿ ಗಳಿಸುತ್ತಿದೆ. 1947 ರಲ್ಲಿ ರಾಜಕೀಯ ಸ್ವಾತಂತ್ರ್ಯದ ಸಾಧನೆಯೊಂದಿಗೆ, ಭಾರತದ ಕಾರ್ಮಿಕ-ವರ್ಗದ ಚಳುವಳಿ ತನ್ನ ಮುಂದೆ ಹೊಸ ಮತ್ತು ಉನ್ನತ ದೃಷ್ಟಿಯನ್ನು ನಿಶ್ಚಯಿಸಿಕೊಂಡು, ಸಂಪೂರ್ಣವಾಗಿ ವಿಭಿನ್ನ ಹಂತವನ್ನು ಪ್ರಾರಂಭಿಸಿತು.

ಈ ವಿಕಾಸದ ಹಾದಿಯನ್ನು ಅನುಸರಿಸಿ, ಭಾರತದ ಕಾರ್ಮಿಕ-ವರ್ಗದ ಚಳುವಳಿಯನ್ನು ನಾಲ್ಕು ವಿಶಾಲ ಹಂತಗಳಾಗಿ ವಿಂಗಡಿಸಬಹುದು– ಮೊದಲ ಹಂತವು 1850 ರಿಂದ 1900 ರವರೆಗೆ ಕಾರ್ಮಿಕ-ವರ್ಗದ ಚಳವಳಿಯ ಪ್ರಾರಂಭದ ಅವಧಿ; ಎರಡನೆಯದು 1901 ರಿಂದ 1914 ಕಾರ್ಮಿಕ ಸಂಘಗಳ ರಚನಾತ್ಮಕ ಪ್ರಕ್ರಿಯೆಗೆ ಸಾಕ್ಷಿಯಾದ ಅವಧಿ ಮತ್ತು ಮೂರನೆಯದು 1915 ರಿಂದ 1947 ರವರೆಗೆ ಪ್ರಜ್ಞೆಯನ್ನು ಅಭಿವೃದ್ಧಿಪಡಿಸುವ, ಮತ್ತು ಸಂಘಟಿತ ಟ್ರೇಡ್ ಯೂನಯನ್ ಮತ್ತು ಕಾರ್ಮಿಕ-ವರ್ಗದ ರಾಜಕೀಯ ಆಂದೋಲನದ ಹಂತವಾಗಿದೆ. ಇಲ್ಲಿಯವರೆಗೆ, ಅದರ ಆರ್ಥಿಕ ಹೋರಾಟಗಳ ಜೊತೆಗೆ ರಾಷ್ಟ್ರೀಯ ವಿಮೋಚನೆಯ ರಾಜಕೀಯ ದೃಷ್ಟಿಕೋನದೊಂದಿಗೆ ಮುಂದೆ ಸಾಗಿದೆ. ನಾಲ್ಕನೆಯ ಮತ್ತು ಪ್ರಸ್ತುತ ಸ್ವಾತಂತ್ರ್ಯೋತ್ತರ ಹಂತವು ಸಂಪೂರ್ಣವಾಗಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ, ಉನ್ನತ ರಾಜಕೀಯ ದೃಷ್ಟಿಕೋನವನ್ನು ಹೊಂದಿರುವ ಕಾರ್ಮಿಕ ವರ್ಗದ ಬಹುಪಾಲು ಸಂಘಟಿತ ಆರ್ಥಿಕ ಮತ್ತು ರಾಜಕೀಯ ಹೋರಾಟದಿಂದ ನಿರೂಪಿಸಲ್ಪಟ್ಟಿದೆ.


ದಾದಾಭಾಯಿ ನೌರೋಜಿ


ಶಶಿಪಾದ ಬ್ಯಾನರ್ಜಿ


ಲೋಖಂಡೆ

ಹೊಸದಾಗಿ ಜನಿಸಿದ ಭಾರತದ ಕಾರ್ಮಿಕ ವರ್ಗದ ಚಿಂತಾಜನಕ ಪರಿಸ್ಥಿತಿಯು ಕೆಲವು ವಿದ್ಯಾವಂತ ಲೋಕಚಿಂತಕರು ಮತ್ತು ಸಾಮಾಜಿಕ ಕಾರ್ಯಕರ್ತರ ಗಮನವನ್ನು ಸೆಳೆಯಿತು. ಅವರಲ್ಲಿ ಯಾರೊಬ್ಬರೂ ಹೊರಾಟಗಾರರಾಗಲಿ ಅಥವಾ ಅದರ ಬಗ್ಗೆ ಯಾವುದೇ ಪರಿಕಲ್ಪನೆಯನ್ನು ಹೊಂದಿದವರಾಗಲಿ ಆಗಿರಲಿಲ್ಲ. ಆದರೆ ಸಮಾಜ ಸೇವೆಯ ಮನೋಭಾವ ಮತ್ತು ಸಹಾನುಭೂತಿಯ ಭಾವದಿಂದ ಅವರು ಸರ್ಕಾರ ಮತ್ತು ಸಾರ್ವಜನಿಕರ ಮುಂದೆ ಕಾರ್ಮಿಕರ ವಿಷಾದಕರ ಅವಸ್ಥೆಯನ್ನು ನಿವೇದಿಸಲು ಪ್ರಯತ್ನಿಸಿದರು. ಅದೇ ಸಮಯದಲ್ಲಿ ಅವರು ಕಾರ್ಮಿಕರ ಸಮಸ್ಯೆಗಳು ಮತ್ತು ಕಷ್ಟಕರ ಪರಿಸ್ಥಿತಿಗಳನ್ನು ಪ್ರಚಾರ ಮಾಡಲು ಒಂದಲ್ಲ ಒಂದು ಪತ್ರಿಕೆಗಳನ್ನು ಪ್ರಕಟ ಮಾಡಿದರು. ಅನಕ್ಷರಸ್ಥ ಮತ್ತು ಅಜ್ಞಾನಿ ಕಾರ್ಮಿಕರಿಗೆ ಪ್ರಾಥಮಿಕ ಶಿಕ್ಷಣವನ್ನು ನೀಡಲು, ಅವರು ಕೆಲವು ರಾತ್ರಿ ಶಾಲೆಗಳನ್ನು ಮತ್ತು ಅಂತಹ ಸಂಸ್ಥೆಗಳನ್ನು ಸಹ ನಡೆಸಿದರು. ಇವೆಲ್ಲವೂ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹುಟ್ಟುವ ಮೊದಲೇ ಪ್ರಾರಂಭವಾಗಿದ್ದವು.

ಬಂಗಾಳದಲ್ಲಿ ವಿದ್ಯಾವಂತ ಸಮುದಾಯದ ಒಂದು ವಿಭಾಗವು ಈ ಉದ್ದೇಶಕ್ಕಾಗಿ ಮುಂದೆ ಬಂದಿತು. ಅವರಲ್ಲಿ ಅಗ್ರಗಣ್ಯರಾಗಿದ್ದವರು ಬ್ರಹ್ಮೊ ಸಮಾಜದ ಸದಸ್ಯರಾದ ಶಶಿಪಾದ ಬ್ಯಾನರ್ಜಿ, 1874 ರಲ್ಲಿ ಕಲ್ಕತ್ತಾದ ಬಳಿಯ ಬಾರಾನಗರದಿಂದ 'ಭಾರತ್ ಶ್ರಮಜೀಬಿ' ಎಂಬ ಬಂಗಾಳಿ ಮಾಸಿಕವನ್ನು ಪ್ರಕಟಿಸಿದರು. ಲಭ್ಯವಿರುವ ಮಾಹಿತಿಯ ಪ್ರಕಾರ, ಇದು ಕಾರ್ಮಿಕರ ಸಮಸ್ಯೆಗಳು ಮತ್ತು ಹಿತಾಸಕ್ತಿಗಳಿಗೆ ಮೀಸಲಾಗಿದ್ದ ಭಾರತದ ಮೊದಲ ಪ್ರಕಟಿತ ಜರ್ನಲ್ ಆಗಿತ್ತು. ಬಾಂಬೆಯ ನಾರಾಯಣ್ ಮೇಘಾಜಿ ಲೋಖಂಡೆ ಅದೇ ಉದ್ದೇಶದಿಂದ 'ದೀನಬಂಧು' ಎಂಬ ಹೆಸರಿನ ಮತ್ತೊಂದು ಪತ್ರಿಕೆಯನ್ನು ಪ್ರಕಟಿಸಿದರು, ಆದರೆ ಅದು 1898 ರಲ್ಲಿ ಹೊರಬಂದಿತು. ಪತ್ರಿಕೆಯ ಪ್ರಕಟಣೆಯನ್ನು ಪ್ರಾರಂಭಿಸುವ ಮೊದಲು, ಶಶಿಪಾದ ಬ್ಯಾನರ್ಜಿ 1870 ರಲ್ಲಿ 'ವರ್ಕಿಂಗ್ ಮೆನ್ಸ್ ಕ್ಲಬ್' ಅನ್ನು ಸ್ಥಾಪಿಸಿದರು, ಇದು ಬಹುಶಃ ಭಾರತದಲ್ಲಿ ಈ ರೀತಿಯ ಮೊದಲನೆಯದು.

1878 ರಲ್ಲಿ ಕಲ್ಕತ್ತಾದ ಬ್ರಹ್ಮೋ-ಸಮಾಜದವರು ಕಾರ್ಮಿಕರು ಮತ್ತು ಇತರ ಹಿಂದುಳಿದ ಸಮುದಾಯದ ಪುರುಷರಲ್ಲಿ ಧಾರ್ಮಿಕ ನೈತಿಕತೆ ಇತ್ಯಾದಿಗಳನ್ನು ಬೋಧಿಸುವ ಉದ್ದೇಶದಿಂದ 'ವರ್ಕಿಂಗ್ ಮೆನ್ಸ್ ಮಿಷನ್' ಅನ್ನು ಸ್ಥಾಪಿಸಿದರು. ಈ ಸಾಮಾಜಿಕ-ಧಾರ್ಮಿಕ ಮನೋಭಾವದಿಂದ ಪ್ರಭಾವಿತರಾದ ಶಶಿಪಾದ ಬ್ಯಾನರ್ಜಿ ಕಲ್ಕತ್ತಾದ ಸುತ್ತಮುತ್ತಲಿನ ಕೈಗಾರಿಕಾ ಕಾರ್ಮಿಕರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹರಡಲು 1880 ರಲ್ಲಿ 'ಬಾರಾನಗರ್ ಸಂಸ್ಥೆ' ಸ್ಥಾಪಿಸಲು ಮುಂದಾದರು. ನಂತರ 1884 ರಲ್ಲಿ ಬ್ರಹ್ಮ ಸಮಾಜವು ಬಾರಾನಗರದ ಸೆಣಬಿನ ಗಿರಣಿ ಕಾರ್ಮಿಕರಿಗಾಗಿ ರಾತ್ರಿ ಶಾಲೆ ಮತ್ತು ಉಳಿತಾಯ ಬ್ಯಾಂಕ್ ಅನ್ನು ಪ್ರಾರಂಭಿಸಿತು ಮತ್ತು ಬ್ಯಾನರ್ಜಿಯವರಿಗೆ ಈ ಸಂಸ್ಥೆಗಳ ಉಸ್ತುವಾರಿ ವಹಿಸಲಾಯಿತು. 1872 ರಲ್ಲಿ, ಬಂಗಾಳದ ಬ್ರಹ್ಮ ಸಮಾಜದ ಇನ್ನೊಬ್ಬ ಪ್ರಚಾರಕ ಪಿ.ಸಿ ಮಜುಂದಾರ್, ಕಾರ್ಮಿಕರಲ್ಲಿ ಶಿಕ್ಷಣವನ್ನು ಹರಡಲು ಬಾಂಬೆಯ ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ ಎಂಟು ರಾತ್ರಿ ಶಾಲೆಗಳನ್ನು ಸ್ಥಾಪಿಸಿದರು.

ಶಶಿಪಾದ ಬ್ಯಾನರ್ಜಿ 1871 ರಲ್ಲಿ ಇಂಗ್ಲೆಂಡ್‌ಗೆ ಭೇಟಿ ನೀಡಿದರು, ಅಲ್ಲಿ ಅವರು ವಿವಿಧ ಸಂದರ್ಭಗಳಲ್ಲಿ ಭಾರತದ ಶ್ರಮಜೀವಿಗಳ ದುಃಸ್ಥಿತಿಯ ಬಗ್ಗೆ ಮಾತನಾಡಿದರು.

ಮಹಾರಾಷ್ಟ್ರದಲ್ಲಿಯೂ, ಹಲವಾರು ಲೋಕೋಪಕಾರಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಕಾರ್ಮಿಕರ ಹಿತಾಸಕ್ತಿಗಳನ್ನು ಪೂರೈಸಲು ಮುಂದೆ ಬಂದರು. 1878 ರ ಸುಮಾರಿಗೆ ಬಾಂಬೆಯ ಹತ್ತಿ-ಗಿರಣಿ ಕೆಲಸಗಾರರ ಪರಿಸ್ಥಿತಿಗಳನ್ನು ಸುಧಾರಿಸುವಲ್ಲಿ ಸೊರಬ್ಜಿ ಶಾಪುರ್ಜಿ ಬೆಂಗಾಲೀ ಮಾಡಿದ ಪ್ರಯತ್ನಗಳನ್ನು ನೆನಪಿಸಬೇಕು. ಜವಳಿ ಕಾರ್ಮಿಕರ ಸಮಸ್ಯೆಗಳನ್ನು ಸಕ್ರಿಯವಾಗಿ ಎತ್ತಿಕೊಳ್ಳುವಲ್ಲಿ ಬಾಂಬೆಯ ನಾರಾಯಣ್ ಮೇಘಾಜಿ ಲೋಖಂಡೆ ಅವರ ಪ್ರಯತ್ನ ವಿಶೇಷವಾಗಿ ಗಮನಾರ್ಹವಾಗಿದೆ. 1884 ರಲ್ಲಿ ಅವರು ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಮನವಿ ಪತ್ರವನ್ನು ಸಿದ್ಧಪಡಿಸಲು ಬಾಂಬೆಯ ಗಿರಣಿ ಕಾರ್ಮಿಕರ ಸಭೆ ನಡೆಸಿದರು. 1890 ರಲ್ಲಿ ಅವರು 'ಬಾಂಬೆ ಮಿಲ್-ಹ್ಯಾಂಡ್ಸ್ ಅಸೋಸಿಯೇಷನ್' ಅನ್ನು ಸ್ಥಾಪಿಸಿದರು ಮತ್ತು ಅದರ ಅಧ್ಯಕ್ಷರಾದರು. ಕೆಲವರು 'ಬಾಂಬೆ ಮಿಲ್-ಹ್ಯಾಂಡ್ಸ್ ಅಸೋಸಿಯೇಶನ್' ಅನ್ನು ಭಾರತದ ಮೊದಲ ಟ್ರೇಡ್ ಯೂನಿಯನ್ ಮತ್ತು ಲೋಖಂಡೆಯನ್ನು ಮೊದಲ ಟ್ರೇಡ್ ಯೂನಿಯನ್ ಸಂಘಟಕರೆಂದು ತಪ್ಪಾಗಿ ಗುರುತಿಸಿದ್ದಾರೆ. ಇದು ಯಾವುದೇ ಟ್ರೇಡ್ ಯೂನಿಯನ್ ಸಂಘಟನೆಯ ಗುಣಲಕ್ಷಣಗಳನ್ನು ಹೊಂದಿರಲಿಲ್ಲ. ಇದಕ್ಕೆ ಯಾವುದೇ ಸದಸ್ಯತ್ವ ಮತ್ತು ನಿಧಿ ಅಥವಾ ಯಾವುದೇ ಸಂವಿಧಾನ ಇರಲಿಲ್ಲ. ಮತ್ತು ಲೋಖಂಡೆ ಕಾರ್ಮಿಕರ ಸೇವೆಗೆ ಯಾವುದೇ ಟ್ರೇಡ್ ಯೂನಿಯನ್ ಪ್ರಜ್ಞೆಯೊಂದಿಗೆ ಅಲ್ಲ, ಆದರೆ ಸಾಮಾಜಿಕ ಸೇವೆಯ ಮನೋಭಾವ ಮತ್ತು ಬಹಳಷ್ಟು ಕಾರ್ಮಿಕರ ಬಗ್ಗೆ ಸಹಾನುಭೂತಿಯಿಂದ ಮುಂದೆ ಬಂದರು. ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸಕ್ರಿಯವಾಗಿ ಶ್ರದ್ಧೆ ಹೊಂದಿದ್ದರೂ, ಆ ಅವಧಿಯ ಐತಿಹಾಸಿಕ ಮಿತಿಗಳಿಂದ ಪಾರಾಗಲು ಅವರಿಗೆ ಸಾಧ್ಯವಾಗಲಿಲ್ಲ. ಅವರ ಹೆಸರು ಇತಿಹಾಸದಲ್ಲಿ ಅಗ್ರಗಣ್ಯ ಲೋಕೋಪಕಾರಿಗಳು ಮತ್ತು ಕಾರ್ಮಿಕ ಕಲ್ಯಾಣವನ್ನು ಉತ್ತೇಜಿಸುವವರಲ್ಲಿ ಒಬ್ಬರಾಗಿ ಹೊರಹೊಮ್ಮುತ್ತದೆ ಬದಲಾಗಿ ಟ್ರೇಡ್ ಯೂನಿಯನ್ ನಾಯಕರಾಗಿ ಅಲ್ಲ.

ಆದಾಗ್ಯೂ, 1884 ರ ಸೆಪ್ಟೆಂಬರ್ 23 ಮತ್ತು 26 ರಂದು ಲೋಖಂಡೆ ಕರೆದ ಸಭೆಯಲ್ಲಿ, ಈ ಕೆಳಗಿನ ಬೇಡಿಕೆಗಳನ್ನು ಒಳಗೊಂಡ ಬೇಡಿಕೆ ಪತ್ರವನ್ನು ಸಿದ್ಧಪಡಿಸಲಾಯಿತು.

1. ಎಲ್ಲಾ ಗಿರಣಿ-ಕೆಲಸಗಾರರಿಗೆ ಪ್ರತಿ ಭಾನುವಾರ ಒಂದು ಸಂಪೂರ್ಣ ರಜಾ ದಿನವನ್ನು ನೀಡಬೇಕು.
2. ಮಧ್ಯಾಹ್ನ ಅವರಿಗೆ ಒಂದು ಗಂಟೆಯ ಬಿಡುವು ನೀಡಬೇಕು.
3. ಗಿರಣಿಗಳಲ್ಲಿ ಕೆಲಸ ಬೆಳಿಗ್ಗೆ 6–30 ಕ್ಕೆ ಪ್ರಾರಂಭವಾಗಿ ಸೂರ್ಯಾಸ್ತದ ಒಳಗೆ ಮುಗಿಯಬೇಕು.
4. ವೇತನವನ್ನು ಮುಂದಿನ ತಿಂಗಳ 15 ರೊಳಗೆ ಪಾವತಿಸಬೇಕು.
5. ಗಿರಣಿಯಲ್ಲಿ ಕೆಲಸ ಮಾಡುವಾಗ ಗಂಭೀರವಾದ ಗಾಯವಾದ ಕೆಲಸಗಾರನಿಗೆ, ಅವನು ಚೇತರಿಸಿಕೊಳ್ಳುವವರೆಗೂ ವಿಶ್ರಾಂತಿ ಮತ್ತು ಪೂರ್ಣ-ವೇತನವನ್ನು ನೀಡಬೇಕು ಮತ್ತು ಅವನು ಜೀವಿತಾವಧಿಯಲ್ಲಿ ಕೆಲಸಮಾಡಲು ಅಸಾಧ್ಯವಾದರೆ, ಅವನಿಗೆ ಜೀವನೋಪಾಯಕ್ಕಾಗಿ ಸೂಕ್ತವಾದ ಪಿಂಚಣಿ ನೀಡಬೇಕು.

ಪುಟ 14 ನೋಡಿ

ಮೂರು ಕೃಷಿ ಕಾಯ್ದೆಗಳು:ಬಿಜೆಪಿ ವರ್ಗದಾಳಿ

ಪುಟ 8 ರಿಂದ

ಬೆಂಬಲ ಮತ್ತು ಸೌಹಾರ್ದ ವ್ಯಕ್ತಪಡಿಸಿವೆ ಹಾಗೂ ಸರಕಾರ ಈ ಬೇಡಿಕೆಗಳನ್ನು ಸ್ವೀಕರಿಸಿ, ಭಾರತೀಯ ಜನತೆಗೆ ಸಮೃದ್ಧಿ ಮತ್ತು ಕಲ್ಯಾಣವನ್ನು ಒದಗಿಸುವ ಸುಧಾರಣೆಗಳನ್ನು ತರಬೇಕೇ ಹೊರತು, ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ಸೂಪರ್ ಲಾಭಗಳನ್ನು ಕೊಡಿಸುವ ಸುಧಾರಣೆಗಳನ್ನಲ್ಲ ಎಂದು ಹೇಳುತ್ತಿವೆ.

ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಲಾಗುತ್ತಿದೆಯೇ?

ಪ್ರಧಾನಿ ಮೋದಿ ತಮ್ಮ ಸರಕಾರ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಕುರಿತ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿ ಮಾಡುತ್ತ ಬಂದಿರುವುದಾಗಿ ಹೇಳಿಕೊಳ್ಳುತ್ತಾರೆ. ಆದರೆ ಸತ್ಯ ಸಂಗತಿಯೆಂದರೆ, ಸ್ವಾಮಿನಾಥನ್ ಆಯೋಗ ಸಿ2+50% ಸೂತ್ರವನ್ನು ಶಿಫಾರಸು ಮಾಡಿದ್ದರೆ, ಸರಕಾರ ಹೆಚ್ಚೆಂದರೆ ಎ2+50% ಸೂತ್ರದ ಪ್ರಕಾರ ಕೊಡುತ್ತಿದೆಯಷ್ಟೇ. ಇವೆರಡರ ನಡುವೆ ಗಮನಾರ್ಹ ವ್ಯತ್ಯಾಸವಿದೆ. ಎ2 ವಾಸ್ತವವಾಗಿ ಆಗಿರುವ ಖರ್ಚು, ಸಿ2 ನಲ್ಲಿ ಸ್ವಂತ ಜಮೀನಿನ ಬಾಡಿಗೆ ಮೌಲ್ಯ ಮತ್ತು ಸ್ವಂತ ನಗದಿತ ಬಂಡವಾಳ ಆಸ್ತಿಗಳ ಮೌಲ್ಯದ ಮೇಲೆ ಬಡ್ಡಿಯೂ ಸೇರಿದೆ. ಹೀಗೆ ಕೇಂದ್ರ ಸರಕಾರ ಸ್ವಾಮಿನಾಥನ್ ಆಯೋಗದ ಬೇರೆಲ್ಲ ಸಲಹೆಗಳನ್ನು ಉಪೇಕ್ಷಿಸಿದೆಯಷ್ಟೇ ಅಲ್ಲ, ಎಂಎಸ್‌ಪಿ ಕುರಿತ ಶಿಫಾರಸಿಗೂ ನಕಾರ ತೋರಿದೆ.

ಸಿಪಿಐ(ಎಂ)ನ 2019ರ ಚುನಾವಣಾ ಪ್ರಣಾಳಿಕೆಯ 'ಕೃಷಿ ಸುಧಾರಣೆಗಳು' ವಿಭಾಗದ ಮೊದಲನೆಯ ಅಂಶವೆಂದರೆ ಎಲ್ಲ ರೈತರಿಗೆ ಕನಿಷ್ಟ ಬೆಂಬಲ ಬೆಲೆಯಲ್ಲಿ ಮಾರುವ ಕಾನೂನಾತ್ಮಕ ಹಕ್ಕು ಇರಬೇಕೆಂಬ ಬೇಡಿಕೆ. ಕನಿಷ್ಟ 2017ರಿಂದ, ಇದನ್ನು ಸಿಪಿಐ(ಎಂ) ಸದಸ್ಯರು ಸಂಸತ್ತಿನಲ್ಲಿ ಎತ್ತುತ್ತಲೇ ಬಂದಿದ್ದಾರೆ. ಆದರೆ ಇದುವರೆಗೂ ಕೇಂದ್ರ ಸರಕಾರ ಇಂತಹ ಒಂದು ಕಾಯ್ದೆಯನ್ನು ತಂದಿಲ್ಲ. ಅಲ್ಲದೆ, ಎಂಎಸ್‌ಪಿ ಎಲ್ಲ ಬೆಳೆಗಳನ್ನು ಒಳಗೊಂಡಿರಬೇಕು. ಈಗ, ಅದು 6ಶೇ. ರೈತರಿಗೆ ಮಾತ್ರ ಸಿಗುವಂತಿದೆ. ಇದಲ್ಲದೆ, ಒಂದು ದಕ್ಷ ಖರೀದಿ ವ್ಯವಸ್ಥೆ ಇಲ್ಲದಿದ್ದರೆ ಎಂಎಸ್‌ಪಿ ಅರ್ಥಹೀನವಾಗುತ್ತದೆ. ಆದ್ದರಿಂದ ಸಾರ್ವಜನಿಕ ಮತ್ತು ಖಾಸಗಿ, ಈ ಎರಡೂ ರೀತಿಗಳ ಖರೀದಿ ವ್ಯವಸ್ಥೆಯನ್ನು ದೇಶಾದ್ಯಂತ ಸಾರ್ವತ್ರಿಕಗೊಳಿಸಬೇಕು.

ವಿಪಕ್ಷಗಳ ರಾಜ್ಯ ಸರಕಾರಗಳ ಮೇಲೆ ಗುರಿ: ಪ್ರಧಾನ ಮೋದಿ ವಿಪಕ್ಷಗಳ ರಾಜ್ಯ ಸರಕಾರಗಳ ಮೇಲೆ, ನಿರ್ದಿಷ್ಟವಾಗಿ ಕೇರಳದ ಎಲ್‌ಡಿಎಫ್ ಸರಕಾರದ ಮೇಲೆ, ಸಂಪೂರ್ಣವಾಗಿ ತಪ್ಪು ಮಾಹಿತಿಯ ದಾಳಿಗಳನ್ನು ಮಾಡುತ್ತಿದ್ದಾರೆ, ಅವು ರೈತರ ಹಿತಗಳನ್ನು ನೋಡಿಕೊಳ್ಳುತ್ತಿಲ್ಲ, ಆದರೂ ಕೇಂದ್ರೀಯ ಕಾಯ್ದೆಗಳನ್ನು ವಿರೋಧಿಸುತ್ತಿವೆ ಎಂದು ಹೇಳುತ್ತಿದ್ದಾರೆ. ಕೇರಳ ಕುರಿತಂತೆ ಪ್ರಧಾನಿಗಳ ಸುಳ್ಳುಗಳನ್ನು, ಅಖಿಲ ಭಾರತ ಕಿಸಾನ್ ಸಭಾ ಬರೇ ಅಪಪ್ರಚಾರ ಎಂಬುದನ್ನು ಬಯಲಿಗೆ ತಂದಿದೆ. ಕೇರಳ ಭತ್ತ, ತರಕಾರಿಗಳು, ಬೇಳೆಕಾಳುಗಳು, ಬಾಳೆ ಮುಂತಾದ ಬೆಳೆಗಳಿಗೆ ಉತ್ತಮ ಸಬ್ಸಿಡಿಗಳನ್ನು ಒದಗಿಸುತ್ತಿದೆ. ಕೇರಳದ 82ಶೇ. ಸಾಗುವಳಿ ಪ್ರದೇಶ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತದ್ದು. ಈ ಬೆಳೆಗಳ ಬೆಲೆಗಳನ್ನು ಅದಕ್ಕೆ ಸಂಬಂಧಪಟ್ಟ ಸರಕು ಮಂಡಳಿಗಳು ರಾಜ್ಯ ಸರಕಾರದ ಅಡಿಯಲ್ಲಿ ಹರಾಜು ವ್ಯವಸ್ಥೆಯೊಂದಿಗೆ ಖಾತ್ರಿಪಡಿಸುತ್ತವೆ.

ಗಮನ ತಿರುಗಿಸಲು ಕೋಮುವಾದಿ ಧ್ರುವೀಕರಣ: ಈ ಬೃಹತ್ ಶಾಂತಿಯುತ ಪ್ರತಿಭಟನೆಗಳಿಂದ ದೇಶದ ಗಮನವನ್ನು ಬೇರೆಡೆಗೆ ತಿರುಗಿಸಲು, ಬಿಜೆಪಿ, ತನ್ನ ರಾಜ್ಯ ಸರಕಾರಗಳ ಮೂಲಕ ಕೋಮುವಾದಿ ಧ್ರುವೀಕರಣವನ್ನು ತೀವ್ರ ರೀತಿಯಲ್ಲಿ ತೀಕ್ಷ್ಣಗೊಳಿಸುತ್ತಿದೆ. ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ಸರಕಾರಗಳು ತಂದಿರುವ 'ಲವ್ ಜಿಹಾದ್' ಕಾಯ್ದೆಗಳು ಮತ್ತು 'ಗೋರಕ್ಷಣೆ' ಕಾಯ್ದೆಗಳನ್ನು ಕಿರುಕುಳ ಕೊಡಲು, ಬೆದರಿಸಲು ಮತ್ತು ಕೋಮುವಾದಿ ಭಾವೋದ್ರೇಕಗಳನ್ನು ಬಡಿದೆಬ್ಬಿಸಲು ಬಳಸಲಾಗುತ್ತಿದೆ. ಮಧ್ಯಪ್ರದೇಶದಲ್ಲಿ , ಉಜ್ಜೈನ್, ಇಂದೋರ್ ಮತ್ತಿತರ ಹಲವು ಸ್ಥಳಗಳಲ್ಲಿ ಕೋಮುವಾದಿ ಸೆಳೆತಗಳನ್ನು ಉದ್ರೇಕಿಸಲಾಗುತ್ತಿದೆ. ಇವು ದೇಶದಲ್ಲಿ ವಿನಾಶಕಾರಿಯಾದ ಅಸ್ಥಿರಕಾರೀ ಪರಿಣಾಮಗಳನ್ನು ಉಂಟು ಮಾಡುತ್ತವೆ.

ನವ-ಉದಾರವಾದದ ಉಗ್ರ ಅನುಸರಣೆ: ಜಾಗತಿಕ ಅರ್ಥವ್ಯವಸ್ಥೆ ಹಿಂಜರಿತದ ಸ್ಥಿತಿಯಲ್ಲಿ ಮುಂದುವರೆಯುತ್ತಿದ್ದು ನವ-ಉದಾರವಾದಿ ಸುಧಾರಣೆಯ ದಿಕ್ಕು ಈ ಬಿಕ್ಕಟ್ಟನ್ನು ಮೀರಿ ನಿಲ್ಲಲು ಯಾವುದೇ ಪರಿಹಾರವನ್ನು ಕೊಡಲಾಗದಂತಹ ಸಂಪೂರ್ಣ ದಿವಾಳಿ ಸ್ಥಿತಿಯಲ್ಲಿದೆ ಎಂಬುದು ಬಯಲಾಗಿದೆ. ಇದರಿಂದಾಗಿ, ಬಂಡವಾಳಶಾಹಿಯ ಅಡಿಯಲ್ಲಿ ಗರಿಷ್ಟ ಲಾಭಕ್ಕಾಗಿ ಕೊಳ್ಳೆಹೊಡೆಯುವ ಪ್ರವೃತ್ತಿ ತೀವ್ರಗೊಳ್ಳುತ್ತದೆ. ಇಂತಹ ಕಾರ್ಪೊರೇಟ್‌ಗಳಿಗೆ ಗರಿಷ್ಟ ಲಾಭಗಳಿಕೆಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲು ಮೋದಿ ಸರಕಾರ ನವ-ಉದಾರವಾದಿ ಸುಧಾರಣೆಯ ದಿಕ್ಕಿನಲ್ಲಿ ಉಗ್ರ ರೀತಿಯಲ್ಲಿ ಸಾಗುತ್ತಿದೆ. ಇದಕ್ಕೆ ಆರ್ಥಿಕ ಚಟುವಟಿಕೆಯ ಹೊಸ-ಹೊಸ ಕ್ಷೇತ್ರಗಳನ್ನು ಮತ್ತು ಹೊಸ-ಹೊಸ ಮಾರುಕಟ್ಟೆಗಳನ್ನು ವಹಿಸಿಕೊಡಬೇಕಾಗುತ್ತದೆ. ಈ ಗುರಿಯನ್ನು ಸಾಧಿಸಲಿಕ್ಕಾಗಿಯೇ ಈ ಕೃಷಿ ಕಾಯ್ದೆಗಳ ಮೂಲಕ ಕೃಷಿಯ ಮೇಲೆ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ಈ ರೀತಿಯ ಸಂಪೂರ್ಣ ಹತೋಟಿಯನ್ನು ಕಲ್ಪಿಸಲಾಗುತ್ತಿದೆ.

ಹೀಗೆ ಬಿಜೆಪಿ ಕೇಂದ್ರ ಸರಕಾರ ಭಾರತದಲ್ಲಿ ಆಳುವ ವರ್ಗಗಳ ಕ್ರೋಡೀಕರಣದ ಪ್ರಧಾನ ದಲ್ಲಾಳಿಯಾಗಿ ಬಿಟ್ಟಿದೆ, ಅವರ ವರ್ಗ ಹಿತಗಳನ್ನು ಈಡೇರಿಸುವ ಸುಧಾರಣೆಗಳನ್ನು ಜಾರಿಗೊಳಿಸುತ್ತಿದೆ.

ವರ್ಗ ಇಂಗಿತಗಳು

ಜಾಗತಿಕ ಬಿಕ್ಕಟ್ಟಲ್ಲದೆ, ಭಾರತದ ಅರ್ಥವ್ಯವಸ್ಥೆ ನೋಟುರದ್ಧತಿಯಿಂದಾಗಿಯೂ ಮತ್ತು ಜಿಎಸ್‌ಟಿ ಜಾರಿಯಿಂದಾಗಿಯೂ ಅಧೋಗತಿಗೆ ಇಳಿಯಲಾರಂಭಿಸಿತ್ತು. ಇದರಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ಜಿಡಿಪಿ ಬೆಳವಣಿಗೆ ದರ ಸತತವಾಗಿ ಇಳಿಯುತ್ತಿದೆ. ಭಾರತದ ಅರ್ಥವ್ಯವಸ್ಥೆಯ ಹಿಂಜರಿತ, ಕೊವಿಡ್ ಮಹಾಸೋಂಕಿನ ಪರಿಣಾಮ ಮತ್ತು ಅಯೋಜಿತ ಹಠಾತ್ ಲಾಕ್‌ಡೌನಿನ ಹಿನ್ನೆಲೆಯಲಿ, ಭಾರತದ ಆಳುವ ವರ್ಗಗಳು ತಮ್ಮ ಲಾಭಗಳ ಮಟ್ಟವನ್ನು ಉಳಿಸಿಕೊಳ್ಳುವ ಮತ್ತು ಗರಿಷ್ಟಗೊಳಿಸಿಕೊಳ್ಳುವ ದಾರಿಗಳ ಹುಡುಕಾಟದಲ್ಲಿದ್ದವು.

ಭಾರತದಲ್ಲಿನ ದೊಡ್ಡ ಬಂಡವಳಿಗರ ನೇತೃತ್ವದ ಬಂಡವಾಳಶಾಹಿ-ಭೂಮಾಲಕ ವರ್ಗಗಳು, ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕನ್ನು ಬಳಸಿಕೊಂಡು ತಮ್ಮ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೆ ಏರಿಸುವ ತಮ್ಮ ಪ್ರಯತ್ನಗಳನ್ನು ಮತ್ತಷ್ಟು ಕ್ರೋಡೀಕರಿಸಿಕೊಂಡು ಬರುತ್ತಿವೆ. ರಾಷ್ಟ್ರೀಯ ಆಸ್ತಿಗಳ ಲೂಟಿ, ಸಾರ್ವಜನಿಕ ವಲಯದ ವ್ಯಾಪಕ ಖಾಸಗೀಕರಣ, ಗಣಿಗಳು ಮುಂತಾದ ಎಲ್ಲ ಸಾರ್ವಜನಿಕ ಸಂಪತ್ತುಗಳನ್ನು ಮತ್ತು ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸುವುದು, ಜತೆಗೆ ಕಾರ್ಮಿಕ ಹಕ್ಕುಗಳ ನಿರ್ಮೂಲನೆ ಈ ಪ್ರಕ್ರಿಯೆಯ ಭಾಗಗಳಾಗಿವೆ.

ರೈತಾಪಿಗಳ ಈಗ ನಡೆಯುತ್ತಿರುವ ಚಾರಿತ್ರಿಕ ಹೋರಾಟ ಭಾರತೀಯ ಆಳುವ ವರ್ಗಗಳ ಗರಿಷ್ಟ ಲಾಭಗಳಿಗಾಗಿ ಕೃಷಿಯ ಮೇಲೆ ಕಾರ್ಪೊರೇಟ್ ಹತೋಟಿಯನ್ನು ಪಡೆಯುವ ಈ ವರ್ಗಗಳ ನೇತೃತ್ವದ ಪ್ರಯತ್ನಗಳನ್ನು ತೀಕ್ಷ್ಣ ರೀತಿಯಲ್ಲಿ ಬೆಳಕಿಗೆ ತಂದಿದೆ.

ಹೀಗೆ ಒಂದೆಡೆಯಲ್ಲಿ ಅಂತರ‍್ರಾಷ್ಟ್ರೀಯ ಹಣಕಾಸು ಬಂಡವಾಳದೊಂದಿಗೆ ಕೈಜೋಡಿಸಿರುವ ದೊಡ್ಡ ಬಂಡವಳಿಗರು ಮತ್ತು ಇನ್ನೊಂದೆಡೆಯಲ್ಲಿ ಶ್ರೀಮಂತ ರೈತರು ಮತ್ತು ಭೂಮಾಲಕರೂ ಸೇರಿದಂತೆ ಸಮಸ್ತ ರೈತಾಪಿಗಳ ನಡುವೆ ಒಂದು ಹೊಸ ವರ್ಗ ಸಂಘರ್ಷ ಎದ್ದು ಬರುತ್ತಿದೆ.

ಎರಡನೆಯದಾಗಿ, ಆಳುವ ವರ್ಗಭಾಗೀದಾರರ ನಡುವೆಯೂ, ಒಂದೆಡೆಯಲ್ಲಿ ದೊಡ್ಡ ಬಂಡವಳಿಗರು, ಇನ್ನೊಂದೆಡೆಯಲ್ಲಿ ಇತರ ಬಂಡವಳಿಗರು, ವಿಶೇಷವಾಗಿ ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ವಲಯಕ್ಕೆ ಸೇರಿದವರ ನಡುವೆಯೂ ಸಂಘರ್ಷಗಳು ಮೂಡಿ ಬರುತ್ತಿವೆ.

ಮೂರನೆಯದಾಗಿ, ಬಿಜೆಪಿಯ ಸಂಪೂರ್ಣ ರಾಜಕೀಯ ಆಧಿಪತ್ಯವನ್ನು ಸ್ಥಾಪಿಸುವುದಕ್ಕಾಗಿ, ನಮ್ಮ ಸಂವಿಧಾನದ ಒಕ್ಕೂಟ ರಚನೆಯನ್ನು ನಾಶಪಡಿಸಿ ಅದರ ಜಾಗದಲ್ಲಿ ಒಂದು ಏಕಘಟಕ ಪ್ರಭುತ್ವ



ಹೊಸ ಈಸ್ಟ್ ಇಂಡಿಯ ಕಂಪನಿ!

ವ್ಯವಸ್ಥೆಯನ್ನು ತರುವ ಬಿಜೆಪಿಯ ಧಾವಂತ ಕೇಂದ್ರ ಸರಕಾರ ಮತ್ತು ಚುನಾಯಿತ ರಾಜ್ಯ ಸರಕಾರಗಳ ನಡುವೆ ಸಂಘರ್ಷಗಳನ್ನು ಉಂಟು ಮಾಡುತ್ತಿದೆ. ರಾಜ್ಯ ಸರಕಾರಗಳನ್ನು ನಡೆಸುತ್ತಿರುವ ಕೆಲವು ಪ್ರಾದೇಶಿಕ ಪಕ್ಷಗಳು, ಸಂಸತ್ತಿನಲ್ಲಿ ಬಿಜೆಪಿಯನ್ನು ಬೆಂಬಲಿಸುತ್ತಿದ್ದವುಗಳು ಮತ್ತು ಹಿಂದೆ-ಮುಂದೆ ನೋಡುತ್ತ ಸಾಮಾನ್ಯವಾಗಿ ಸಂಸತ್ತಿನಲ್ಲಿ ಬಿಜೆಪಿಗೆ ಬೆಂಬಲ ಕೊಡುವಲ್ಲಿ ತಟಸ್ಥವಾಗಿದ್ದವುಗಳು, ಈಗ ಬಿಜೆಪಿಯ ಈ ಆಧಿಪತ್ಯದ ಧಾವಂತದಿಂದಾಗಿ ಅದನ್ನು ವಿರೋಧಿಸಲೇ ಬೇಕಾಗಿ ಬಂದಿದೆ, ವಿಶೇಷವಾಗಿ ಈಗ ನಡೆಯುತ್ತಿರುವ ರೈತ ಹೋರಾಟದ ವೇಳೆಯಲ್ಲಿ.

ಆಳುವ ವರ್ಗ-ಭಾಗೀದಾರರ ನಡುವೆ ಇಂತಹ ಸಂಘರ್ಷಗಳು ಮೂಡಿ ಬರುತ್ತಿರುವುದು, ಅವನ್ನು ಶೋಷಣೆಗೊಳಗಾಗಿರುವ ವರ್ಗಗಳು, ನಿರ್ದಿಷ್ಟವಾಗಿ ಕಾರ್ಮಿಕ ವರ್ಗ, ಬಡ ರೈತಾಪಿಗಳು ಮತ್ತು ಕೃಷಿ ಕೂಲಿಕಾರರು, ಸಂಪೂರ್ಣವಾಗಿ ಬಳಸಿಕೊಳ್ಳಬಹುದಾದ ಸಾಧ್ಯತೆಗಳನ್ನು ಸೃಷ್ಟಿಸಿದೆ. ಇದನ್ನು ಬಂಡವಾಳಶಾಹಿ-ಭೂಮಾಲಕ ವರ್ಗ ವ್ಯವಸ್ಥೆಯ ವಿರುದ್ಧ ವರ್ಗ ಸಮರಗಳನ್ನು ತೀವ್ರಗೊಳಿಸಲು ಬಳಸಿಕೊಳ್ಳಬೇಕು.


ವರ್ಗ ಹೋರಾಟವನ್ನು ಮುಂದೊಯ್ಯುವ ಇಂತಹ ಸಾಧ್ಯತೆಗಳು ಕಾರ್ಮಿಕ ಆಂದೋಲನ, ರೈತಾಪಿಗಳು ಮತ್ತು ಕೃಷಿ ಕೂಲಿಕಾರರ ನಡುವೆ ಹೆಚ್ಚುತ್ತಿರುವ ಸಂಯೋಜನೆಯಿಂದಾಗಿ ಮೂಡಿ ಬಂದಿವೆ. ಇಂತಹ ಬೆಳವಣಿಗೆಗಳು ಬಹಳ ಹಿಂದೆಯೇ ಆರಂಭವಾಗಿದ್ದವು, 2018ರಿಂದೀಚೆಗೆ ಈ ವಿಭಾಗಗಳ ಜಂಟಿ ಚಳುವಳಿಗಳ ಮೂಲಕ ಗಮನಾರ್ಹ ಮುನ್ನಡೆ ಪಡೆದಿದ್ದವು. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ನವಂಬರ್ 26ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಕರೆ ರೈತ ಸಂಘಟನೆಗಳ ನವಂಬರ್ 26-27ರ 'ದಿಲ್ಲಿ ಚಲೋ' ಕರೆಯೊಂದಿಗೆ ಮೇಳವಿಸಿತು. ಹೋರಾಟದಲ್ಲಿ ಬೆಳೆಯುತ್ತಿರುವ ಈ ಐಕ್ಯತೆ, ಖಂಡಿತವಾಗಿಯೂ ಮುಂಬರುವ ಅವಧಿಯಲ್ಲಿ ಇನ್ನಷ್ಟು ಗಟ್ಟಿಗೊಳ್ಳುತ್ತದೆ.

ಇದೇ ವೇಳೆಯಲ್ಲಿ, ಆಳುವ ವರ್ಗಗಳು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದರೊಂದಿಗೆ ಮತ್ತು ಭಾರತೀಯ ಸಂವಿಧಾನವನ್ನು ಶಿಥಿಲಗೊಳಿಸುವುದರೊಂದಿಗೆ ನಡೆಸುತ್ತಿರುವ ತೀವ್ರ ವರ್ಗದಾಳಿಯ ಈ ಅವಧಿ ಪ್ರಸ್ತುತ ಬಿಜೆಪಿ ಕೇಂದ್ರ ಸರಕಾರದ ಧೋರಣೆಗಳ ವಿರುದ್ಧ ಜನಗಳ ಹೋರಾಟಗಳು ಬೆಳೆಯಲು ಆಧಾರ ಕಲ್ಪಿಸಿಕೊಡುತ್ತಿದೆ. ಇಂತಹ ಜಂಟಿ ಐಕ್ಯ ಹೋರಾಟಗಳು ಮತ್ತು ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು, ದಲಿತರು, ಬುಡಕಟ್ಟು ಜನಗಳು ಮುಂತಾದ ವಿವಿಧ ಜನವಿಭಾಗಗಳ ಸ್ವತಂತ್ರ ಬೇಡಿಕೆಗಳ ಮೇಲಿನ ಹೋರಾಟಗಳು ಮುಂಬರುವ ಅವಧಿಯಲ್ಲಿ ಖಂಡಿತವಾಗಿಯೂ ತೀವ್ರಗೊಳ್ಳುತ್ತವೆ. ಇವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು. ಭಾರತೀಯ ಜನತೆಯ ಮೇಲೆ ವರ್ಗದಾಳಿಯನ್ನು ತೀವ್ರಗೊಳಿಸುವ ಬಿಜೆಪಿಯ ಪ್ರಯತ್ನಗಳಿಗೆ ಶೋಷಿತ ವರ್ಗಗಳ ಮತ್ತು ನಮ್ಮ ಜನವಿಭಾಗಗಳ ಪ್ರತಿ-ದಾಳಿಯ ಮೂಲಕ ಸವಾಲು ಹಾಕಬೇಕು, ಅವನ್ನು ಎದುರಿಸಬೇಕು.

ಪಾಟ್ನಾದಲ್ಲಿ ರೈತರ ಬೃಹತ್ ರಾಜಭವನ ಚಲೋ-ಪೋಲೀಸ್ ಲಾಠೀ ಚಾರ್ಜ್- ತಂಜಾವೂರಿನಲ್ಲಿ ಬೃಹತ್ ರ‍್ಯಾಲಿ

ಡಿಸೆಂಬರ್ 29 ರಂದು ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಎ.ಐ.ಕೆ.ಎಸ್.ಸಿ.ಸಿ ನೇತೃತ್ವದಲ್ಲಿ ಗಾಂಧೀ ಮೈದಾನದಿಂದ ಹೊರಟ ರೈತರ ಬೃಹತ್ ಮೆರವಣಿಗೆ ರಾಜಭವನದತ್ತ ಹೋಗದಂತೆ ತಡೆಯಲು ಹಾಕಿದ್ದ ಮೊದಲ ಪೋಲೀಸ್ ಬ್ಯಾರಿಕೇಡನ್ನು ಮುರಿದು ಮುಂದೆ ಸಾಗಿ ಎರಡನೇ ಬ್ಯಾರಿಕೇಡನ್ನು ಸಮೀಪಿಸುತ್ತಿದ್ದಂತೆ ಪೋಲಿಸರು ಲಾಠೀ ಪ್ರಹಾರ ಆರಂಭಿಸಿದರು. ಮೆರವಣಿಗೆ ಅಲ್ಲೇ ಒಂದು ಬೃಹತ್ ಸಭೆಯಾಗಿ ಪರಿವರ್ತನೆಗೊಂಡಿತು. ಎ.ಐ.ಕೆ.ಎಸ್.ಸಿ.ಸಿ. ತಮಿಳುನಾಡು ಘಟಕ ತಂಜಾವೂರಿನಲ್ಲೂ ಅಂದು ರ‍್ಯಾಲಿಗೆ ಕರೆ ನೀಡಿತ್ತು. ರಾಜ್ಯದ ಬೇರೆ ಜಿಲ್ಲೆಗಳಿಂದ ಬರುತ್ತಿದ್ದ ರೈತರನ್ನು ಪೋಲೀಸರು ತಡೆದರೂ ಬೃಹತ್ ರ‍್ಯಾಲಿ ನಡೆಯಿತು.





ಆಹಾರಕ್ಕೆ ಸಂಬಂಧಿಸಿದ ಆರ್ಥಿಕ ಭ್ರಮೆಗಳು



ರೈತರು ಹೆಚ್ಚು ಲಾಭದಾಯಕರ ರೊಕ್ಕದ–ಬೆಳೆಗಳನ್ನು ಬೆಳೆಯುವಂತೆ ಮಾಡುವುದು, ಮೇಲ್ನೋಟದಲ್ಲಿ ಅವರ ಆದಾಯವನ್ನು ಹೆಚ್ಚಿಸುವ ಸುಲಭದ ಮಾರ್ಗವೆಂದು ತೋರಬಹುದು. ಆದರೆ, ವ್ಯಾಪಕ ಏರಿಳಿತಗಳ ಅನಿವಾರ್ಯತೆಗೆ ಒಳಪಟ್ಟಿರುವ ಜಾಗತಿಕ ಮಾರುಕಟ್ಟೆಯಲ್ಲಿ ಈ ಬೆಳೆಗಳ ಬೆಲೆಗಳು ಕುಸಿದಾಗ ರೈತರು ಪಾಪರಾಗುತ್ತಾರೆ. ಕನಿಷ್ಠ ಬೆಂಬಲ ಬೆಲೆಗಳ ವ್ಯವಸ್ಥೆಯೊಂದೇ ರೈತರಿಗೆ ಶ್ರೀರಕ್ಷೆ. ದಿಲ್ಲಿ ಗಡಿಯಲ್ಲಿ ನೆರೆದಿರುವ ರೈತರು ಈ ಎಲ್ಲ ವಿಷಯಗಳನ್ನು ಮೋದಿಯವರಿಗಿಂತ ಅಥವಾ ಆಹಾರ ಧಾನ್ಯಗಳಿಂದ ದೂರ ಸರಿಯಲು ಪ್ರತಿಪಾದಿಸುವ ಬುದ್ಧಿಜೀವಿಗಳಿಗಿಂತ ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುತ್ತಾರೆ. ವಿಪರ್ಯಾಸವೆಂದರೆ, ಆ ರೈತರು ದಡ್ಡರು ಎಂದು ಈ ಬುದ್ಧಿಜೀವಿಗಳು ಭಾವಿಸುತ್ತಾರೆ!

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಬಂಡವಾಳಶಾಹಿಗಳು ತಮ್ಮ ಸ್ವಾರ್ಥಕ್ಕಾಗಿ, 'ಆರ್ಥಿಕ ವಿವೇಚನೆ'ಯಿಂದ ಕೂಡಿವೆ ಎಂದು ಮಂಡಿಸುವ ವಾದಗಳನ್ನೂ ಸಹ ಭಾರತದ ಕೆಲವು ಬುದ್ಧಿಜೀವಿಗಳು ಸಲೀಸಾಗಿ ಒಪ್ಪಿಕೊಳ್ಳುತ್ತಾರೆ. ಅವರ ಈ ಮನೋಭಾವವು ನಂಬಲಸಾಧ್ಯವಾದದು. ಇದಕ್ಕೊಂದು ನಿದರ್ಶನವೆಂದರೆ, ಭಾರತದ ಆಹಾರ ಭದ್ರತೆಗೆ ಸಂಬಂಧಿಸಿದ ಕೆಲವು ಆರ್ಥಿಕ ವಿಷಯಗಳು. ಭಾರತದ ರೈತರು ಆಹಾರ ಧಾನ್ಯಗಳನ್ನು ಬೆಳೆಯುವುದರ ಬದಲು ಬೇರೆ ಬೇರೆ ಬೆಳೆಗಳತ್ತ ಹೊರಳಬೇಕೆಂದು ಸಲಹೆ ಮಾಡಿರುವ ಲೇಖನಗಳು ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಕಟವಾಗಿವೆ. ವಾಸ್ತವವಾಗಿ, ಈ ಸಲಹೆಯು, ಬಹಳ ಕಾಲದಿಂದಲೂ ಮುಂದುವರೆದ ಪಶ್ಚಿಮ ದೇಶಗಳು ಇಡುತ್ತಿದ್ದ ಬೇಡಿಕೆಯ ಸಮರ್ಥನೆಯೇ. ಈ ದೇಶಗಳು ತಮಗೆ ಸಾಕಾಗಿ ಉಳಿದ ಆಹಾರ ಧಾನ್ಯಗಳನ್ನು ಭಾರತವು ಆಮದು ಮಾಡಿಕೊಳ್ಳಬೇಕೆಂದು ಬಯಸುತ್ತವೆ. ಆದ್ದರಿಂದ, ಭಾರತದ ರೈತರು ಆಹಾರ ಧಾನ್ಯಗಳ ಉತ್ಪಾದನೆಯಿಂದ ದೂರ ಉಳಿದು ರೊಕ್ಕದ–ಬೆಳೆಗಳನ್ನು ಬೆಳೆಯಬೇಕೆಂದು ಭಾರತದ ಕೆಲವು ಬುದ್ಧಿಜೀವಿಗಳು ಕೊಡುವ ಸಲಹೆಯು ಮುಂದುವರೆದ ಪಶ್ಚಿಮ ದೇಶಗಳ ಬಯಕೆಯ ಅನುಮೋದನೆಯಾಗುತ್ತದೆ. ಈ ವಿದ್ಯಮಾನವು ನಮ್ಮನ್ನು ಹಸಿರು ಕ್ರಾಂತಿಯ ಮುಂಚಿನ ದಿನಗಳತ್ತ ಕೊಂಡೊಯ್ಯುತ್ತದೆ.

ಈ ಬುದ್ಧಿಜೀವಿಗಳು ಕೆಲವೊಮ್ಮೆ ಹೀಗೆ ವಾದ ಮಾಡುತ್ತಾರೆ: ತಮ್ಮ ರಿಸ್ಕ್ ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ, ಕನಿಷ್ಠ ಬೆಂಬಲ ಬೆಲೆಗಳು ಒದಗಿಸುವ ಆಮಿಷಕ್ಕೆ ಒಳಗಾಗಿ, ಪಂಜಾಬ್ ಮತ್ತು ಹರಿಯಾಣದ ರೈತರು ಧಾನ್ಯಗಳ ಉತ್ಪಾದನೆಯ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಈಗ ದೇಶದಲ್ಲಿ ಧಾನ್ಯಗಳ ಹೆಚ್ಚುವರಿ ದಾಸ್ತಾನು ಇದೆ. ಹಾಗಾಗಿ, ಧಾನ್ಯಗಳ ಉತ್ಪಾದನೆ ಲಾಭದಾಯಕವಲ್ಲ. ಮತ್ತೆ ಕೆಲವೊಮ್ಮೆ ಅವರ ವಾದವು ಬೇರೆ ರೀತಿಯಲ್ಲೇ ಇರುತ್ತದೆ: ಪಂಜಾಬ್ ಮತ್ತು ಹರಿಯಾಣ ರೈತರು ಕೇವಲ ಕನಿಷ್ಠ ಬೆಂಬಲ ಬೆಲೆ ದೊರೆಯುವ ಬೆಳೆಗಳಿಂದ ದೂರ ಸರಿದು, ಇನ್ನೂ ಹೆಚ್ಚು ಲಾಭಕರ ಬೆಳೆಗಳತ್ತ ಹೊರಳಬೇಕು. ಅದಕ್ಕಾಗಿಯೇ ಮೋದಿಯವರು ಮೂರು ಹೊಸ ಕೃಷಿ ಮಸೂದೆಗಳ ಮೂಲಕ ಅವಕಾಶ ಕಲ್ಪಿಸಿದ್ದಾರೆ ಮತ್ತು ದಾರಿ ತೋರಿಸಿದ್ದಾರೆ.

ಬುದ್ಧಿಜೀವಿಗಳ ಈ ನಿಲುಮೆಯು ಒಟ್ಟಾರೆಯಾಗಿ, ಮುಂದುವರಿದ ದೇಶಗಳ ಬೇಡಿಕೆಯನ್ನು ಪ್ರತಿಧ್ವನಿಸುವುದರ ಜೊತೆಗೆ, ಮೋದಿ ಸರ್ಕಾರವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸುತ್ತದೆ, ಮತ್ತು, ರೈತರ ಬಗ್ಗೆ ಸರ್ಕಾರವು ಎಷ್ಟು ತಿರಸ್ಕಾರ ಹೊಂದಿದೆಯೋ ಅಷ್ಟನ್ನೇ ಇವರೂ ಹೊಂದಿದ್ದಾರೆ ಎಂಬುದನ್ನು ತೋರಿಸುತ್ತದೆ. ಈ ಬುದ್ಧಿಜೀವಿಗಳ ದೃಷ್ಟಿಯಲ್ಲಿ, ರೈತರು ತಮಗೆ ಯಾವುದು ಒಳ್ಳೆಯದು ಎಂಬುದನ್ನು ಅರಿಯದ ದಡ್ಡರು; ಅದು ಮೋದಿಯವರಿಗೆ ಗೊತ್ತಿದೆ. ಅದೇನೇ ಇರಲಿ, ಈ ಬುದ್ಧಿಜೀವಿಗಳ ಇರಾದೆ ಮತ್ತು ಪೂರ್ವಗ್ರಹಗಳನ್ನು ಕಡೆಗಣಿಸಿ, ಅವರ ವಾದವನ್ನು ಮಾತ್ರ ಪರಿಶೀಲಿಸೋಣ.

ಗೋದಾಮುಗಳಲ್ಲಿ ಧಾನ್ಯಗಳ ದಾಸ್ತಾನು ಏರುತ್ತಿರುವ ಸಮಸ್ಯೆಗೆ, ಜನರ ಕೈಯಲ್ಲಿ ಖರೀದಿಯ ಶಕ್ತಿಯನ್ನು ತುಂಬಿಸುವಲ್ಲಿ ಪರಿಹಾರ ಅಡಗಿದೆ. ಇದಕ್ಕೆ ಆಹಾರ ಸಬ್ಸಿಡಿಯನ್ನು ಹೆಚ್ಚಿಸುವ ಕ್ರಮವನ್ನು ಸಂಪನ್ಮೂಲಗಳ ಕೊರತೆ ಇದೆಯೆಂದು ಆಕ್ಷೇಪಿಸುವವರು, ಸಮಾಜದಲ್ಲಿ ಆದಾಯ ಹಂಚಿಕೆಯನ್ನು ಸುಧಾರಿಸುವ ಪ್ರಯತ್ನಗಳಲ್ಲಿ, ಕೆಲವರಿಗೆ ಸಬ್ಸಿಡಿ ಒದಗಿಸುವ ಸಲುವಾಗಿ ಇತರರಿಗೆ ತೆರಿಗೆ ವಿಧಿಸಲೇಬೇಕು ಎಂಬುದನ್ನು ಮರೆಯಬಾರದು. ರೈತರ ಅಲ್ಪ ಆದಾಯದ ಬಗ್ಗೆ ಕನಿಕರ ವ್ಯಕ್ತಪಡಿಸುವವರು, ಅದನ್ನು ಸರಿ ಪಡಿಸಲು ವಿತ್ತೀಯ ಸಾಧನಗಳನ್ನು ಬಳಸಲು ಸಿದ್ಧರಿಲ್ಲದಿರುವುದು, ಅಪ್ರಾಮಾಣಿಕತನವಾಗುತ್ತದೆ. ರೈತರ ಬಗ್ಗೆ ಕೇವಲ ಮೊಸಳೆ ಕಣ್ಣೀರು ಸುರಿಸುವುದು ನಿಜಕ್ಕೂ ಸಾಮ್ರಾಜ್ಯಶಾಹಿ ಅಜೆಂಡಾವನ್ನು ಬೆಂಬಲಿಸುವ ಕ್ರಮವೇ.

ಭಾರತೀಯ ಆಹಾರ ನಿಗಮದಲ್ಲಿ ಸದ್ಯ ಆಹಾರ ಧಾನ್ಯಗಳ ದಾಸ್ತಾನು ಬೃಹತ್ ಪ್ರಮಾಣದಲ್ಲಿದೆ ಎಂಬುದನ್ನು ಮತ್ತು ಇದು ಭಾರತೀಯ ಅರ್ಥವ್ಯವಸ್ಥೆಯ ಒಂದು ನಿಯತ ಲಕ್ಷಣವೇ ಆಗಿದೆ ಎಂಬುದನ್ನೂ ನಿರಾಕರಿಸುವಂತಿಲ್ಲ. ಆದರೆ, ಈ ಒಂದು ಅಂಶದಿಂದಲೇ ಭಾರತವು ತನ್ನ ಅಗತ್ಯಕ್ಕಿಂತಲೂ ಹೆಚ್ಚು ಪ್ರಮಾಣದ ಆಹಾರ ಧಾನ್ಯಗಳನ್ನು ಬೆಳೆಯುತ್ತದೆ ಎಂದು ತಿಳಿಯುವುದು ಮೂರ್ಖತನದ ಪರಮಾವಧಿಯಾಗುತ್ತದೆ. ಜಾಗತಿಕ ಹಸಿವು–ಬಾಧಿತ 111 ದೇಶಗಳ ಪಟ್ಟಿಯಲ್ಲಿ ಭಾರತವು 100ನೇ ಸ್ಥಾನದಲ್ಲಿರುವ ದಯನೀಯ ಪರಿಸ್ಥಿತಿಯಿಂದಾಗಿ, ಹೆಚ್ಚುವರಿ ದಾಸ್ತಾನು ಹೊಂದಿರುವ ಒಂದು ಕಾರಣದಿಂದ, ದೇಶವು ಆಹಾರ ಧಾನ್ಯಗಳ ಬಗ್ಗೆ ಸ್ವಾವಲಂಬಿ ಎಂದು ಹೇಳಲಾಗದು. ಇದೇನೂ ಮನಸೊ ಇಚ್ಛೆಯ ತೀರ್ಮಾನವಲ್ಲ. ಜನರ ಕೈಯಲ್ಲಿ ಕೊಳ್ಳುವ ಶಕ್ತಿ ಹೆಚ್ಚಿನ ಪ್ರಮಾಣದಲ್ಲಿ ಇದ್ದ ಸಂದರ್ಭಗಳಲ್ಲಿ ಆಹಾರ ಧಾನ್ಯಗಳ ದಾಸ್ತಾನು ಇಳಿದಿದೆ. ಈ ಪರಿಸ್ಥಿತಿಯು ಏನನ್ನು ಸೂಚಿಸುತ್ತದೆ ಎಂದರೆ, ಜನರ ಕೈಯಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾದ ಕಾರಣದಿಂದಾಗಿ ಗೋದಾಮುಗಳಲ್ಲಿ ದಾಸ್ತಾನಿನ ಪ್ರಮಾಣ ಹೆಚ್ಚಿಗೆ ಇದೆ. ಅಂದರೆ, ಜನರಿಗೆ ಎಷ್ಟು ಅಗತ್ಯವೊ ಅಷ್ಟು ಆಹಾರ ದೊರೆಯುತ್ತಿಲ್ಲ.

ಆದ್ದರಿಂದ, ಬೃಹತ್ ಪ್ರಮಾಣದಲ್ಲಿ ಏರುತ್ತಿರುವ ಧಾನ್ಯಗಳ ದಾಸ್ತಾನಿಗೆ ಪರಿಹಾರವೆಂದರೆ, ಉದ್ಯೋಗ ಖಾತ್ರಿ ಯೋಜನೆಯ ವಿಸ್ತರಣೆ ಮತ್ತು ಜನರಿಗೆ ನೇರ ಹಣ ವರ್ಗಾವಣೆಗಳ ಮೂಲಕ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತುಂಬುವುದು. ವಿಪರ್ಯಾಸವೆಂದರೆ, ಈ ರೀತಿಯಲ್ಲಿ ವರ್ಗಾವಣೆ ಮಾಡಿದರೆ ಸರ್ಕಾರಕ್ಕೆ ಯಾವುದೇ ನಷ್ಟವಾಗುವುದಿಲ್ಲ ಎಂಬುದು. ಉದಾಹರಣೆಯಾಗಿ ಹೇಳುವುದಾದರೆ, ಈ ವರ್ಗಾವಣೆಗಳನ್ನು ಮಾಡಲು ಸರ್ಕಾರವು ಬ್ಯಾಂಕುಗಳಿಂದ 100 ರೂಗಳನ್ನು ಸಾಲ ಪಡೆಯುತ್ತದೆ ಎಂದುಕೊಳ್ಳೋಣ. ದುಡಿಯುವ ಜನರು ತಮ್ಮ ಕೈಗೆ ಬರುವ ಈ ಮೊತ್ತವನ್ನು ಆಹಾರ ಧಾನ್ಯಗಳನ್ನು ಕೊಳ್ಳಲು ಖರ್ಚು ಮಾಡುತ್ತಾರೆ. ಆ ಹಣ, ಭಾರತೀಯ ಆಹಾರ ನಿಗಮ (ಎಫ್‌ಸಿಐ)ವನ್ನು ಸೇರುತ್ತದೆ. ಈ ಮೊತ್ತವನ್ನು, ರೈತರಿಂದ ಆಹಾರ ಧಾನ್ಯಗಳನ್ನು ಕೊಳ್ಳಲು ಎಫ್‌ಸಿಐ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲು ಬಳಸಿಕೊಳ್ಳುತ್ತದೆ. ಎಫ್‌ಸಿಐ ಸ್ವತಃ ಸರ್ಕಾರದ ಭಾಗವಾಗಿರುವ ಕಾರಣ, ಈ ವ್ಯವಹಾರವು ಏನನ್ನು ಅರ್ಥೈಸುತ್ತದೆ ಎಂದರೆ, ಜನರಿಗೆ ಹಣ ವರ್ಗಾವಣೆಯ ಉದ್ದೇಶಕ್ಕಾಗಿ ಸರ್ಕಾರದ ಬಲಗೈ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಸರ್ಕಾರದ ಎಡಗೈ (ಎಫ್‌ಸಿಐ) ಮೂಲಕ ಮರು ಪಾವತಿಸುತ್ತದೆ. ಒಟ್ಟಾರೆಯಾಗಿ, ಸರ್ಕಾರದ ನಿವ್ವಳ ಸಾಲ ಹೆಚ್ಚುವುದಿಲ್ಲ. ಆದರೆ, ಎಫ್‌ಸಿಐ ಸರ್ಕಾರಿ ಸ್ವಾಮ್ಯದಲ್ಲಿದ್ದರೂ ಸಹ, ಅದರ ವ್ಯವಹಾರಗಳು ಬಜೆಟ್‌ನಲ್ಲಿ ಕಾಣಿಸಿಕೊಳ್ಳುವುದಿಲ್ಲ. 70ರ ದಶಕದ ಆರಂಭದವರೆಗೂ ಬಜೆಟ್ ಲೆಕ್ಕಾಚಾರ ಹೀಗಿರಲಿಲ್ಲ. ಜನರಿಗೆ ಹಣ ವರ್ಗಾವಣೆಯಾದ ಕಾರಣದಿಂದ, ಬಜೆಟ್‌ನಲ್ಲಿ ವಿತ್ತೀಯ ಕೊರತೆ ಏರಿಕೆಯಾಗುತ್ತದೆ, ನಿಜ. ಆದರೆ, ಈ ಏರಿಕೆಯಿಂದ ಯಾವ ತೊಂದರೆಯೂ ಆಗದು.

ಈ ಅಂಶವನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ರೈತರಿಂದ ಖರೀದಿಸಿದ ಧಾನ್ಯಗಳನ್ನು ದಾಸ್ತಾನು (ಸ್ಟಾಕ್) ಹಿಡಿದಿಟ್ಟುಕೊಳ್ಳುವ ಬದಲು ಜನರಿಗೆ ಹಂಚಿದರೆ, ಅದರಿಂದ ಯಾವ ದುಷ್ಪರಿಣಾಮಗಳೂ ಉಂಟಾಗುವುದಿಲ್ಲ. ಬದಲಾಗಿ, ಅನೇಕ ಕಾರಣಗಳಿಂದಾಗಿ ಧಾನ್ಯಗಳನ್ನು ಜನರಿಗೆ ಹಂಚುವ ಕ್ರಮವು ಬಹಳಷ್ಟು ಪ್ರಯೋಜನಕಾರಿಯಾಗುತ್ತದೆ. ಮೊದಲಿಗೆ, ಹೊಟ್ಟೆಗಿಲ್ಲದವರ ಹಸಿವನ್ನು ಹಿಂಗಿಸುತ್ತದೆ. ಪರಿಣಾಮವಾಗಿ, ಜನರ ಜೀವನ ಮಟ್ಟ ಸುಧಾರಿಸುತ್ತದೆ. ಅನವಶ್ಯಕ ದಾಸ್ತಾನು ವೆಚ್ಚಗಳನ್ನು ತಪ್ಪಿಸುತ್ತದೆ.

ನಾವು ಈ ಮೊದಲು ಪರಿಗಣಿಸಿದ ಉದಾಹರಣೆಯಲ್ಲಿ ಜನರ ಕೈಗೆ ಒದಗಿಸಿದ ಎಲ್ಲ ಹಣವೂ (ಕೊಳ್ಳುವ ಶಕ್ತಿ) ಆಹಾರ ಧಾನ್ಯಗಳಿಗೆ ಖರ್ಚಾಗುತ್ತದೆ ಎಂದು ಊಹಿಸಿದ್ದೆವು. ಆದರೆ, ಅದರಲ್ಲಿ ಒಂದಿಷ್ಟು ಭಾಗವನ್ನು ಜನರು ಇತರ ಪದಾರ್ಥಗಳನ್ನು ಕೊಳ್ಳಲು ಬಳಸಿಕೊಂಡಿದ್ದರೂ ಸಹ, ಅದು, ಬೇಡಿಕೆ–ನಿರ್ಬಂಧಿತ ಅರ್ಥವ್ಯವಸ್ಥೆಯಲ್ಲಿ ಇನ್ನೂ ಹೆಚ್ಚು ಪ್ರಯೋಜನಕಾರಿಯೇ ಆಗುತ್ತದೆ. ಹಿಂದಿನ ಉದಾಹರಣೆಯ ಸಂದರ್ಭದಂತಲ್ಲದೆ, ಈ ಪರಿಸ್ಥಿತಿಯಲ್ಲಿ ವಿತ್ತೀಯ ಕೊರತೆ ಏರಿಕೆಯಾಗುತ್ತದೆ, ನಿಜ. ಆದರೆ, ಇದು ಯಾವ ದುಷ್ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಅದಕ್ಕೆ ಬದಲಾಗಿ, ಆಹಾರಧಾನ್ಯಗಳನ್ನು ಬಿಟ್ಟು ಇತರ ವಸ್ತುಗಳ ವಲಯಗಳಲ್ಲಿ ಉತ್ಪಾದನೆಯ ಸಾಮರ್ಥ್ಯದ ಬಳಕೆಯನ್ನು ಹೆಚ್ಚಿಸುವ ಮೂಲಕ ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳಲು ನೆರವಾಗುತ್ತದೆ.

ಆದರೆ, ಉಗ್ರಾಣಗಳಲ್ಲಿ ಕೊಳೆಯದಂತೆ ಆಹಾರ ಧಾನ್ಯಗಳನ್ನು ಅಲ್ಲಿಂದ ಎತ್ತುವ ಮತ್ತು ಜನರ ಕೈಗೆ ಖರೀದಿ ಶಕ್ತಿಯನ್ನು ತುಂಬುವುದರ ಬದಲು, ಈಗ ಆಹಾರ ಧಾನ್ಯಗಳನ್ನು ಬೆಳೆಯುವ ಭೂಮಿಯನ್ನು ಬೇರೆ ಉಪಯೋಗಕ್ಕಾಗಿ ಬಳಸಿಕೊಂಡರೆ, ಅದು ಅಪಾರ ಜನರನ್ನು ಶಾಶ್ವತವಾಗಿ ಹಸಿವಿನ ದವಡೆಗೆ ತಳ್ಳುತ್ತದೆ. ಜನರಿಗೆ ಖರೀದಿಯ ಶಕ್ತಿ ಇಲ್ಲದಿರುವ ಕಾರಣದಿಂದಾಗಿಯೇ ಅವರು ಹಸಿವಿನ ಬಾಧೆಯಿಂದ ಬಳಲುತ್ತಿದ್ದಾರೆ. ಒಂದು ವೇಳೆ, ಆಹಾರ ಧಾನ್ಯಗಳನ್ನು ಬೆಳೆಯುವುದರ ಬದಲಾಗಿ ರೈತರು ಜಮೀನನ್ನು ಬೇರೆ ಕೆಲವು ಉಪಯೋಗಗಳಿಗೆ ಬಳಕೆ ಮಾಡಿಕೊಂಡರೆ, ಆಗ ಅಂತಹ ಬದಲಾವಣೆಯಿಂದಾಗಿ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸೃಷ್ಟಿಯಾಗುವ ಒಟ್ಟು ಉದ್ಯೋಗಗಳು ಮೊದಲಿಗಿಂತಲೂ ಅಧಿಕವಾಗಿದ್ದರೆ ಮಾತ್ರ, ಹಸಿವನ್ನು ಕಡಿಮೆ ಮಾಡಲು ಸಾಧ್ಯ. ಈಗ, ಆಹಾರ ಧಾನ್ಯಗಳನ್ನು ಬೆಳೆಯಲು ಅಥವಾ ಬೇರೆ ಯಾವುದೇ ಬೆಳೆ ತೆಗೆಯಲು ಬಳಕೆಯಾದ ಪ್ರತಿ ಎಕರೆ ಜಮೀನಿಂದ ಒದಗುವ ಉದ್ಯೋಗವು ಒಂದೇ ಸಮ ಎಂದು ಭಾವಿಸಿಕೊಂಡರೂ ಸಹ, ಭೂ–ಬಳಕೆಯ ಅಂತಹ ಬದಲಾವಣೆಯು ಹಸಿವೆಯ ಅಗಾಧತೆಯನ್ನು ಕಡಿಮೆ ಮಾಡುವುದಿಲ್ಲ. ಏಕೆಂದರೆ, ಜನರ ಕೈಯಲ್ಲಿರುವ ಖರೀದಿ ಶಕ್ತಿಯು ಮೊದಲಿನಂತೆಯೇ ಇರುತ್ತದೆ. ಆದ್ದರಿಂದ, ಹಸಿವೆಯನ್ನು ಹಿಂಗಿಸಲು ಜಮೀನನ್ನು ಆಹಾರ ಧಾನ್ಯಗಳಿಗೆ ಬದಲಾಗಿ ಬೇರೆ ಕೆಲವು ಉಪಯೋಗಗಳಿಗೆ ಬಳಕೆ ಮಾಡಿಕೊಳ್ಳುವುದು ಪರಿಹಾರವಲ್ಲ. ಹಸಿವೆಯನ್ನು ಹಿಂಗಿಸಲು ಇರುವ ಏಕೈಕ ದಿವ್ಯೌಷದಿ ಅಥವಾ ರಾಮ ಬಾಣವೆಂದರೆ, ಜನರ ಕೈಯಲ್ಲಿ ಖರೀದಿ ಶಕ್ತಿಯನ್ನು ತುಂಬುವುದು. ರೈತರು ಕೃಷಿ ಸಂಸ್ಕರಣೆಯತ್ತ ಸಾಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆಹಾರ ಧಾನ್ಯಗಳನ್ನು ಬೆಳೆಯುವ ಜಮೀನಿನ ಹರವನ್ನು ಕಡಿಮೆ ಮಾಡಲು ಇದು ಕಾರಣವಲ್ಲ.

ವಾಸ್ತವವಾಗಿ, ಈ ಬಗ್ಗೆ ಒಂದು ಭ್ರಮೆ ಉಂಟಾಗಿದೆ. ಅದು ಸರ್ವೆ ಸಾಮಾನ್ಯವಾದುದೇ. ಒಂದು ಎಕರೆ ಜಮೀನಿನಲ್ಲಿ ಆಹಾರ ಧಾನ್ಯಗಳನ್ನು ಬೆಳೆದಾಗ ಬರುವ ಆದಾಯವು, ಅದೇ ಒಂದು ಎಕರೆ ಜಮೀನಿನಲ್ಲಿ ಬೇರೆ ಒಂದು ಬೆಳೆಯನ್ನು ಬೆಳೆದಾಗ ಬರುವ ಆದಾಯಕ್ಕಿಂತ ಕಡಿಮೆ ಇದ್ದಾಗ, ಆ ಇನ್ನೊಂದು ಬೆಳೆಯೇ ಲಾಭದಾಯಕ ಎಂಬ ಭಾವನೆ ಎಲ್ಲರಲ್ಲೂ ಇದೆ. ಈ ಬದಲಾವಣೆಯಿಂದ ಬರುವ ಆದಾಯವಲ್ಲ, ಅದರಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಎಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂಬುದು ಸಮಾಜಕ್ಕೆ ಮುಖ್ಯವಲ್ಲ ಎಂಬುದೇ ಆ ಭ್ರಮೆ. ಇಂತಹ ಭೂ ಬಳಕೆಯ ಬದಲಾವಣೆಗಳಾದಾಗ, ಆಹಾರ ಧಾನ್ಯಗಳನ್ನು ಯಾವುದೇ ತೊಂದರೆಯಿಲ್ಲದೆ ಆಮದು ಮಾಡಿಕೊಳ್ಳಬಹುದು ಎಂದು ಭಾವಿಸುವುದು, ಇಂದಿನ ಸಾಮ್ರಾಜ್ಯಶಾಹಿ ಜಗತ್ತಿನಲ್ಲಿ ಒಂದು ಭ್ರಮೆಯಾಗುತ್ತದೆ. ಆಹಾರ ಧಾನ್ಯಗಳನ್ನು ಬೆಳೆಯುವ ಒಂದು ಎಕರೆ ಜಮೀನಿನಲ್ಲಿ ರಫ್ತು ಮಾಡಲು ರೊಕ್ಕದ–ಬೆಳೆ (ತಂಬಾಕು, ಹಣ್ಣು ಹಂಪಲು ಇತ್ಯಾದಿ) ಬೆಳೆದಾಗ ರೈತನ ವರಮಾನವು ದ್ವಿಗುಣಗೊಳ್ಳುತ್ತದೆ; ಆದರೆ, ಅದು ಸೃಷ್ಟಿಸುವ ಉದ್ಯೋಗಗಳು ಅರ್ಧದಷ್ಟು ಕಡಿಮೆಯಾಗುತ್ತವೆ ಎಂದಾದರೆ, ಗ್ರಾಮೀಣ ಪ್ರದೇಶಗಳಲ್ಲಿ ನಿರ್ಗತಿಕತನ ಹೆಚ್ಚುತ್ತದೆ. ಈ ವಿದ್ಯಮಾನವು ಸಂಭವಿಸಿದಾಗ, ಭೂ ಮಾಲೀಕ ರೈತರ ಹೆಚ್ಚಿದ ಆದಾಯವೂ ಅವರ ಕೈಗಳಿಂದ ಜಾರಿ ಹೋಗುತ್ತದೆ. ಏಕೆಂದರೆ, ರೈತರ ಸುತ್ತ ಮುತ್ತ ನಿರ್ಗತಿಕತನ ಹೆಚ್ಚುತ್ತಿರುವ ಪರಿಸ್ಥಿತಿಯಲ್ಲಿ, ರೈತರ ರಫ್ತು ಬೆಳೆಗಳನ್ನು ಖರೀದಿಸುವ ಕಾರ್ಪೊರೇಟ್‌ಗಳು ಖರೀದಿಯ ಬೆಲೆಯನ್ನು ಇಳಿಸಿ, ತಮ್ಮ ಲೂಟಿಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಆದ್ದರಿಂದ, ತೋರಿಕೆಯ ಆದಾಯದ ಗಳಿಕೆಯನ್ನಲ್ಲ, ಬದಲಿಗೆ,

ಪುಟ 14 ನೋಡಿ

**ತುಂಬಿ ತುಳುಕುವ ದಾಸ್ತಾನು......
"ನಮ್ಮ ತಲೆಯ ಮೇಲೆ ಬೀಳದಿರಬೇಕಾದರೆ 'ಸಾಮಾಜಿಕ ದೂರ' ಆಚರಿಸುವುದು ಅಗತ್ಯ.......!"**

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಯುವ ಮಹಿಳೆಯರು ಮುಂಚೂಣಿಯಲ್ಲಿ



ಈಗಾಗಲೇ ದೇಶಾದ್ಯಂತ ಸುದ್ದಿಯಾಗಿರುವಂತೆ ತಿರುವನಂತಪುರದ 21 ವರ್ಷದ ಆರ್ಯಾ ರಾಜೇಂದ್ರನ್ ದೇಶದ ಅತ್ಯಂತ ಕಿರಿಯ ವಯಸ್ಸಿನ ಮೇಯರ್ ಆಗಿ ಡಿಸೆಂಬರ್ 28ರಂದು ಪ್ರತಿಜ್ಞೆ ಸ್ವೀಕರಿಸಿದ್ದಾರೆ.

ನಾಮಪತ್ರ ಸಲ್ಲಿಸುವ ಹಿಂದಿನ ದಿನವಷ್ಟೇ 21 ವರ್ಷ ಪೂರೈಸಿದ ರೇಷ್ಮಾ ಮರಿಯಮ್ ರಾಯ್ ಚುನಾವಣೆ ಗೆದ್ದು ಈಗ ದೇಶದ ಅತ್ಯಂತ ಕಿರಿಯ



ವಯಸ್ಸಿನ ಗ್ರಾಮ ಪಂಚಾಯತ್ ಅಧ್ಯಕ್ಷೆಯಾಗಿದ್ದಾರೆ. ಅವರು ಡಿಸೆಂಬರ್ 30ರಂದು ಪಟ್ಟಣಮಿತ್ತ ಜಿಲ್ಲೆಯ ಅರ್ವಪುಳಂ ಗ್ರಾಮ ಪಂಚಾಯತಿನ ಅಧ್ಯಕ್ಷೆಯಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಈ ಚುನಾವಣೆಗಳಲ್ಲಿ ಯುವತಿಯರ ಗೆಲುವಿನ ಇನ್ನೂ ಹಲವು ಉದಾಹರಣೆಗಳು ಈಗ ಪ್ರಕಟಗೊಳ್ಳುತ್ತಿವೆ. ಸಿಪಿಐ(ಎಂ) ಈ ಬಾರಿ ದೊಡ್ಡ ಸಂಖ್ಯೆಯಲ್ಲಿ ಯುವ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತು. ಹಲವು ಎಸ್‌ಎಫ್‌ಐ, ಡಿವೈಎಫ್‌ಐ ಮುಖಂಡರು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದು, ಅವರಲ್ಲಿ ಹೆಚ್ಚಿನವರು ಗೆದ್ದು ಬಂದಿದ್ದಾರೆ.

ತಿರುವನಂತಪುರ ಮಹಾನಗರಪಾಲಿಕೆಗೆ ಇನ್ನಿಬ್ಬರು ಎಸ್‌ಎಫ್‌ಐ ಮುಖಂಡೆಯರು, ಗಾಯತ್ರಿ ಎಸ್ ಬಾಬು ಮತ್ತು ಎಸ್.ಎಸ್.ಶರಣ್ಯ ಆಯ್ಕೆಯಾಗಿದ್ದಾರೆ.

20ವರ್ಷ ವಯಸ್ಸಿನ ಸಿಪಿಐ ಮುಖಂಡೆ ಅನ್ಸಿಯಾ ಕೊಚ್ಚಿ ಮಹಾನಗರಪಾಲಿಕೆಯ ಉಪಮೇಯರ್ ಆಗಿ ಚುನಾಯಿತರಾಗಿದ್ದಾರೆ.

22ವರ್ಷ ವಯಸ್ಸಿನ ಎಲ್‌ಎಲ್‌ಬಿ ವಿದ್ಯಾರ್ಥಿನಿ ಮತ್ತು ಎಸ್‌ಎಫ್‌ಐ ಮುಖಂಡೆ ಶರುತಿ ಒಳವಣ್ಣ ಪಂಚಾಯತಿನ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ.

ಇನ್ನೊಬ್ಬರು ಎಸ್‌ಎಫ್‌ಐ–ಡಿವೈಎಫ್‌ಐ ಮುಖಂಡೆ 22 ವರ್ಷಗಳ ಸ್ಟೆಫಿ ಸುನಿಲ್ ವೈನಾಡ್ ಜಿಲ್ಲೆಯ ಪೊರಝುತನ ಗ್ರಾಮ ಪಂಚಾಯತಿನ ಅಧ್ಯಕ್ಷರಾಗಿದ್ದಾರೆ.

22ವರ್ಷ ವಯಸ್ಸಿನ ಅಮೃತಾ ಕೊಳ್ಳಂ ಜಿಲ್ಲೆಯ ಇತ್ತಿವ ಗ್ರಾಮ ಪಂಚಾಯತಿನ ಅಧ್ಯಕ್ಷೆಯಾಗಿ ಪ್ರತಿಜ್ಞೆ ಸ್ವೀಕರಿಸಿದ್ದಾರೆ.

23 ವರ್ಷವಯಸ್ಸಿನ ಎಂಎ ವಿದ್ಯಾರ್ಥಿನಿ ರಾಧಿಕಾ



ಎಂ ಮಾಲಂಪುಳ ಗ್ರಾಮ ಪಂಚಾಯತಿನ ಅಧ್ಯಕ್ಷೆಯಾಗಿದ್ದಾರೆ.

ಇದಲ್ಲದೆ ಎಲ್‌ಡಿಎಫ್ ಗೆದ್ದಿರುವ ಐದು ಮಹಾನಗರಪಾಲಿಕೆಗಳಲ್ಲಿ ಮೂರರಲ್ಲಿ ಮಹಿಳೆಯರು ಮೇಯರ್ ಆಗಿ ಚುನಾಯಿತರಾಗಿದ್ದಾರೆ. ತಿರುವನಂತಪುರದ ಆರ್ಯಾ ರಾಜೇಂದ್ರನ್ ಅಲ್ಲದೆ ಕೊಳ್ಳಂ ಮಹಾನಗರಪಾಲಿಕೆಗೆ ಪ್ರಸನ್ನಾ ಅರ್ನೆಸ್ಟ್ ಮತ್ತು ಮತ್ತು ಕೊಹಿಕ್ಕೋಡ್ ಮಹಾನಗರಪಾಲಿಕೆಗೆ ಡಾ. ಬೀನಾ ಕೆ ಫಿಲಿಪ್



ಮೇಯರ್ ಆಗಿ ಚುನಾಯಿತರಾಗಿದ್ದಾರೆ.

ಕೊಳ್ಳಂ ಜಿಲ್ಲೆಯ ಪೂತ್ತಕುಳಂ ಪಂಚಾಯತಿನ ಅಧ್ಯಕ್ಷೆಯಾಗಿ ಗೇರುಬೀಜ ಕಾರ್ಖಾನೆಯ ಕಾರ್ಮಿಕರಾದ ಅಮ್ಮಿನಿ ಅಮ್ಮ ಆಯ್ಕೆಯಾಗಿದ್ದಾರೆ. ಇವರು ಜಿಲ್ಲಾ ಗೇರುಬೀಜ ಕಾರ್ಮಿಕರ ಸಂಘದ



ಜಿಲ್ಲಾ ಸಂಯೋಜಕರು ಅಲಲ್ದೆ ಸಕ್ರಿಯ ಕುಡುಂಬಶ್ರೀ ಕಾರ್ಯಕರ್ತೆ

ಪತ್ತನಾಪುರಂ ಬ್ಲಾಕ್ ಪಂಚಾಯತ್‌ನ ಅಧ್ಯಕ್ಷೆಯಾಗಿ ಆಯ್ಕೆಯಾಗಿರುವ ಆನಂದವಲ್ಲಿ ಅದೇ ಕಚೇರಿಯಲ್ಲಿ 10 ವರ್ಷದಿಂದ ಅರೆಕಾಲಿಕ ಕಸಗುಡಿಸುವ ಕೆಲಸ ಮಾಡುತ್ತಿದ್ದವರು. ಇವರೂ ಕುಡುಂಬಶ್ರೀ ಯ ಸಕ್ರಿಯ ಕಾರ್ಯಕರ್ತೆ.



ಒಟ್ಟು ಮತಗಳಿಕೆಯಲ್ಲೂ ಏರಿಕೆ

ಎಲ್‌ಡಿಎಫ್ ಮತಗಳಿಕೆ 2015ರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ 41.85% ಇದ್ದದ್ದು 2020ರಲ್ಲಿ 42.53%ಕ್ಕೇ ಏರಿದ್ದರೆ, ಯುಡಿಎಫ್‌ನದ್ದು 40.23%ದಿಮದ 8.66%ಕ್ಕೆ ಇಳಿದಿದೆ. ಬಿಜೆಪಿಯ ಮತಗಳಿಕೆ 14.21%ದಿಮದ 15.5%ಕ್ಕೇರಿದೆ.

	ಒಟ್ಟು ಮತಗಳು 2015	%	ಒಟ್ಟು ಮತಗಳು 2020	%
ಎಲ್‌ಡಿಎಫ್	82,64,751	41.85	90,11,071	42.53
ಯುಡಿಎಫ್	79,44,931	40.23	81,91,500	38.66
ಬಿಜೆಪಿ	28,07,320	14.21	32,83,921	15.50
ಇತರರು			7,02,462	3.32

ಆಹಾರಕ್ಕೆ ಸಂಬಂಧಿಸಿದ ಆರ್ಥಿಕ ಭ್ರಮೆಗಳು

ಪುಟ 13 ರಿಂದ

ಭೂ–ಬಳಕೆಯ ಬದಲಾವಣೆಯು ಉದ್ಯೋಗಗಳ ಮೇಲೆ ಉಂಟುಮಾಡುವ ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಯಾವುದೇ ಒಂದು ದೇಶವು ಆಹಾರ–ಆಮದು–ಅವಲಂಬಿತವಾದಾಗ, ಈ ಗಣನೆಯ ಕ್ರಮವೂ ಸಾಕಾಗುವುದಿಲ್ಲ. ಏಕೆಂದರೆ, ಈ ದೇಶಗಳ ಕೈಗಳನ್ನು ತಿರುಚುವುದರಲ್ಲಿ ಸಾಮ್ರಾಜ್ಯಶಾಹಿಗಳು ನಿಸ್ಸೀಮರು.

ಗೋದಾಮುಗಳಲ್ಲಿ ಧಾನ್ಯಗಳ ದಾಸ್ತಾನು ಏರುತ್ತಿರುವ ಸಮಸ್ಯೆಗೆ, ಜನರ ಕೈಯಲ್ಲಿ ಖರೀದಿಯ ಶಕ್ತಿಯನ್ನು ತುಂಬಿಸುವಲ್ಲಿ ಪರಿಹಾರ ಅಡಗಿದೆ ಎಂದಾದಲ್ಲಿ, ಕನಿಷ್ಠ ಬೆಂಬಲ ಬೆಲೆಗಳನ್ನು ಏರಿಸಿ, ಆ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ಖರೀದಿಸುವ ಮೂಲಕ, ಆಹಾರ ಧಾನ್ಯಗಳ ಉತ್ಪಾದನೆಯ ಲಾಭದಾಯಕತೆಯ ಸಮಸ್ಯೆಗೆ ಪರಿಹಾರ ಒದಗಿಸಬಹುದು. ಆಹಾರ ಧಾನ್ಯಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ಏರಿಸಿದಾಗ, ಅವುಗಳನ್ನು ಖರೀದಿಸುವ ಗ್ರಾಹಕರಿಗೆ ಹೊರೆಯಾಗುತ್ತದೆ ಎಂದು ವಾದಿಸಬಹುದು. ಆದರೆ ಇದೊಂದು ತರ್ಕ–ರಹಿತ ಅನುಮಾನವಾಗುತ್ತದೆ. ಆಹಾರ ಸಬ್ಸಿಡಿ ಹೆಚ್ಚಿಸುವ ಮೂಲಕ ಧಾನ್ಯಗಳ ಖರೀದಿಯ ಹೊರೆಯನ್ನು ತಗ್ಗಿಸಬಹುದು. ಸಂಪನ್ಮೂಲಗಳ ಕೊರತೆಯ ನೆಲೆಯಲ್ಲಿ ಆಹಾರ ಸಬ್ಸಿಡಿಯನ್ನು ಹೆಚ್ಚಿಸುವ ಕ್ರಮವನ್ನು ಆಕ್ಷೇಪಿಸುವವರು, ಸಮಾಜದಲ್ಲಿ ಆದಾಯ ಹಂಚಿಕೆಯನ್ನು ಸುಧಾರಿಸುವ ಪ್ರಯತ್ನಗಳಲ್ಲಿ, ಕೆಲವರಿಗೆ ಸಬ್ಸಿಡಿ ಒದಗಿಸುವ ಸಲುವಾಗಿ ಇತರರಿಗೆ ತೆರಿಗೆ ವಿಧಿಸಲೇಬೇಕು ಎಂಬುದನ್ನು ಮರೆಯಬಾರದು. ರೈತರ ಅಲ್ಪ ಆದಾಯದ ಬಗ್ಗೆ ಕನಿಕರ ವ್ಯಕ್ತಪಡಿಸುವವರು, ಅದನ್ನು ಸರಿಪಡಿಸಲು ವಿತ್ತೀಯ ಸಾಧನಗಳನ್ನು ಬಳಸಲು ಸಿದ್ಧರಿಲ್ಲದಿರುವುದು, ಮಿತಿಮೀರಿದ ಅಪ್ರಾಮಾಣಿಕತನವಾಗುತ್ತದೆ. ರೈತರ ಬಗ್ಗೆ ಕೇವಲ ಮೊಸಳೆ ಕಣ್ಣೀರು ಸುರಿಸುವುದು ನಿಜಕ್ಕೂ ಸಾಮ್ರಾಜ್ಯಶಾಹಿ ಅಜೆಂಡಾ ಬೆಂಬಲಿಸುವ ಕ್ರಮವೇ. ಬಹುಷಃ ಅವರಿಗೆ ಅದರ ಅರಿವಿಲ್ಲದಿರಬಹುದು. ಇದೆಲ್ಲದರ ಹೊರತಾಗಿಯೂ, ರೈತರು ಹೆಚ್ಚು ಲಾಭದಾಯಕರ ರೊಕ್ಕದ–ಬೆಳೆಗಳನ್ನು ಬೆಳೆಯುವಂತೆ ಮಾಡುವುದು, ಮೇಲ್ನೋಟದಲ್ಲಿ ಅವರ ಆದಾಯವನ್ನು ಹೆಚ್ಚಿಸುವ ಸುಲಭದ ಮಾರ್ಗವೆಂದು ತೋರಬಹುದು. ಆದರೆ, ವ್ಯಾಪಕ ಏರಿಳಿತಗಳ ಅನಿವಾರ್ಯತೆಗೆ ಒಳಪಟ್ಟಿರುವ ಜಾಗತಿಕ ಮಾರುಕಟ್ಟೆಯಲ್ಲಿ ಈ ಬೆಳೆಗಳ ಬೆಲೆಗಳು ಕುಸಿದಾಗ ರೈತರು ಪಾಪರಾಗುತ್ತಾರೆ. ಕನಿಷ್ಠ ಬೆಂಬಲ ಬೆಲೆಗಳ ವ್ಯವಸ್ಥೆಯೊಂದೇ ರೈತರಿಗೆ ಶ್ರೀರಕ್ಷೆ.

ದೆಹಲಿ ಗಡಿಯಲ್ಲಿ ನೆರೆದಿರುವ ರೈತರು ಈ ಎಲ್ಲ ವಿಷಯಗಳನ್ನು ಮೋದಿಯವರಿಗಿಂತ ಅಥವಾ ಆಹಾರ ಧಾನ್ಯಗಳಿಂದ ದೂರ ಸರಿಯಲು ಪ್ರತಿಪಾದಿಸುವ ಬುದ್ಧಿಜೀವಿಗಳಿಗಿಂತ ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುತ್ತಾರೆ. ವಿಪರ್ಯಾಸವೆಂದರೆ, ರೈತರು ದಡ್ಡರು ಎಂದು ಈ ಬುದ್ಧಿಜೀವಿಗಳು ಭಾವಿಸುತ್ತಾರೆ!

ಕಾರ್ಮಿಕ ಚಳವಳಿಯ ಆರಂಭದ ವರ್ಷಗಳು

ಪುಟ 11 ರಿಂದ

ಈ ಮನವಿಗೆ 5,500 ಕಾರ್ಮಿಕರು ಸಹಿ ಹಾಕಿದರು ಮತ್ತು ಅದನ್ನು 1884 ರಲ್ಲಿ ಬಾಂಬೆ ಸರ್ಕಾರವು ನೇಮಿಸಿದ ಆಯೋಗಕ್ಕೆ ಸಲ್ಲಿಸಲಾಯಿತು.

1890 ರ ಏಪ್ರಿಲ್ 24 ರಂದು ಲೋಖಂಡೆ ಕರೆದ ಮುಂದಿನ ಸಭೆಯಲ್ಲಿ 24 ಸಾವಿರ ಕಾರ್ಮಿಕರು ಭಾಗವಹಿಸಿದರು, ಮತ್ತು ಇಬ್ಬರು ಮಹಿಳಾ ಕಾರ್ಮಿಕರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಾಪ್ತಾಹಿಕ ರಜೆಯನ್ನು ಕೇಳುವ ಮನವಿಯನ್ನು ತಯಾರಿಸಿ ಬಾಂಬೆ ಮಿಲ್ ಮಾಲೀಕರ ಸಂಘಕ್ಕೆ ಕಳಿಸಲಾಯಿತು. ಈ ಕೋರಿಕೆಯನ್ನು ಜೂನ್ 10, 1890 ನಡೆದ ಸಾಮಾನ್ಯ ಸಭೆಯಲ್ಲಿ ಮಾಲಿಕರ ಸಂಘ ಒಪ್ಪಿತು. ಇದು ವಿಜಯವಾಗಿತ್ತು, ಆದರೆ ಕಾನೂನು ಬಲವಂತವಿಲ್ಲದಕ್ಕಾಗಿ ಅದನ್ನು ಜಾರಿಗೊಳಿಸಲಾಗಲಿಲ್ಲ.

1892 ರಲ್ಲಿ ಲೋಖಂಡೆ ಅವರು 'ರಾಯಲ್ ಕಮಿಷನ್ ಆನ್ ಲೇಬರ್ ಆಫ್ ಗ್ರೇಟ್ ಬ್ರಿಟನ್' ಪ್ರಸಾರ ಮಾಡಿದ ಪ್ರಶ್ನಾವಳಿಗೆ ಉತ್ತರಿಸುತ್ತಾ ಪತ್ರವೊಂದನ್ನು ಬಾಂಬೆಯ ಮುಖ್ಯ ಕಾರ್ಖಾನೆ ಇನ್ಸ್‌ಪೆಕ್ಟರ್ ಮೂಲಕ ಕಳುಹಿಸಿದರು. ಈ ಪತ್ರವು ಆ ಅವಧಿಯಲ್ಲಿನ ಸರ್ಕಾರದ ಮನೋಭಾವಕ್ಕೆ ತಕ್ಕಂತೆ ಕಾರ್ಮಿಕರ ಸ್ಥಿತಿಯ ನಿರೂಪಣೆಯಾಗಿದೆ. ಆ ಪತ್ರದಲ್ಲಿ ಚಿತ್ರಿಸಿರುವಂತೆ ಭಾರತದ ಕಾರ್ಮಿಕರ ಪಾತ್ರವನ್ನು ಭಾರತದ ಕಾರ್ಮಿಕ ಚಳವಳಿಯ ಆಧುನಿಕ ವೀಕ್ಷಕರು ಒಪ್ಪಿಕೊಳ್ಳಲಾರರು ಎಂಬುದು ಗಮನಾರ್ಹ. ಆ ಪತ್ರವು ಆ ಅವಧಿಯಲ್ಲಿ ಕಾರ್ಮಿಕ ಕಲ್ಯಾಣವನ್ನು ಉತ್ತೇಜಿಸುವವರ ವರ್ತನೆ ಮತ್ತು ಆಲೋಚನಾ ವಿಧಾನದ ಪ್ರತಿಬಿಂಬವಾಗಿದೆ. ಸ್ವಲ್ಪ ಉದ್ದವಾಗಿದ್ದರೂ, ಪತ್ರದ ಕೆಲವು ಸಂಬಂಧಿತ ಭಾಗಗಳ ಮಂಡನೆಯು ಉಪಯುಕ್ತವೆಂದು ತೋರುತ್ತದೆ. ಪತ್ರ ಹೇಳುತ್ತದೆ:

"ಭಾರತದ ಗಿರಣಿ ಕೆಲಸಗಾರರು ಕಾನೂನು ಪಾಲಿಸುವ ಮತ್ತು ಶಾಂತಿಯುತ ಸಮುದಾಯವಾಗಿದ್ದು, ನಿಯಮದಂತೆ, ಅದಕ್ಕೆ ನ್ಯಾಯಯುತ ಪರಿಹಾರ ಹುಡುಕುವುದಕ್ಕಿಂತ ಅಥವಾ ಅವರ ಮಾಲಿಕರ ಅಧಿಕಾರವನ್ನು ಪ್ರಶ್ನಿಸುವುದಕ್ಕಿಂತ, ತಾಳ್ಮೆಯಿಂದ ಅದನ್ನು ಸಹಿಸುವ ಸಾಧ್ಯತೆ ಹೆಚ್ಚು. ಆದ್ದರಿಂದ, ಮಾಲಿಕರು ಕಾರ್ಖಾನೆಯ ಕಾನೂನುಗಳನ್ನು ಕಟ್ಟುನಿಟ್ಟಾಗಿ ಗಮನಿಸಿದರೆ, ಮತ್ತು ಅವರ ದುಡಿಮೆಯ ಕೂಲಿಯನ್ನು ನಿಯಮಿತವಾಗಿ ಪಾವತಿಸಿದರೆ ಮತ್ತು ಅಗತ್ಯವಿದ್ದಾಗ ಮಾತ್ರ ಮತ್ತು ಮೊದಲೇ ಸರಿಯಾದ ಸಮಯೋಚಿತ ಸೂಚನೆಯ ನಂತರ ಅವರ ವೇತನವನ್ನು ಕಡಿತಗೊಳಿಸಿದರೆ, ಮತ್ತು ನನ್ನ ಉತ್ತರದಲ್ಲಿ ಪ್ರಸ್ತಾಪಿಸಿದ ಕೆಲವು ಅಂಶಗಳನ್ನು ಒಪ್ಪಿಕೊಂಡರೆ, ಈ ದೇಶದಲ್ಲಿ ಮಾಲಿಕರು ಮತ್ತು ಕೆಲಸಗಾರರ ನಡುವೆ ಹೆಚ್ಚು ಸೌಹಾರ್ದಯುತ ಸಂಬಂಧವು ಇರಲಾರದು ಎಂಬುದಕ್ಕೆ ಯಾವುದೇ ಕಾರಣಗಳಿಲ್ಲ. ದೇಶದ ಗಿರಣಿ ಕೆಲಸಗಾರರು, ಅವರ ಸಮೃದ್ಧಿಯ ಕುರಿತು ಆಸಕ್ತ ವ್ಯಕ್ತಿಗಳು ನೀಡಿದ ಸುಂದರ ವರದಿಗಳ ಹೊರತಾಗಿಯೂ, ಅವರ ತೀವ್ರ ಅಜ್ಞಾನ ಮತ್ತು ನಗರ ಜೀವನದ ದುರ್ಗುಣಗಳಿಗೆ ವಿಶೇಷವಾಗಿ ಕುಡಿತದ ವ್ಯಸನದಿಂದಾಗಿ, ಒಂದು ವರ್ಗವಾಗಿ ಅಭಿವೃದ್ಧಿ ಹೊಂದುತ್ತಿಲ್ಲ. ಪ್ರಾಥಮಿಕವಾಗಿ ಶಿಕ್ಷಣ ಮತ್ತು ಉತ್ತಮ ನಡವಳಿಕೆ ಮತ್ತು ಸೇವೆಯಲ್ಲಿನ ದಕ್ಷತೆಗಾಗಿ ಸಾಂದರ್ಭಿಕವಾಗಿ ಗೌರವ ಧನವನ್ನು ಪಾವತಿಸುವುದರಿಂದ, ಅವರ ಸ್ಥಿತಿಯನ್ನು ಸುಧಾರಿಸಲು ಸಹಾಯವಾಗುತ್ತದೆ. ಪ್ರತಿ ದಿನಕ್ಕೆ 11 ಗಂಟೆಗಳ ಏಕರೂಪದ ಕೆಲಸವು ಆಯೋಗದ ಪರಿಗಣನೆಗೆ ಅಗತ್ಯವಾದ ಸುಧಾರಣೆಯಾಗಿದೆ."

ಅದೇ ಮನೋಭಾವದಿಂದ, ರೆವ್ರೆಂಡ್ ಫಾದರ್ ಹಾಪ್ಕಿನ್ಸ್ ಮತ್ತು ಜೆ. ಹೆನ್ಸನ್ ಅವರ ಆಶ್ರಯದಲ್ಲಿ ಬಾಂಬೆಯಲ್ಲಿ ಸೀಮನ್ಸ್ ಕ್ಲಬ್ ಅನ್ನು ರಚಿಸಲಾಯಿತು, ಅವರು ಕ್ರಮವಾಗಿ ನ್ಯಾಷನಲ್ ನಾವಿಕರ ಒಕ್ಕೂಟ ಮತ್ತು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್‌ನ ಫೈರ್‌ಮೆನ್ಸ್ ಯೂನಿಯನ್ ಜೊತೆ ಸಂಬಂಧ ಹೊಂದಿದ್ದರು. ಈ ಸಂಘ ಹೆಚ್ಚು ಕಡಿಮೆ ಕಾರ್ಮಿಕರ ಕುಂದುಕೊರತೆಗಳ ಬಟವಾಡೆ–ಕಛೇರಿಯಂತೆ ಕಾರ್ಯನಿರ್ವಹಿಸಿತು. ಆದರೆ ಆಧುನಿಕ ಟ್ರೇಡ್ ಯೂನಿಯನ್‌ನ ಗುಣಲಕ್ಷಣಗಳನ್ನು ಹೊಂದಿರಲಿಲ್ಲ. ತರುವಾಯ, ಕಾರ್ಮಿಕರಿಗೆ ಸಾಮಾಜಿಕ ಸೇವೆ ನೀಡುವ ಮನೋಭಾವದೊಂದಿಗೆ ಲೋಕೋಪಕಾರಿ ವ್ಯಕ್ತಿಗಳು ಇಂತಹ ಅನೇಕ ಸಂಸ್ಥೆಗಳನ್ನು ರಚಿಸಿದರು.

ಕಾರ್ಮಿಕ ಹೋರಾಟಗಳಿಗೆ ಐಕ್ಯತೆಯ ಸ್ಪರ್ಶ ಬೇಕಿದೆ.......

ಪುಟ 6 ರಿಂದ

ಕಾರ್ಮಿಕರನ್ನು ಸದಾ ಕಾಡುತ್ತಲೇ ಇರುತ್ತದೆ. ಇದರಿಂದ ಉಂಟಾಗುವ ತಾತ್ಕಾಲಿಕ ಸಮಸ್ಯೆಗಳನ್ನು ನಿವಾರಿಸಲು ಗುತ್ತಿಗೆ ಕಂಪನಿ ಮತ್ತು ಉತ್ಪಾದಕ ಘಟಕದ ನಡುವೆ ಒಡಂಬಡಿಕೆ ಏರ್ಪಟ್ಟಿರುತ್ತದೆ. ಇದನ್ನು ಮೀರಿ ಕಾರ್ಮಿಕರಿಗೆ ಯಾವುದೇ ರಕ್ಷಣೆ ಇರುವುದಿಲ್ಲ. ಇಂದು ವಿಶ್ವದಾದ್ಯಂತ ಗಾರ್ಮೆಂಟ್ ಉದ್ದಿಮೆ ಈ ರೀತಿಯ ಹೊರಗುತ್ತಿಗೆ ಒಪ್ಪಂದಗಳ ಅಡಿಯಲ್ಲೇ ಕಾರ್ಯನಿರ್ವಹಿಸುತ್ತಿದೆ.

ಈ ಉದ್ದಿಮೆಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಜನರಿಗೆ ಉದ್ಯೋಗ ಭದ್ರತೆ ಇರುವುದಿಲ್ಲ ಎನ್ನುವುದು ಗಂಭೀರ ವಿಚಾರ. ವಿಸ್ಟ್ರಾನ್ ಕಂಪನಿಯಲ್ಲಿ 8490 ಗುತ್ತಿಗೆ ಕಾರ್ಮಿಕರು ಯಾವುದೇ ಸಂಘಟನೆಯನ್ನು ಹೊಂದಿಲ್ಲ. ಗುತ್ತಿಗೆ ಕಂಪನಿಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಈ ಗುತ್ತಿಗೆ ಕಾರ್ಮಿಕರು ಸಂಘಟಿತರಾಗುವ ಹಕ್ಕುಗಳನ್ನೂ ಕಳೆದುಕೊಂಡಿರುತ್ತಾರೆ. ಇದು ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುವ ಸಾಮಾನ್ಯ ಲಕ್ಷಣ ಎನ್ನಬಹುದು. ತಮಗೆ ನೌಕರಿ ಒದಗಿಸುವ ಗುತ್ತಿಗೆ ಕಂಪನಿಯ ಮೂಲವನ್ನೂ ಅರಿಯದೆ ಈ ಕಾರ್ಮಿಕರು ಅನಿಶ್ಚಿತತೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ತಮ್ಮ ನ್ಯಾಯಯುತ ವೇತನದಿಂದ ವಂಚಿತರಾದಾಗ ಕಾರ್ಮಿಕರು ಸಹಜವಾಗಿಯೇ ಆಕ್ರೋಶ ವ್ಯಕ್ತಪಡಿಸುತ್ತಾರೆ. ವಿಸ್ಟ್ರಾನ್ ಕಂಪನಿಯ ಘಟನೆಗಳ ಹಿಂದೆ ಈ ಸೂಕ್ಷ್ಮವನ್ನು ಗಮನಿಸುವುದು ಅಗತ್ಯ.

ಈ ಹಿನ್ನೆಲೆಯಲ್ಲಿ ಸಾರಿಗೆ ಕಾರ್ಮಿಕರ ಮುಷ್ಕರ ಮತ್ತು ಅದರ ಹಿಂದಿನ ಕೆಲವು ಹಿತಾಸಕ್ತಿಗಳ ಮೂಲ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಸಾರಿಗೆ ನಿಗಮಗಳ ನೌಕರರು ತಮ್ಮನ್ನು ಸರ್ಕಾರಿ ನೌಕರರೆಂದು ಪರಿಗಣಿಸುವಂತೆ ಒತ್ತಾಯಿಸಿ ನಡೆಸಿದ ನಾಲ್ಕು ದಿನಗಳ ಮುಷ್ಕರದಲ್ಲಿ , ಸಂಘಟನಾತ್ಮಕ ಅಂಶಗಳಿಗಿಂತಲೂ ಕಾರ್ಮಿಕರಲ್ಲಿನ ದುಗುಡ ಮತ್ತು ಆತಂಕಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ. ಸರ್ಕಾರಿ ನೌಕರರೆಂದು ಪರಿಗಣಿಸಲ್ಪಟ್ಟರೆ ತಮ್ಮ ನೌಕರಿ ಸುಭದ್ರವಾಗುತ್ತದೆ ಎನ್ನುವ ಸಹಜ ಕಲ್ಪನೆ ಈ ಮುಷ್ಕರದ ಹಿಂದಿದೆ. 50 ವರ್ಷಗಳ ಕಾಲ ಸಂಘಟನೆಯನ್ನು ಕಟ್ಟಿ ಬೆಳೆಸಿದ ಅಧಿಕೃತ ನೌಕರ ಸಂಘಟನೆಯ ಆದೇಶವನ್ನೂ ಲೆಕ್ಕಿಸದೆ ಹಠಾತ್ತನೆ ಉದ್ಭವಿಸಿದ ರೈತ ಚಳುವಳಿಯ ನಾಯಕರೊಬ್ಬರ ನೇತೃತ್ವವನ್ನು ಒಪ್ಪಿಕೊಳ್ಳುವ ಸಾರಿಗೆ ಕಾರ್ಮಿಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದರ ಬದಲು, ಅವರ ಈ ಆತಂಕಗಳನ್ನು ನಿವಾರಿಸುವಲ್ಲಿ ನಾವೆಲ್ಲಿ ಎಡವಿದ್ದೇವೆ ಎಂದು ಸಂಘಟಿತ ಕಾರ್ಮಿಕ ನಾಯಕರು ಯೋಚಿಸಬೇಕಿದೆ.

ಸಾರಿಗೆ ನೌಕರರ ಹಠಾತ್ ಮುಷ್ಕರದ ಮೂಲಕ ಭಾರತದ ಆಳುವ ವರ್ಗಗಳು ಕಾರ್ಮಿಕ ಐಕ್ಯತೆಯನ್ನು ಭಂಗಗೊಳಿಸುವ ಒಂದು ಹೊಸ ಮಾರ್ಗವನ್ನು ಶೋಧಿಸಿರುವುದು ಸ್ಪಷ್ಟ. ಹತಾಶೆಯ ಅಂಚಿಗೆ ದೂಡಲ್ಪಟ್ಟಿರುವ, ತಮ್ಮ ನಾಳಿನ ಭವಿಷ್ಯದ ಬಗ್ಗೆ ಆತಂಕಕ್ಕೊಳಗಾಗಿರುವ ಮತ್ತು ಖಾಸಗೀಕರಣದ ಭೀತಿಯನ್ನು ಸದಾ ಎದುರಿಸುತ್ತಿರುವ ಬೃಹತ್ ಕಾರ್ಮಿಕ ವರ್ಗ ಸುಲಭವಾಗಿ ಆಳುವ ವರ್ಗಗಳ ಕುತಂತ್ರಗಳಿಗೆ ಬಲಿಯಾಗಿಬಿಡುತ್ತದೆ. ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಿಂತಲೂ, ಶ್ರಮಿಕ ವರ್ಗಗಳ ಐಕಮತ್ಯವನ್ನು ಭಂಗಗೊಳಿಸುವ ಮೂಲಕ ಪ್ರಭುತ್ವ ತನ್ನ ಖಾಸಗೀಕರಣ ಪ್ರಕ್ರಿಯೆಗೆ ಚಾಲನೆ ನೀಡಲು ಬಯಸುತ್ತದೆ. ನವ ಉದಾರವಾದ ಮತ್ತು ಹಣಕಾಸು ಬಂಡವಾಳದ ಮುನ್ನಡೆಗೆ ಇದು ಅತ್ಯವಶ್ಯವಾದ ವಿದ್ಯಮಾನದಂತೆ ಕಂಡುಬರುತ್ತದೆ.

100 ವರ್ಷದ ಇತಿಹಾಸ ಇರುವ ಭಾರತದ ಕಾರ್ಮಿಕ ಚಳುವಳಿಗೆ ಇದು ಬೃಹತ್ ಸವಾಲಾಗಿ ಪರಿಣಮಿಸಿದೆ. ಆತ್ಮನಿರ್ಭರ ಭಾರತ ಕಾರ್ಪೋರೇಟ್ ಔದ್ಯಮಿಕ ಹಿತಾಸಕ್ತಿಗಳನ್ನು ಸಂರಕ್ಷಿಸುವ ದೇಶ. ಇಲ್ಲಿ ಶ್ರಮಿಕರಿಗೆ ದಾಸ್ಯದ ಸಂಕೋಲೆಗಳನ್ನು ಸಿದ್ಧಪಡಿಸಿಯೇ ಅಭಿವೃದ್ಧಿಯ ನೀಲನಕ್ಷೆಗಳನ್ನು ಸಿದ್ಧಪಡಿಸಲಾಗುತ್ತದೆ. ಆತ್ಮನಿರ್ಭರ ಭಾರತಕ್ಕಾಗಿ ಬಂಡವಾಳ ಹೂಡುವ ಪ್ರತಿಯೊಂದು ಉದ್ದಿಮೆಗೂ, ಕಾರ್ಮಿಕರ ಪ್ರತಿಭಟನೆಯ ಹಕ್ಕು ಮತ್ತು ಸಂಘಟನೆಯ ಅವಕಾಶಗಳನ್ನು ಕಸಿದುಕೊಳ್ಳುವ ಭರವಸೆಯನ್ನು ನೀಡಲಾಗುತ್ತಿದೆ. ಈ ಆಶ್ವಾಸನೆಯನ್ನು ಈಡೇರಿಸಲೆಂದೇ ಗುತ್ತಿಗೆ ಕಾರ್ಮಿಕರನ್ನು ನೇಮಿಸುವ ಅಸಂಖ್ಯಾತ ಕಾರ್ಪೋರೇಟ್ ಉದ್ದಿಮೆಗಳು ಸೃಷ್ಟಿಯಾಗಿವೆ. ಕಾರ್ಮಿಕ ಮತ್ತು ಮಾಲಿಕನ ನಡುವಿನ ಸಂಬಂಧಗಳು ಇನ್ನೂ ಸಂಕುಚಿತವಾಗುತ್ತಿದ್ದು, ಶ್ರಮಿಕನು ತಾನು ಉತ್ಪಾದಿಸುವ ಸರಕುಗಳಿಂದ ಮತ್ತಷ್ಟು ದೂರವಾಗುತ್ತಿದ್ದಾನೆ.

ರೈಲ್ವೆ ಖಾಸಗೀಕರಣ ಪ್ರಕ್ರಿಯೆ ಚುರುಕಾಗುತ್ತಿದ್ದು, ರಾಷ್ಟ್ರೀಕೃತ ಬ್ಯಾಂಕುಗಳ ವಿಲೀನದ ನಂತರ ಈ ಕ್ಷೇತ್ರದಲ್ಲೂ ಹೊರಗುತ್ತಿಗೆಯ ನೀತಿಗೆ ಅಧಿಕೃತ ಸ್ವರೂಪವನ್ನು ನೀಡಲಾಗುತ್ತದೆ. ರಸ್ತೆ ಸಾರಿಗೆ ನಿಗಮಗಳು ಯಾವುದೇ ಸಂದರ್ಭದಲ್ಲಿ ಖಾಸಗಿ ಕ್ಷೇತ್ರದ ಪಾಲಾಗುವ ಸಾಧ್ಯತೆಗಳನ್ನೂ ತಳ್ಳಿಹಾಕಲಾಗುವುದಿಲ್ಲ. 12 ಗಂಟೆಯ ದುಡಿಮೆ ಈಗ ಬಹುಪಾಲು ಅಧಿಕೃತವಾಗಿದ್ದು ಕಾರ್ಮಿಕರು ತಮ್ಮ ಬದುಕಿನ ಅವಧಿಯನ್ನು ಹೆಚ್ಚುವರಿಯಾಗಿ ದುಡಿಮೆಯಲ್ಲೇ ಕಳೆಯಬೇಕಿದೆ. ಈ ಸಂದರ್ಭದಲ್ಲಿ ಭಾರತದ ಕಾರ್ಮಿಕ ಚಳುವಳಿ ತನ್ನ ಸ್ವರೂಪ ಮತ್ತು ಧ್ಯೇಯಗಳನ್ನು ಕುರಿತು ಮರುಚಿಂತನೆ ಮಾಡಬೇಕಿದೆ. ಒಂದು ವೇದಿಕೆಯಡಿ, ಸಂಯುಕ್ತ ರಂಗದ ಮೂಲಕ, ಐಕಮತ್ಯ ಪ್ರದರ್ಶಿಸುವ ಪ್ರಯತ್ನಗಳು ಫಲಗೂಡುತ್ತಿವೆ. ಆದರೆ ಇದರೊಟ್ಟಿಗೆ ಐಕಮತ್ಯವನ್ನು ಭಂಗಗೊಳಿಸುವ ಪ್ರಯತ್ನಗಳೂ ನಡೆಯುತ್ತಿವೆ.

ಭಾರತದ ಕಾರ್ಮಿಕರ ಮುಂದೆ ಕೇವಲ ಆರ್ಥಿಕ ಸುಸ್ಥಿರತೆ ಮತ್ತು ಸುಭದ್ರ ಬದುಕಿನ ಪ್ರಶ್ನೆ ಮಾತ್ರವೇ ಇಲ್ಲ. ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಮತ್ತು ರಾಜಕೀಯ ಅಧಿಕಾರದ ಸವಾಲುಗಳನ್ನೂ ಎದುರಿಸಬೇಕಿದೆ. ತಮ್ಮ ವ್ಯಕ್ತಿಗತ ಬದುಕನ್ನೂ ಮೀರಿದ ಒಂದು ಜಗತ್ತು ನಾಲ್ಕು ಗೋಡೆಗಳಿಂದಾಚೆ ಇರುವುದನ್ನು ಸಂಘಟಿತ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳು ಗುರುತಿಸಬೇಕಿದೆ. ಈ ಜಗತ್ತಿನಲ್ಲಿ ಅಸ್ಪೃಶ್ಯತೆ, ಅಸಮಾನತೆ, ಮತಾಂಧತೆ, ಜಾತಿ ದ್ವೇಷ ಎಲ್ಲವೂ ಜೀವಂತವಾಗಿವೆ. ಇವೆಲ್ಲವನ್ನೂ ಪೋಷಿಸುವ ಮೂಲಕವೇ ಪ್ರಭುತ್ವ ಕಾರ್ಮಿಕರ ಐಕ್ಯತೆ ಮತ್ತು ಐಕಮತ್ಯವನ್ನು ಭಂಗಗೊಳಿಸುತ್ತಾ, ವಿಭಜಿಸುತ್ತಾ ಮುನ್ನಡೆಯುತ್ತದೆ.

ವಿಸ್ಟ್ರಾನ್ ಮತ್ತು ಸಾರಿಗೆ ಕಾರ್ಮಿಕರ ಮುಷ್ಕರದಲ್ಲಿ ಈ ಸೂಕ್ಷ್ಮಗಳನ್ನು ಗ್ರಹಿಸುವುದು ನಮ್ಮ ಆದ್ಯತೆಯಾಗಬೇಕಿದೆ. ಶತಮಾನದ ಇತಿಹಾಸ ಇರುವ ಕಾರ್ಮಿಕ ಸಂಘಟನೆಗಳು ತಮ್ಮ ಹೊಣೆಗಾರಿಕೆಯನ್ನು ಅರಿತು, ಅಸ್ಮಿತೆಗಳ ಲೋಕದಿಂದ ಹೊರಬಂದು, ಹೊಸ ವಂಚಿತ ಅಸ್ಮಿತೆಗಳನ್ನು ಗುರುತಿಸಬೇಕಿದೆ. ಶ್ರಮಿಕರ ನಡುವೆಯೇ ಇರುವ ಈ ವಂಚಿತ ಅಸ್ಮಿತೆಗಳು ಅಸಮಧಾನದಿಂದ ಹತಾಶವಾಗುತ್ತಿರುವುದನ್ನು ಗಮನಿಸಬೇಕಿದೆ. ಈ ಅಸಮಧಾನವೇ ಐಕ್ಯತೆಗೆ ಮಾರಕವಾಗುವ ಸಾಧ್ಯತೆಗಳನ್ನು ಗ್ರಹಿಸಬೇಕಿದೆ. ಈ ಹೊತ್ತಿನಲ್ಲಿ ದೇಶದ ಕಾರ್ಮಿಕ ಚಳುವಳಿಗೆ ಹೊಸ ನೂತನ ಸ್ಪರ್ಶ ನೀಡುವುದೇ ಆದರೆ ನಮ್ಮ ಸುತ್ತಲಿನ ಪೊರೆಗಳನ್ನು ಕಳಚಿಹಾಕಿ ಹೊರಬರಬೇಕಿದೆ.

2020 ಈ ನಿಟ್ಟಿನಲ್ಲಿ ಜ್ಞಾನೋದಯದ ವರ್ಷ ಎಂದರೂ ಅಡ್ಡಿಯಿಲ್ಲ.. ಪೌರತ್ವ ತಿದ್ದುಪಡಿ ಕಾಯ್ದೆ, ಕೋವಿಡ್ ಸಂದರ್ಭದ ವಲಸೆ ಕಾರ್ಮಿಕರ ಬವಣೆ, ಕೋಟ್ಯಂತರ ರೈತರ ಸುದೀರ್ಘ ಮುಷ್ಕರ ಮತ್ತು ವಿವಿಧ ನೆಲೆಗಳಲ್ಲಿ ಸ್ಫೋಟಿಸುತ್ತಿರುವ ಕಾರ್ಮಿಕರ ಆಕ್ರೋಶ ಇವೆಲ್ಲವೂ ಶ್ರಮಜೀವಿಗಳಿಗೆ ಸಂಬಂಧಪಟ್ಟಿರುವುದನ್ನು ಗಮನಿಸಲು ಈ ವರ್ಷದ ಬೆಳವಣಿಗೆಗಳು ಅವಕಾಶ ನೀಡಿವೆ. ಸಂಘಟಿತ ಕಾರ್ಮಿಕ ವಲಯ ಈ ಸೂಕ್ಷ್ಮವನ್ನು ಅರ್ಥಮಾಡಿಕೊಂಡರೆ ಭಾರತದ ಶ್ರಮಿಕರ ಭವಿಷ್ಯದಲ್ಲಿ ಬೆಳಕು ಕಾಣಲು ಸಾಧ್ಯ. ಇದು ಚಾರಿತ್ರಿಕ ಸತ್ಯವೂ ಹೌದು, ಸವಾಲೂ ಹೌದು. ■

ಭಾರತದಲ್ಲಿ ಏರುತ್ತಲೇ ಇದೆ ಗೋವು(ಹಸು)ಗಳ ಸಂತತಿ !

20 ನೇ ಭಾರತೀಯ ಲೈವ್‌ಸ್ಟಾಕ್ ಸಮೀಕ್ಷೇ ವರದಿಯಲ್ಲಿ ಬಹಿರಂಗ

2020 ಡಿಸೆಂಬರ್ 7 ರಿಂದ 15 ರವರೆಗೆ ನಿಗದಿಯಾಗಿದ್ದ ಕರ್ನಾಟಕ ವಿಧಾನ ಸಭಾ ಅಧಿವೇಶನವು ಐದು ದಿನ ಮುಂಚಿತವಾಗಿಯೇ ಕೊನೆಗೊಂಡಿದೆ. ಹೀಗೆ ಕೊನೆಗೊಳ್ಳುವ ಎರಡು ದಿನಗಳ ಮೊದಲೇ ಕಾರ್ಯಸೂಚಿಯಲ್ಲಿ ನಮೂದಿಸಲಾಗದ ಗೋಹತ್ಯೆ ನಿಷೇಧ ಮಸೂದೆಯನ್ನು ಇದ್ದಕ್ಕಿದ್ದಂತೆ ಸಭಾಧ್ಯಕ್ಷರ ಅನುಮತಿಯೊಂದಿಗೆ ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಮಂಡಿಸಿ ಯಾವುದೇ ಚರ್ಚೆಗೆ ಅವಕಾಶ ನೀಡದೆ ಸದನದ ಒಪ್ಪಿಗೆಯನ್ನು ಪಡೆದು ಬಿಟ್ಟರು.! ಆದರೆ ವಿಧಾನ ಸಭೆಯಲ್ಲಿ ಬಹುಪರಾಕ್‌ನೊಂದಿಗೆ ಪಾಸು ಮಾಡಿಕೊಂಡ ಬಿಜೆಪಿ ಸರಕಾರ ಪರಿಷತ್ ನಲ್ಲಿ ಮಾತ್ರ ಅದನ್ನು ಸೋಲುವ ಭಯದಿಂದ ಮಂಡಿಸದೆ ನುಣುಚಿಕೊಂಡಿತು. ಈಗ ಅದಕ್ಕಿರುವ ಏಕೈಕ ದಾರಿ ಎಂದರೆ ಸುಗ್ರೀವಾಜ್ಞೆ ಮಾತ್ರ ಅದಕ್ಕಾಗಿ ಪುನಃ ಅಧಿವೇಶನ ನಡೆಸಿ ಪಾಸು ಮಾಡಿಕೊಳ್ಳುವ ತಯಾರಿ ನಡೆಸಿದೆ.

ಆ ಕಾನೂನಿನ ಮಾತು ಒಂದು ಕಡೆ ಇರಲಿ. ಕೇಂದ್ರದಲ್ಲಿ ಭಾರೀ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರವು ಗೋಹತ್ಯೆಯನ್ನು ಹಾಗು ಗೋಮಾಂಸ ಮಾರಾಟವನ್ನು ದೇಶಾದ್ಯಾಂತ ನಿಷೇಧಿಸುವ ಮಾತು ಆರಂಭಿಸುತ್ತಿದ್ದಂತೆ ಅದೇ ಪಕ್ಷ ಅಧಿಕಾರದಲ್ಲಿರುವ ಮಹಾರಾಷ್ಟ್ರ ಹಾಗೂ ಗೋವಾ ಹಾಗೂ ಹರಿಯಾಣ ಸರ್ಕಾರಗಳು ಗೋಹತ್ಯೆ ಹಾಗೂ ಗೋಮಾಂಸ ಮಾರಾಟ ಮತ್ತು ಸೇವನೆ ಮೇಲೆ ನಿಷೇಧವನ್ನು ಹಿಂದೆಯೇ ಹೇರಿದ್ದವು. ಇದಕ್ಕೆ ಆ ರಾಜ್ಯ ಸರ್ಕಾರಗಳು ಮತ್ತು ಗೋಮಾಂಸ ನಿಷೇಧ ಮಾಡಬೇಕೆಂದು ವಾದಿಸುತ್ತಿರುವ ಆರ್‌ಎಸ್‌ಎಸ್ ಹಾಗೂ ಇತರೆ ಬಲಪಂಥಿಯರು ಹೇಳುತ್ತಿರುವ ಕಾರಣವೆಂದರೆ ಗೋವು ಹಿಂದುಗಳಿಗೆ ಪವಿತ್ರತೆಯ ಸಂಕೇತ. ಮತ್ತು ಹೀಗೆ ಗೋವುಗಳನ್ನು ಆಹಾರಕ್ಕಾಗಿ ಹತ್ಯೆಗೈಯುತ್ತಾ ಹೋದರೆ ಮುಂದೊಂದು ದಿನ ಭಾರತದಲ್ಲಿ ಗೋವುಗಳ ಸಂಖ್ಯೆ ಕಡಿಮೆಯಾಗಿ ಅವುಗಳ ಸಂತತಿಯೇ ನಾಶವಾಗುತ್ತದೆ ಎಂಬುದು!

ಗೋವುಗಳ ಸಂತತಿ ಅಪಾಯದಲ್ಲಿದೆಯಾ..?

ಇನ್ನೂ ಎರಡನೇ ಅತಿ ಮುಖ್ಯ ಅಂಶವಾದ ಗೋವುಗಳ ಸಂತತಿ ನಾಶವಾಗುವ ಪ್ರಶ್ನೆಯ ಬಗ್ಗೆ ಚರ್ಚಿಸುವುದಾದರೆ ಭಾರತದಲ್ಲಿ ಗೋವುಗಳು ಅಪಾಯದ ಅಂಚಿನಲ್ಲಿಲ್ಲ.! ಮಾತ್ರವಲ್ಲ ಅವುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ..! ಆಶ್ಚರ್ಯವಾಗುತ್ತಿದೆಯಾ..? ಹೌದು ಇದು ಸತ್ಯ ಸಂಗತಿ. ಕೇವಲ ಗೋವುಗಳ ಬಗ್ಗೆ ಭಾವನಾತ್ಮಕವಾಗಿ ಮಾತನಾಡುವ ಜನರು ಈ ಬಗ್ಗೆ ಸ್ವಲ್ಪ ವಾಸ್ತವಾಂಶಗಳನ್ನು ತಿಳಿದುಕೊಳ್ಳಬೇಕು.

ಕೇಂದ್ರ ಸರಕಾರದ ಪಶು ಸಂಗೋಪನಾ ಮತ್ತು ಹೈನುಗಾರಿಕೆ ಮತ್ತು ಮೀನುಗಾರಿಕಾ ಇಲಾಖೆಗಳ ಜಂಟಿ ಸಹಭಾಗಿತ್ವದಲ್ಲಿ ನಡೆಸಿದ 20 ನೇ ಭಾರತೀಯ ಲೈವ್ ಸ್ಟಾಕ್ ಸಮೀಕ್ಷೆಯ 2019 ರ ಪ್ರಕಾರ ನಮ್ಮ ದೇಶದಲ್ಲಿರುವ ಹಸುಗಳ ಸಂಖ್ಯೆ 145.12 ದಶಲಕ್ಷದಷ್ಟಿವೆ. 2012 ರ ಹಿಂದಿನ ಸಮೀಕ್ಷೆಗೆ ಹೋಲಿಸಿದರೆ ಶೇ 18 ರಷ್ಟು ಗೋವುಗಳ ಪ್ರಮಾಣ ಹೆಚ್ಚಾಗಿದೆ.! ಇದು ಅಧಿಕೃತವಾಗಿ ಕೇಂದ್ರ ಸರಕಾರದ ಮೀನುಗಾರಿಕೆ, ಪಶು ಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಅಧಿಕೃತ ವೆಬ್‌ಸೈಟ್ ನಲ್ಲಿ 2019 ಅಕ್ಟೋಬರ್ 16 ರಂದು ಸಾರ್ವಜನಿಕವಾಗಿ ಅಪ್‌ಲೋಡ್ ಮಾಡಲಾಗಿದೆ

2019 ರಲ್ಲಿ ನಡೆಸಿದ ಲೈವ್ ಸ್ಟಾಕ್ (ಜಾನುವಾರು ಗಣತಿ) ಸಮೀಕ್ಷೆಯ ಕೆಲ ವಿವರಗಳು ಇಲ್ಲಿವೆ

- 2019 ರಲ್ಲಿ ದೇಶದಲ್ಲಿ ಒಟ್ಟು ಜಾನುವಾರಗಳು ಸಂಖ್ಯೆ ಇರುವುದು 535.78 ದಶಲಕ್ಷ 2012 ಸಮೀಕ್ಷೆಗಿಂತ ಶೇ 4.6 ರಷ್ಟು ಏರಿಕೆಕಂಡಿದೆ.
- ಎಮ್ಮೆ ಸೇರಿ ದನದ ಮಾದರಿಯ ಒಟ್ಟು ಜಾನುವಾರಗಳ ಸಂಖ್ಯೆಯು 302.79 ದಶಲಕ್ಷವಾಗಿದ್ದು ಹಿಂದಿನ ಸಮೀಕ್ಷೆಗೆ(2012) ಹೋಲಿಸಿದರೆ ಶೇ 1 ರಷ್ಟು ಏರಿಕೆ ಕಂಡಿದೆ.
- 2019 ರಲ್ಲಿ ಒಟ್ಟು ದನಗಳ ಸಂಖ್ಯೆ 192.49 ರಷ್ಟಿದ್ದು ಹಿಂದಿನ ಸಮೀಕ್ಷೆಗೆ (2012) ಹೋಲಿಸಿದರೆ ಶೇ0.8 ರಷ್ಟು ಏರಿಕೆಕಂಡಿದೆ.
- ಇನ್ನೂ ಎಲ್ಲರ ಗಮನ ಸೆಳೆಯುವ ಮತ್ತು ಈಗ ದೇಶದ್ಯಾಂತ ಚರ್ಚೆಯ ವಿಷಯವಾಗಿರುವ ಆಕಳು(ಗೋವು) ಸಂಖ್ಯೆಯು 145.12 ದಶಲಕ್ಷವಾಗಿದ್ದು ಇದು 2012 ಸಮೀಕ್ಷೆಗೆ ಹೋಲಿಸಿದರೆ ಶೇ 18.0 ರಷ್ಟು ಏರಿಕೆ ಕಂಡಿದೆ.
- ಇನ್ನು ವಿದೇಶಿ ಮಿಶ್ರತಳಿ ಮತ್ತು ದೇಶಿಯ ಮತ್ತು ಹೆಸರಿಸಲಾಗದ ಜಾನುವಾರಗಳ ಸಂಖ್ಯೆಯು ಕ್ರಮವಾಗಿ 50.42 ಹಾಗೂ 142.11 ರಷ್ಟಿದೆ.
- 2012 ರ ಸಮೀಕ್ಷೆಗೆ ಹೋಲಿಸಿದರೆ 2019 ರಲ್ಲಿ ದೇಶಿಯ ಮತ್ತು ಇತರೆ ಹೆಸರಿಸಲಾಗದ ಜಾನುವಾರಗಳ ಸಂಖ್ಯೆಯಲ್ಲಿ ಶೇ 10 ರಷ್ಟು ಹೆಚ್ಚಳ ಕಂಡಿದೆ.
- ವಿದೇಶಿ ಮಿಶ್ರತಳಿ(ಎತ್ತು ಹೋರಿ ಇತ್ಯಾದಿ) ಮತ್ತು ದೇಶಿಯ ಮತ್ತು ಹೆಸರಿಸಲಾಗದ ಜಾನುವಾರಗಳ ಸಂಖ್ಯೆಯು 2012 ಸಮೀಕ್ಷೆಗೆ ಹೋಲಿಸಿದರೆ ಶೇ 26.9 ರಷ್ಟು ಹೆಚ್ಚಳವಾಗಿದೆ ಇದು ಕಳೆದ ಸಮೀಕ್ಷೆಯಲ್ಲಿ ಶೇ 9 ರಷ್ಟು ಇಳಿಕೆ ಕಂಡಿತ್ತು ಆದರೆ ಈಗ ಅದರ ಪ್ರಮಾಣ ಶೇ 6 ಕ್ಕೆ ತಲುಪಿದೆ.
- ಕಳೆದ ಸಮೀಕ್ಷಗೆ ಹೋಲಿಸಿದರೆ ಎಮ್ಮೆಗಳ ಪ್ರಮಾಣದಲ್ಲಿ ಶೇ 1 ರಷ್ಟು ಹೆಚ್ಚಳವಾಗಿದೆ. ಅವುಗಳ ಸಂಖ್ಯೆ 2019 ರಲ್ಲಿ 109.85 ದಶಲಕ್ಷ ತಲುಪಿದೆ.
- ಹಾಗೆ ಹಾಲು ಕರೆಯುವ ಹಸು ಮತ್ತು ಎಮ್ಮೆಗಳ ಒಟ್ಟಾರೆ ಸಂಖ್ಯೆ 2019 ರಲ್ಲಿ 125.34 ದಶಲಕ್ಷ ಇದ್ದು ಕಳೆದ ಸಮೀಕ್ಷೆಗೆ ಹೋಲಿಸಿದರೆ ಶೇ 6.0 ರಷ್ಟು ಏರಿಕೆಯಾಗಿದೆ.
- ಅದೇ ರೀತಿ 2019 ಸಮೀಕ್ಷೆಯಲ್ಲಿ ಕುರಿಗಳ ಸಂಖ್ಯೆ 74.26(14 ರಷ್ಟು ಹೆಚ್ಚಳ) ಮೇಕೆಗಳ 9.06 ದಶಲಕ್ಷ(10.1 ರಷ್ಟು ಏರಿಕೆ) ಹಂದಿಗಳ ಸಂಖ್ಯೆ 2019 ರಲ್ಲಿ 9.06 ದಶಲಕ್ಷ ಇದ್ದು ಶೇ12.03 ರಷ್ಟು ಇಳಿಕೆ ಕಂಡಿದೆ.

ಕೇಂದ್ರ ಸರಕಾರದ ಮೀನುಗಾರಿಕೆ, ಪಶು ಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು 2019 ರಲ್ಲಿ ಬಿಡುಗಡೆ ಮಾಡಿರುವ ಈ 20 ನೇ ಜಾನುವಾರ ಗಣತಿ ಸಮೀಕ್ಷೆ ವರದಿಯು ಜನಗಣತಿ ನೀತಿ ನಿರೂಪಕರು ಮಾತ್ರವಲ್ಲದೆ ಕೃಷಿಕರು, ವ್ಯಾಪಾರಿಗಳು, ಉದ್ಯಮಿಗಳು ಹೈನುಗಾರಿಕೆ ಉದ್ಯಮ ಮತ್ತು ಜನಸಾಮಾನ್ಯರ ತಿಳುವಳಿಕೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ.

ಅಂದರೆ ಜಾನುವಾರಗಳಲ್ಲಿ ಕಡಿಮೆಯಾಗುತ್ತಿರುವುದು ಕೆಲವರು ತಲೆಬುಡವಿಲ್ಲದೆ ಪ್ರಚಾರ ಮಾಡುತ್ತಿರುವಂತೆ ಪವಿತ್ರ ಗೋವುಗಳಲ್ಲ ಬದಲಾಗಿ ಎತ್ತುಗಳು..ಹಂದಿಗಳು ! ಇಂತಹ ವಿಷಯಗಳಲ್ಲಿ ಜನಸಾಮಾನ್ಯರು ಶಾಸಕರು ಮಂತ್ರಿಗಳು ಮತ್ತು ರಾಜಕಾರಣದಲ್ಲಿ ಸಕ್ರಿಯವಾಗಿರುವ ಎಲ್ಲರು ಕೇವಲ ಭಾವನಾತ್ಮಕವಾಗಿ ಯೋಚಿಸದೆ ಲಭ್ಯವಿರುವ ಸರಕಾರದ ವಿವಿಧ ಇಲಾಖೆಗಳ ಸಮೀಕ್ಷೆಗಳನ್ನು, ಅಧ್ಯಯನ ವರದಿಗಳನ್ನು ಸ್ವಲ್ಪ ಸಮಯ ಮತ್ತು ಗಮನವಿಟ್ಟು ಓದುವುದು ತುಂಬಾ ಅವಶ್ಯವಿದೆ.

ಏನಿದು ಲೈವ್‌ಸ್ಟಾಕ್ ಸಮೀಕ್ಷೇ..?

ಭಾರತ ಸರ್ಕಾರದ ಪಶುಸಂಗೋಪನ ಇಲಾಖೆಯು ಪ್ರತಿ 5 ವರ್ಷಕ್ಕೊಮ್ಮೆ ದೇಶದಲ್ಲಿರುವ ಎಲ್ಲಾ ರೀತಿಯ ಜಾನುವಾರಗಳ ಕುರಿತು ನಡೆಸುವ ಬೃಹತ್ ಪ್ರಮಾಣದ ಸಮೀಕ್ಷೇ ಇದು ಈ ಹಿಂದೆ 2012– ರಲ್ಲಿ 19 ನೇ ರಾಷ್ಟ್ರೀಯ ಸಮೀಕ್ಷೇಯನ್ನು ನಡೆಸಲಾಗಿತ್ತು ಇದೀಗ 2019 ರಲ್ಲಿ ನಡೆಸಿದ 20 ನೇ ಸಮೀಕ್ಷೆಯ ವರದಿ ಇದೀಗ ವೆಬ್‌ಸೈಟ್ ಲಭ್ಯವಿದೆ.

–ಕೆ. ಮಹಾಂತೇಶ

JANASHAKTHI KANNADA VARA PATRIKE January 4-10, 2021 Price: Rs. 10/- Date of Publication: 1 January 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರೈತ ಹೋರಾಟ ಬೆಂಬಲಿಸಿ ಬೆಂಗಳೂರಿನ ಮೌರ್ಯ ಸರ್ಕಲ್ ನಲ್ಲಿ ನಡೆಯುತ್ತಿರುವ

ರಾಜ್ಯ ಮಟ್ಟದ ಧರಣಿ ಹದಿನಾರನೇ ದಿನಕ್ಕೆ



ಚಾರಿತ್ರಿಕ ದೆಹಲಿ ರೈತ ಹೋರಾಟ ಬೆಂಬಲಿಸಿ ಬೆಂಗಳೂರಿನ ಮೌರ್ಯ ಸರ್ಕಲ್ ನಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಧರಣಿ ಇಂದು ಹದಿನಾರನೇ ದಿನಕ್ಕೆ ಕಾಲಿಟ್ಟಿತು.

ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದ ಇಂದಿನ ಧರಣಿಯನ್ನು ಪ್ರಸಿದ್ಧ ಹಾಡುಗಾರ ಶ್ರೀ ಪಿಚ್ಚಳ್ಳಿ ಶ್ರೀನಿವಾಸ್ ರವರು ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದ ಎಸ್.ಜಿ. ವಾಸುದೇವ ರವರ ರೈತ ಹೋರಾಟ ಕುರಿತ ಚಿತ್ರವುಳ್ಳ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಉದ್ಘಾಟಿಸಿದರು.

ನಂತರ ಮಾತಾನಾಡಿದ ಅವರು ಕರೋನಾ ಭಯದ ಜೊತೆಗೆ ಪ್ರಜಾಪ್ರಭುತ್ವ ಅಭಿವ್ಯಕ್ತಿಯು ಪ್ರಸ್ತುತ ಸರ್ಕಾರದಲ್ಲಿ ದಬ್ಬಾಳಿಕೆಗೆ ತುತ್ತಾಗುತ್ತಿರುವ ಭಯವೂ ಸೇರಿರುವುದರಿಂದ ಈ ರೈತ ವಿರೋಧಿ ಕಾಯ್ದೆಗಳ ವಿರುದ್ಧ ಧ್ವನಿ ಎತ್ತಲು ಎಲ್ಲರಿಗೂ ಸಾಧ್ಯವಾಗುತ್ತಿಲ್ಲ. ಆದರೂ ರೈತರು, ಕಾರ್ಮಿಕರು ಕಲಾವಿದರು, ಸಾಹಿತಿಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಬೀದಿಗಳಿದಿರುವುದು ಅಭಿನಂದನಾರ್ಹ ಎಂದು ಹೇಳಿದರು.

ದೆಹಲಿಯ ನಾಲ್ಕು ಡಿಗ್ರಿಗಿಂತ ಕಡಿಮೆ ಉಷ್ಣಾಂಶದ ಕೊರೆಯುವ ಚಳಿಯಲ್ಲಿ ಮಕ್ಕಳು, ವೃದ್ದರೂ ಸೇರಿದಂತೆ ಲಕ್ಷಾಂತರ ಸಂಖ್ಯೆಯಲ್ಲಿ ಪ್ರತಿಭಟಿಸುತ್ತಿದ್ದಾರೆ. ದೇಶದಾದ್ಯಂತ ತಮ್ಮದೇ ಆದ ಅಭಿವ್ಯಕ್ತಿಗಳಲ್ಲಿ ಸಾಹಿತಿ –ಕಲಾವಿದ – ಬುದ್ದೀಜೀವಿಗಳ ಬೆಂಬಲ ಮತ್ತಷ್ಟು ಬೆಳೆಯಲಿ ಎಂದು ಆಶಿಸಿದರು.

ಪ್ರಸಿದ್ಧ ಸಿನಿಮಾ ನಿರ್ದೇಶಕ, ನಿರ್ಮಾಪಕ ಬಿ ಸುರೇಶ್ ಮಾತಾನಾಡಿ ರಂಗಭೂಮಿಯ ಬಹುತ್ವ ಧರ್ಮ ,ಜಾತ್ಯಾತೀತ ಚೈತನ್ಯ ಹಾಗೂ ಪ್ರತಿಭಟನಾ ಧೋರಣೆಗಳನ್ನು ಬಳಸಿಕೊಂಡೇ ಈಗ ನಡೆಯುತ್ತಿರುವ ರೈತ ಹೋರಾಟದ ಜೊತೆ ನಿಲ್ಲಬೇಕು ಎಂದು ಕರೆ ನೀಡಿದರು.

ಬಂಡಾಯ ಸಾಹಿತ್ಯ ಸಂಘಟನೆಯ ಡಾ.ಸುಕನ್ಯಾ ಮಾರುತಿ,ಆರ್ ಜಿ ಹಳ್ಳಿ ನಾಗರಾಜ್, ರಂಗಾರೆಡ್ಡಿಕೋಡಿರಾಂಪುರ, ಲೇಖಕರಾದ ಡಾ.ಬಿ.ಆರ್ ಮಂಜುನಾಥ್ ಸಮುದಾಯದ ಸಿ.ಕೆ.ಗುಂಡಣ್ಣ, ಕೆ.ಎಸ್ ವಿಮಲಾ, ಶಶಿಧರ್ ಆವಿಷ್ಕಾರ ದ ಡಾ.ಎಸ್ ಕೆ ಶೆಟ್ಟಿ ಮುಂತಾದವರು ಮಾತಾನಾಡಿದರು.

ಪ್ರತಿಭಟನಾ ಧರಣಿಯಲ್ಲಿ ಕಲಾವಿದರು ಹಾಡುಗಳನ್ನು ಹಾಗೂ ಬೀದಿನಾಟಕವನ್ನು ಪ್ರಸ್ತುತ ಪಡಿಸಿದರು.

ಪ್ರತಿಭಟನಾ ಧರಣಿಯ ನೇತೃತ್ವವನ್ನು ಸಮುದಾಯದ ಎಸ್ ಸುರೇಂದ್ರ ರಾವ್, ಕಾವ್ಯ ಅಚ್ಯುತ್, ಜಿ.ಸಿ.ಶಶಿಧರ್, ಶಶಿಕಾಂತ್ ಕಾರುಣ್ಯದ ಎ ಗೋಪಿನಾಥ್, ಶೇಖರಗೌಡ ಮಾಲಿ ಪಾಟೀಲ್ ಜೆಸಿಟಿಯು ರಾಜ್ಯ ಸಂಚಾಲಕ ಕೆ.ವಿ.ಭಟ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ,ಆರ್ ಕೆ ಎಸ್ ಮುಖಂಡ ಶಿವಪ್ರಕಾಶ್, ಕರ್ನಾಟಕ ಜನ ಶಕ್ತಿ ಸಂಘಟನೆಯ ಸಿರಿಮನೆ ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ಟಿ ಯಶವಂತ ಮುಂತಾದವರು ವಹಿಸಿದ್ದರು.

ದಲಿತ ಹಕ್ಕುಗಳ ಹೋರಾಟ ಸಮಿತಿ, ದೇವದಾಸಿ ವಿಮೋಚನಾ ಸಂಘಟನೆ ಹಾಗೂ ಮಸಣ ಕಾರ್ಮಿಕರ ಸಂಘ ಗಳ ಕಾರ್ಯಕರ್ತರು ಭಾಗವಹಿಸಿದ್ದ ಇಂದಿನ ಧರಣಿಯನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ರವರು ಉದ್ಘಾಟಿಸಿದರು.

ಈಗ ದೇಶದಾದ್ಯಂತ ಎದ್ದಿರುವ ಈ ಚಳುವಳಿಯ ಪ್ರಧಾನ ಪ್ರಶ್ನೆ ಭೂಮಿ, ನಮಗೆ ಪ್ರಗತಿಪರ ಭೂಸುಧಾರಣೆ ಬೇಕು ಆದರೆ ರೈತ ವಿರೋಧಿಯಾದ ತಿದ್ದುಪಡಿಗಳು ಬೇಡ. ದೇಶದ ಪಶ್ಚಿಮ ಬಂಗಾಳ, ಕೇರಳ ಮುಂತಾದ ರಾಜ್ಯಗಳಲ್ಲಿ ನಡೆದ ಭೂಸುಧಾರಣೆಯಿಂದ ಕೆಲವು ದಲಿತರು ಭೂಮಿಯನ್ನು ಪಡೆದಿದ್ದರು.

ಆದರೆ ದಲಿತರ ಶತಮಾನಗಳ ಭೂಮಿಯ ಕನಸನ್ನ ನುಚ್ಚು ನೂರು ಮಾಡಲು ಮೋದಿ ಸರ್ಕಾರ ಹೊರಟಿದೆ. ದಲಿತರು ಭೂಹೀನರು, ದುರ್ಬಲರಾಗಿರುವುದರಿಂದಲೇ ಅವರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ತಂದರೆ ಬಡವರಿಗೆ ಸುಲಭವಾಗಿ ಅಗತ್ಯವಸ್ತುಗಳು ರೇಷನ್ ಡಿಪೋಗಳ ಮೂಲಕ ಸಿಗುವುದಿಲ್ಲ. ಇದರಿಂದ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳು ಲೂಟಿ ಮಾಡಲು ಅವಕಾಶವಾಗುತ್ತದೆ. ಇಂತಹ ಜನವಿರೋದಿ ಕಾಯ್ದೆಗಳನ್ನು ಸಂಪೂರ್ಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಡಿಸೆಂಬರ್ 16 ರಿಂದ ಇವತ್ತಿನ ದಿನದ ವರೆಗೆ ನಿರಂತರವಾಗಿ ನಡೆಯುತ್ತಿರುವ ಈ ಅನಿರ್ದಿಷ್ಟಾವಧಿ ಧರಣಿಯನ್ನು ಇಂದಿಗೆ ಮುಕ್ತಾಯಗೊಳಿಸಿ ಮುಂದಿನ ಹಂತದ ಹೋರಾಟದ ರೂಪು–ರೇಷೆ ಚರ್ಚಿಸಲು ಅನಿರ್ದಿಷ್ಟಾವಧಿ ಧರಣಿಯಲ್ಲಿ ಭಾಗವಗಹಿಸಿ ಬೆಂಬಲಿಸಿರುವ ಎಲ್ಲಾ ಸಂಘಟನೆಗಳ ಮುಖಂಡರುಗಳ ಸಭೆ ನಡೆಯಲಿದೆ ಎಂದು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಕರ್ನಾಟಕ ರಾಜ್ಯ ಸಂಚಾಲಕ ಜಿ ಸಿ ಬಯ್ಯಾರೆಡ್ಡಿ ತಿಳಿಸಿದ್ದಾರೆ.

ಇಂದಿನ ಪ್ರತಿಭಟನಾ ಧರಣಿ ನೇತೃತ್ವವನ್ನು ದಲಿತ ಹಕ್ಕುಗಳ ಹೋರಾಟ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ, ಸಹ ಸಂಚಾಲಕರಾದ ಬಿ.ರಾಜಶೇಖರ ಮೂರ್ತಿ, ಮಹದೇವ್, ರಾಜಣ್ಣ ದೇವದಾಸಿ ವಿಮೋಚನಾ ಸಂಘಟನೆ ರಾಜ್ಯ ಅಧ್ಯಕ್ಷೆ ಬಿ.ಮಾಳಮ್ಮ, ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಯು ಬಸವರಾಜು, ಮುಖಂಡರಾದ ಹೆಚ್ ಆರ್ ನವೀನ್ ಕುಮಾರ್, ಟಿ ಯಶವಂತ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜಿಎಂ ವೀರಸಂಗಯ್ಯ ಕರ್ನಾಟಕ ಜನಶಕ್ತಿ ಸಂಘಟನೆಯ ವರದರಾಜ್, ರವಿ ಮೋಹನ್ ಆರ್ ಕೆ ಎಸ್ ನ ಶಿವಪ್ರಕಾಶ್, ಜೆಸಿಟಿಯು ರಾಜ್ಯ ಸಂಚಾಲಕ ಕೆ.ವಿ.ಭಟ್ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮುಂತಾದವರು ವಹಿಸಿದ್ದರು.





ಹೊಸ ವರ್ಷ ಹೊಸ ಪ್ರತಿಜ್ಞೆ: ಕೇಂದ್ರದ ಕಾರ್ಮಿಕ ಕಾಯ್ದೆ ಪ್ರತಿ ಸುಟ್ಟ ಕಾರ್ಮಿಕರು



ಕೇಂದ್ರ ಸರಕಾರದ ರೈತ ಮತ್ತು ಕಾರ್ಮಿಕ ವಿರೋಧಿ ಕಾಯ್ದೆಗಳ ಪ್ರತಿಯನ್ನು ಸುಟ್ಟು ಹಾಕುವ ಮೂಲಕ ಸಿಐಟಿಯು ಹೊಸ ವರ್ಷಾಚರಣೆಯನ್ನು ಆಚರಿಸಿದೆ. ಹೊಸ ವರ್ಷ ಹೊಸ ಪ್ರತಿಜ್ಞೆ ಎಂಬ ಘೋಷಣೆಯೊಂದಿಗೆ ಕೇಂದ್ರ ಸರಕಾರದ ಕಾರ್ಮಿಕ ರೈತ ವಿರೋಧಿ ಕಾಯ್ದೆಗಳ ಪ್ರತಿಯನ್ನು ರಾಜ್ಯವ್ಯಾಪಿ ಧಹಿಸಿದ್ದು ವಿಶೇಷವಾಗಿತ್ತು.

ಮಂಡ್ಯ, ಹುಬ್ಬಳ್ಳಿ, ರಾಮನಗರ, ಮೈಸೂರು, ಕಲಬುರ್ಗಿ, ಕೋಲಾರ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಮೈಸೂರು, ತುಮಕೂರು ಸೇರಿದಂತೆ ಅನೇಕ ಕಡೆಗಳಲ್ಲಿ ಪ್ರತಿಭಟನೆ ನಡೆದಿದೆ. ರೈತ–ಕಾರ್ಮಿಕ ವಿರೋಧಿ ಮಸೂದೆಗಳನ್ನು ವಾಪಸ್ಸು ಪಡೆಯಬೇಕು, ಪ್ರತಿ ಕುಟುಂಬಕ್ಕೆ ಮಾಸಿಕ 7500ರೂ ನೀಡಲು ಕೇಂದ್ರ ಸರಕಾರ ಮುಂದಾಗಬೇಕು ಎಂದು ಆಗ್ರಹಿಸಲಾಯಿತು.

ತುಮಕೂರಿನಲ್ಲಿ ಬೆಳಗ್ಗೆ 5 ಗಂಟೆಗೆ ಪೌರ ಕಾರ್ಮಿಕರು "ಕಾರ್ಮಿಕ ವಿರೋಧಿ" ಕಾಯ್ದೆಯ ಪ್ರತಿಯನ್ನು ಧಹಿಸಿ ಕೆಲಸವನ್ನು ಆರಂಬಿಸಿದ್ದು ವಿಶೇಷವಾಗಿತ್ತು. ಹುಬ್ಬಳ್ಳಿಯಲ್ಲಿ ಎಪಿಎಂಸಿ ಕಾರ್ಮಿಕರು ಕೇಂದ್ರ ಕಾರ್ಮಿಕ ಕಾಯ್ದೆಯ ಪ್ರತಿಯನ್ನು ಸುಟ್ಟು ಹಾಕುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಅನೇಕ ಕಡೆ ಅಂಗನವಾಡಿ ನೌಕರರು ಸ್ಥಳದಲ್ಲಿಯೇ ಪ್ರತಿಭಟನೆ ನಡೆಸಿ ಕೆಲಸ ಆರಂಭಿಸಿದ್ದು ವಿಶೇಷವಾಗಿತ್ತು. ಬಿಸಿಯೂಟ, ಹಮಾಲಿ ಕಾರ್ಮಿಕರು, ಕಾರ್ಖಾನೆಯ ಕಾರ್ಮಿಕರು ಇಂದಿನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**